ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶುಕ್ರವಾರ, ದಿನಾಂಕ ೨೮ನೇ ಫೆಬ್ರುವರಿ ೧೯೮೬ ಫಾಲ್ಗುಣ/೯, ೧೯೦೭ ಶಕ.

ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಸದನವು ಬೆಳಿಗ್ಗೆ ೯-೦೦ ಗಂಟೆಗೆ ಸಮಾವೇಶಗೊಂಡಿತು.

[ಮಾನ್ಯ ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್)ರವರು ಪೀಠವನ್ನು ಅಲಂಕರಿಸಿದ್ದರು].

ವಿತ್ತೀಯ ಕಾರ್ಯಕಲಾಪಗಳು.

೧೯೮೬-೮೭ ನೇ ಸಾಲಿನ ಸಹಕಾರ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಮತ್ತು ವಕ್ಫ್ ಬೇಡಿಕೆಗಳ ಮೇಲಿನ ಚರ್ಚೆ.

ಅಧ್ಯಕ್ಷರು.—ಈಗ ಸಹಕಾರ ಇಲಾಖೆಯ ಮೇಲಿನ ಚರ್ಚೆಗೆ ಸಹಕಾರ ಮಂತ್ರಿಗಳ ಉತ್ತರ.

ಶ್ರೀ ಆರ್. ಎಲ್. ಜಾಲಪ್ಪ (ಮಾನ್ಯ ಸಹಕಾರ ಮಂತ್ರಿಗಳು).—ಸನ್ಮಾನ್ಯ ಸಭಾಧ್ಯಕ್ಷರೆ, ನಿನ್ನೆಯ ದಿವಸ ನನ್ನ ಖಾತೆಯ ಮೇಲೆ ನಡೆದಂತಹ ಚರ್ಚೆಯಲ್ಲಿ ಸದನದ ಮಾನ್ಯ ಸದಸ್ಯರು ಅನೇಕರು ಮಾತನಾಡಿ ಈ ಖಾತೆಯ ನ್ಯೂನತೆಗಳನ್ನು ಎತ್ತಿ ತೋರಿಸಿ, ಅನೇಕ ಸಲಹೆಗಳನ್ನು ಕೂಡಾ ಕೊಟ್ಟಿದ್ದಾರೆ. ಅವರೆಲ್ಲರಿಗೂ ನಾನು ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಅಧ್ಯಕ್ಷರೆ, ಈ ಸಹಕಾರ ಇಲಾಖೆಯು ಸರಕಾರಿ ಇಲಾಖೆ ಅಲ್ಲ. ಇದು ಜನಗಳ, ಜನತೆಯ ಒಂದು ಆಂದೋಲನ. ಆದರೆ ದುರಾದೃಷ್ಟವಶಾತ್, ಸನ್ಮಾನ್ಯ ಕೆ. ಹೆಚ್. ಪಾಟೀಲ್‌ರವರು ಹೇಳಿದ ಹಾಗೆ ಇಷ್ಟು ವರ್ಷಗಳಾದರೂ ಕೂಡಾ ನಮ್ಮ ಕರ್ನಾಟಕ ರಾಜ್ಯದಲ್ಲಿ ಸಹಕಾರಿ ಸಂಘಗಳು ತಮ್ಮ ಕಾಲ ಮೇಲೆ ತಾವು ನಿಲ್ಲುವ ಶಕ್ತಿಯನ್ನು ಗಳಿಸಿಕೊಂಡಿಲ್ಲ. ಇದಕ್ಕೆ ಕಾರಣ, ಅದರಲ್ಲಿನ ಸದಸ್ಯರ ಒಂದು ತಪ್ಪು ತಿಳುವಳಿಕೆಯೋ ಅಥವಾ ಬೇಜವಾಬ್ದಾರಿ ತನವೋ ಎಂದು ತಿಳಿಯುತ್ತಿಲ್ಲ. ಏನೇ ಆಗಲೀ. ಸದಸ್ಯರುಗಳ ಸಕ್ರಿಯ ಪಾತ್ರವು ಸಹಕಾರಿ ಸಂಘಗಳಲ್ಲಿ ಇಲ್ಲದಿದ್ದರೆ ಅವುಗಳು ಮುನ್ನಡೆಯುವುದಕ್ಕೆ ಕಷ್ಟವಾಗುತ್ತದೆ ಮತ್ತು ಅದರ ಉಪಯೋಗವೂ ಆಗುವುದಿಲ್ಲ ಎಂದು ಹೇಳಬಯಸುತ್ತೇನೆ. ಕಳೆದ ೧೯೮೪-೮೫ ಈ ವರ್ಷ ಸ್ವಲ್ಪಮಟ್ಟಿಗೆ ಈ ಕುರಿತು ಅಭಿವೃದ್ಧಿಯಾಗಿದೆ. ಈ ಸಹಕಾರಿ ಆಂದೋಳನದಲ್ಲಿ ಅದರ ಪಕ್ಷಿನೋಟವನ್ನು ನಾನು ಇಲ್ಲಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ೧೯೮೪ರ ಜೂನ್ ಮಾಹೆಯ ಅಂತ್ಯದಲ್ಲಿ ೨೩,೧೨೦ ಸಂಸ್ಥೆಗಳು ನಮ್ಮ ರಾಜ್ಯದಲ್ಲಿ ಇದ್ದುವು. ಈಗ ಅಂದರೆ ೧೯೮೫ ರಲ್ಲಿ ೨೩,೪೫೫ ಸಹಕಾರ ಸಂಸ್ಥೆಗಳು ಆಗಿವೆ. ಇದರ ಜೊತೆಗೆ ೪೮೪೦ ಸಂಘಗಳು ಸಮಾಪನಾ ಹಂತದಲ್ಲಿದ್ದು ಸುಮಾರು ೩೧೯೪ ಸಂಘಗಳು ನಿಷ್ಕ್ರಿಯವಾಗಿವೆ.

ಈ ಸಂಘಗಳಲ್ಲಿನ ಸದಸ್ಯತ್ವದ ಸಂಖ್ಯೆಯು ೧೯೮೪ ರಲ್ಲಿ ೯೬ ಲಕ್ಷದ ೪೫ ಸಾವಿರ ಇದ್ದರೆ, ೧೯೮೫ ರಲ್ಲಿ ೯೭ ಲಕ್ಷದ ೩೧ ಸಾವಿರಗಳಷ್ಟು ಆಗಿದೆ.

ಶೇರು ಬಂಡವಾಳವು ೧೯೮೪ರಲ್ಲಿ ೨೫೭.೨೧ ಕೋಟಿ ರೂಪಾಯಿಗಳು ಇದ್ದುದು, ೧೯೮೫ ರಲ್ಲಿ ೨೬೯.೫೩ ಕೋಟಿ ರೂಪಾಯಿಗಳು ಆಗಿವೆ.

ಡಿಪಾಸಿಟ್ಸ್, ಕಳೆದ ವರ್ಷ ೧೯೮೪ರಲ್ಲಿ ೫೨೮.೮೦ ಇದ್ದರೆ, ಈ ವರ್ಷ ೫೪೩.೧೬ ಕೋಟಿ ರೂಪಾಯಿಗಳಷ್ಟಾಗಿದೆ.

ವರ್ಕಿಂಗ್ ಕ್ಯಾಪಿಟಲ್ ೧೯೮೪ರಲ್ಲಿ ೨,೧೪೫.೯೯ ಇದ್ದುದು ಈಗ, ೧೯೮೫ ಜೂನ್‌ಗೆ ೨೨೪೮.೭೯ ಕೋಟಿ ರೂಪಾಯಿಗಳಷ್ಟು ಆಗಿದೆ.

ಅಡ್ವಾನ್ಸ್ ಕೂಡಾ ೧೯೮೪ರಲ್ಲಿ ೬೦೯.೫೯ ಇದ್ದುದು ೧೯೮೫ರಲ್ಲಿ ೬೧೨.೧೦ ಕೋಟಿ ರೂಪಾಯಿಗಳಷ್ಟು ಆಗಿದೆ.

೧೯೮೨–೮೩ರಲ್ಲಿ ಸಾಲ ಕೊಟ್ಟಿರುವುದು ೧೧೪ ಕೋಟಿ ರೂಪಾಯಿಗಳು. ಅದರಲ್ಲಿ ಸಣ್ಣ ರೈತರುಗಳಿಗೆ ೪೪ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ೧೯೮೩–೮೪ರಲ್ಲಿ ೧೪೭.೬೧ ಕೋಟಿ ರೂಪಾಯಿಗಳ ಒಟ್ಟು ಸಾಲ ಇದ್ದರೆ ಅದರಲ್ಲಿ ೫೭ ಕೋಟಿ ರೂಪಾಯಿಗಳನ್ನು ಸಣ್ಣ ರೈತರುಗಳಿಗೆ ಕೊಟ್ಟಿದ್ದೇವೆ. ೧೯೮೪–೮೫ರಲ್ಲಿ ೧೫೮ ಕೋಟಿ ರೂಪಾಯಿಗಳ ಸಾಲ ಒದಗಿಸಿದರೆ, ಅದರಲ್ಲಿ ಸಣ್ಣ ರೈತರುಗಳಿಗೆ ೬೦.೫೫ ಕೋಟಿ ರೂಪಾಯಿಗಳ ಹಣವನ್ನು ಕೊಟ್ಟಿದ್ದೇವೆ. ೧೯೮೫–೮೬ರಲ್ಲಿ ೧೩೦ ಕೋಟಿ ರೂಪಾಯಿಗಳನ್ನು ಒದಗಿಸಿದರೆ, ಅದರಲ್ಲಿ ೬೭ ಕೋಟಿ ರೂಪಾಯಿಗಳನ್ನು ಸಣ್ಣ ರೈತರುಗಳಿಗೆ ಒದಗಿಸಿದ್ದೇವೆ.

ಹಾಗೆಯೇ ರಿಕವರಿ ಶೇಕಡವಾರು ಕಳೆದ ವರ್ಷ ಅಂದರೆ ೧೯೮೩–೮೪ರಲ್ಲಿ ಅಲ್ಪಾವಧಿ ಸಾಲ ೫೩.೫೦ ಲಕ್ಷ ರೂಪಾಯಿಗಳು ಮಧ್ಯಮಾವಧಿ ಸಾಲ ೭೭.೯೦ ಲಕ್ಷ ರೂಪಾಯಿಗಳು ದೀರ್ಘಾವಧಿ ಸಾಲ ೬೫.೪೭ ಲಕ್ಷ ರೂಪಾಯಿಗಳು. ಅದೇ ರೀತಿ ೧೯೮೪–೮೫ರಲ್ಲಿ ಅಲ್ಪಾವಧಿ ಸಾಲ ವಸೂಲಾತಿಯು ೫೯. ೨೧ ಲಕ್ಷ ರೂಪಾಯಿಗಳು, ಮಧ್ಯಮಾವಧಿ ಸಾಲ ೩೦.೪೯ ಲಕ್ಷ ರೂಪಾಯಿಗಳು. ದೀರ್ಘಾವಧಿ ಸಾಲ ೫೭.೨೮ ಲಕ್ಷ ರೂಪಾಯಿಗಳು ಆಗಿದೆ,

೧೯೮೪–೮೫ರಲ್ಲಿ ನಾವು ಅಲ್ಪಾವಧಿ ಸಾಲಕ್ಕೆ ೩೯೩.೬೬ ಲಕ್ಷ ರೂಪಾಯಿಗಳಷ್ಟು ಬಡ್ಡಿ ರಿಯಾಯಿತಿಯನ್ನು ಬಿಟ್ಟಿದ್ದೇವೆ. ದೀರ್ಘಾವಧಿ ಸಾಲಕ್ಕೆ ೨೦೫ ಲಕ್ಷ ರೂಪಾಯಿಗಳ ಬಡ್ಡಿಯನ್ನು ಬಿಟ್ಟಿದ್ದೇವೆ. ಹಾಗೆಯೇ ವಿಫಲವಾದ ಬಾವಿಗಳಿಗೆ ಸಹಾಯ ಧನವನ್ನು ನೀಡುತ್ತಲಿದೆ. ಸಾಲದ ಅಸಲು ಬಡ್ಡಿಯನ್ನು ವಜಾ ಮಾಡಿದ್ದೇವೆ. ಈ ಕುರಿತು ೨೮ ಸಾವಿರ ಬಾವಿಗಳಿಗೆ ಅರ್ಜಿಗಳು ಬಂದಿವೆ. ಇದರಲ್ಲಿ ಈಗಾಗಲೇ ನಾವು ೨೨,೬೦೦ ಬಾವಿಗಳಿಗೆ ಹಣವನ್ನು ಕೊಟ್ಟಿದ್ದೇವೆ. ಉಳಿದ ಅರ್ಜಿಗಳು ವಿಚಾರಣಾ ಹಂತದಲ್ಲಿ ಇವೆ. ೧೯೮೪–೮೫ರಲ್ಲಿ ೧೩೦ ಕೋಟಿ ರೂಪಾಯಿಗಳು ಅಲ್ಪಾವಧಿ ಸಾಲ, ೧೭ ಕೋಟಿ ರೂಪಾಯಿಗಳು ಮಧ್ಯಮಾವಧಿ ಸಾಲ, ದೀರ್ಘಾವಧಿ ಸಾಲವು ೩೫ ಕೋಟಿ ರೂಪಾಯಿಗಳು, ಈಗ ಕ್ಷಾಮ ಜಾಸ್ತಿ ಇರುವುದರಿಂದ, ೧೯೮೫–೮೬ಕ್ಕೆ ನಾವು ಕೊಡಬೇಕಾದುದನ್ನು ಇನ್ನೂ ನಿಗದಿ ಮಾಡಿಲ್ಲ. ಆದರೆ ದುರಾದೃಷ್ಟವಶಾತ್, ರಾಜ್ಯದಲ್ಲಿ ಭೀಕರ ಬರಗಾಲ ಇದ್ದುದರಿಂದ ಹೆಚ್ಚಿನ ಅಲ್ಪಾವಧಿ ಸಾಲವನ್ನು ಕೊಡಲಿಕ್ಕೆ ಆಗಲಿಲ್ಲ. ಈಗ ಕೊಟ್ಟಿರುವ ಅಲ್ಪಾವಧಿ ಸಾಲ ೯೬.೫೦ ಕೋಟಿ ರೂಪಾಯಿಗಳು. ಅದರಲ್ಲಿ ಸಣ್ಣ ರೈತರುಗಳಿಗೆ ೩೩.೯೭ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಮಧ್ಯಮಾವಧಿ ಸಾಲ ೪.೧೪ ಕೋಟಿ ರೂಪಾಯಿಗಳು ಅದರಲ್ಲಿ ಸಣ್ಣ ರೈತರುಗಳಿಗೆ ೧ ಕೋಟಿ ೫೬ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ದೀರ್ಘಾವಧಿ ಸಾಲ ೩೩.೨೭ ಕೋಟಿ ರೂಪಾಯಿಗಳಲ್ಲಿ ೧೮ ಕೋಟಿ ೭ ಲಕ್ಷ ರೂಪಾಯಿಗಳನ್ನು ಸಣ್ಣ ರೈತರುಗಳಿಗೆ ಕೊಟ್ಟಿದ್ದೇವೆ. ಇದರ ಜೊತೆಗೆ ನಮಗೆ ಕ್ಷಾಮ ಪರಿಸ್ಥಿತಿ ಇರುವುದರಿಂದ ಯಾರು ಹುಲ್ಲನ್ನು ಬೆಳೆಯುತ್ತಾರೆ ಅವರಿಗೆ ಪ್ರತಿ ಜಿಲ್ಲಾವಾರು ೫೦ ಲಕ್ಷ ರೂಪಾಯಿಗಳನ್ನು ಅಲ್ಪಾವಧಿ ಸಾಲವನ್ನಾಗಿ ಒದಗಿಸುತ್ತಾ ಇದ್ದೇವೆ. ಅದರಂತೆ ೭೨ ಲಕ್ಷ ರೂಪಾಯಿಗಳನ್ನು ಮೇವು ಬೆಳೆಯುವುದಕ್ಕಾಗಿ ಕೊಟ್ಟಿದ್ದೇವೆ. ಹಾಗೆಯೇ ಅಕ್ಕಿ ಸರಬರಾಜು, ಮೇವು ಸರಬರಾಜುಗಳಿಗೆ ಬೇಕಾದಷ್ಟು ಹಣವನ್ನು ಒದಗಿಸಿದ್ದೇವೆ.

ಈಗಾಗಲೇ ನಮ್ಮ ಮಾನ್ಯ ಮುಖ್ಯಮಂತ್ರಿಯವರು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ, ಸತತವಾಗಿ ಮೂರು ವರ್ಷಗಳ ಕಾಲ, ಯಾವ ತಾಲ್ಲೂಕಿನಲ್ಲಿ ಕ್ಷಾಮ ಇದೆಯೋ ಅಂತಹ ಕಡೆಗಳಲ್ಲಿನ ಸಾಲಕ್ಕೆ ಬಡ್ಡಿಯನ್ನು ವಜಾ ಮಾಡುತ್ತೇವೆ ಎಂದು ಈಗಾಗಲೇ ಹೇಳಿದ್ದಾರೆ. ಹಾಗೆಯೇ ದೊಡ್ಡ ರೈತರೂ ಸಹ ತಮ್ಮ ಸಾಲವನ್ನು ಪರಿವರ್ತನೆ ಮಾಡಿಕೊಳ್ಳಬಹುದು ಮತ್ತು ೭ ರೂಪಾಯಿಗಳ ಬಡ್ಡಿಯನ್ನು ಕೊಟ್ಟರೆ ಸಾಕು ಎಂದು ನಾನು ಈಗಾಗಲೇ ಹೇಳಿದ್ದೇನೆ. ಇದರ ಜೊತೆಗೆ ರಾಜ್ಯ ಭೂ ಅಭಿವೃದ್ಧಿ ಬ್ಯಾಂಕಿನಿಂದ ನಮ್ಮ ಸರ್ಕಾರ ಕೆಲವು ಹೊಸ ಹೊಸ ಯೋಜನೆಗಳನ್ನು ಕೈಗೊಂಡಿದೆ. ಡ್ರಿಪ್

ಇರಿಗೇಷನ್ ಮಾಡಿಕೊಳ್ಳುವವರಿಗೆ ನಮ್ಮ ಈ ಭೂ ಅಭಿವೃದ್ಧಿ ಬ್ಯಾಂಕಿನಿಂದ ಸಾಲವನ್ನು ಕೊಡುವಂತಹ ಯೋಜನೆಯನ್ನು ಜಾರಿಗೆ ತಂದಿದ್ದೇವೆ. ಮತ್ತು ಪವರ್ ಕಡಿಮೆ ಇರುವುದರಿಂದ ರೈತರು ಯಾರಾದರೂ ಮುಂದೆ ಬಂದು ನೀರಿನ ಸ್ಟೋರೇಜ್ ಟ್ಯಾಂಕ್‌ಗಳನ್ನು ಕಟ್ಟಿಕೊಳ್ಳುತ್ತೇವೆಂದರೆ ಅಂತಹವರಿಗೂ ಸಹ ನಾವು ಸಾಲವನ್ನು ಕೊಡುವ ವ್ಯವಸ್ಥೆಯನ್ನು ಮಾಡಿದ್ದೇವೆ. ಇನ್ನು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್‌ಗಳು ಇರುವಂತಹ ಕಡೆಗಳಲ್ಲಿ ಯಾರು ೧೦೦ಕ್ಕೆ ೪೦ರಷ್ಟು ವಸೂಲಿ ಮಾಡಿರುತ್ತಾರೋ ಅಂತಹವರಿಗೆ ಯಾವುದೇ ಲಿಮಿಟ್ ಇಲ್ಲದ ನೀರಾವರಿ ಯೋಜನೆಗಳಾದಂಥ ಏತ ನೀರಾವರಿ, ಬೋರ್‌ವೆಲ್ಸ್ ಮತ್ತು ಓಪನ್ ವೆಲ್‌ಗಳನು ತೆಗೆಸಿಕೊಳ್ಳುವುದಕ್ಕೆ ಹಣಕಾಸಿನ ಕೊರತೆ ಇಲ್ಲದೆ ಹಣವನ್ನು ಈ ಯೋಜನೆಯಿಂದ ಕೊಡುತ್ತೇವೆ. ಸ್ಕೈ ಇಜ್ ನಾಟ್ ಇನ್ ಲಿಮಿಟ್ ಎನ್ನುವ ರೀತಿಯಲ್ಲಿ ನಾವು ಅವರಿಗೆ ಸಾಲವನ್ನು ಕೊಡುತ್ತೇವೆ. ಇನ್ನು ಡಾರ್ಕ್ ಏರಿಯಾ ಎಂದು ಎಲ್ಲೆಲ್ಲಿ ಜಿಯಾಲಜಿಸ್ಟ್‌ಗಳು ಹೇಳಿದ್ದಾರೋ ಅಂಥ ಕಡೆಗಳಲ್ಲಿ ಬೋರ್‌ವೆಲ್‌ಗಳಲ್ಲಿ ಮತ್ತು ಬಾವಿಗಳಲ್ಲಿ ನೀರು ಇಲ್ಲದೆ ಅವರು ಬೆಳೆಸತಕ್ಕಂಥ ದ್ರಾಕ್ಷಿ, ತೆಂಗು, ಅಡಿಕೆ ಇದ್ಯಾದಿ ಬೆಳೆಗಳು ಒಣಗುತ್ತಿದ್ದರೆ, ಅಂತಹ ರೈತರು ಬೋರ್‌ವೆಲ್‌ಗಳನ್ನು ರೀ ಬೋರ್ ಮಾಡಿಸಿಕೊಳ್ಳುವುದಕ್ಕೆ ಮುಂದೆ ಬಂದರೆ ಸರ್ಕಾರದವರು ಸಾಲವನ್ನು ಕೊಡುವ ವ್ಯವಸ್ಥೆ ಸಹ ಮಾಡಿದ್ದೇವೆ. ಇದರ ಜೊತೆಗೆ ಹೊಸ ಬೋರ್‌ವೆಲ್ ತೆಗೆಯುವುದಕ್ಕೂ ಸಹ ಹಣವನ್ನು ಕೊಡುತ್ತೇವೆ. ಈ ಒಂದು ಯೋಜನೆಯನ್ನು ಇತ್ತೀಚಿಗೆ ಹೊಸದಾಗಿ ಮಾಡಿದ್ದೇವೆ. ಇದರ ಜೊತೆಗೆ ಅರಣ್ಯವನ್ನು ಅಭಿವೃದ್ಧಿ ಮಾಡುವುದಕ್ಕೆ ಕೂಡ ನಾವು ಸಾಲವನ್ನು ಕೊಡುತ್ತೇವೆ. ಮತ್ತೆ ಈ ಭೂ ಅಭಿವೃದ್ಧಿ ಬ್ಯಾಂಕ್‌ನಿಂದ ಯಾರು ಸಾಲವನ್ನು ತೆಗೆದುಕೊಂಡು ಬಾವಿಗಳನ್ನು ತೆಗೆಸಿರುತ್ತಾರೋ ಅಂಥವರಿಗೆ ಬೇಗನೆ ವಿದ್ಯುಚ್ಛಕ್ತಿ ಸೌಲಭ್ಯವನ್ನು ಕಲ್ಪಿಸಿಕೊಡುವ ಸಲುವಾಗಿ ಬ್ಯಾಂಕ್‌ನವರೇ ವಿದ್ಯುಚ್ಛಕ್ತಿ ಮಂಡಲಿಗೆ ೧೦ ಸಾವಿರ ರೂಪಾಯಿಗಳ ಡಿಪಾಜಿಟ್ ಇಡುವುದಕ್ಕೆ ಮುಂದೆ ಬಂದಿದ್ದಾರೆ. ಈ ವಿಷಯವಾಗಿ ನಾವು ನಬಾರ್ಡ್ ಜೊತೆಯಲ್ಲಿ ಸಮಾಲೋಚನೆ ಮಾಡಿದಾಗ ಅವರು ನಮಗೆ ೨೦ ಕೋಟಿ ರೂಪಾಯಿಗಳ ಸಾಲವನ್ನು ಕೊಡುವುದಾಗಿ ತಿಳಿಸಿದ್ದಾರೆ. ಇನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಅವರ ಆಯವ್ಯಯ ಭಾಷಣದಲ್ಲಿ ಹೇಳಿರುವಂತೆ ಕಾಂಪ್ರಹೆನ್ಸೀವ್ ಪ್ರಾಜೆಕ್ಟ್ ಮಾಡಬೇಕು. ಇದೇ ಮಾತನ್ನು ನಿನ್ನೆಯ ದಿವಸ ಮಾತನಾಡುತ್ತಾ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಶಿವನಂಜಪ್ಪನವರೂ ಸಹ ಹೇಳಿದರು. ಈ ಕಾಂಪ್ರಹೆನ್ಸೀವ್ ಪ್ರಾಜೆಕ್ಟ್‌ನಲ್ಲಿ ವ್ಯವಸಾಯ ಮಂತ್ರಿಗಳನ್ನು ಹಾಗೂ ಗ್ರಾಮಾಭಿವೃದ್ಧಿ ಸಚಿವರು ಮತ್ತು ಅರಣ್ಯ ಇಲಾಖೆಯ ಸಚಿವರು ಹಾಗೂ ಸಹಕಾರ ಇಲಾಖೆಯ ಸಚಿವರು ಸೇರಿ ಒಂದು ಕಾಂಪ್ರಹೆನ್ಸೀವ್ ಪ್ರಾಜೆಕ್ಟ್ ಮಾಡಿ ಎಂದು ಹೇಳಿದ್ದಾರೆ. ಈಗಾಗಲೇ ನಾವು ಈ ಬಗ್ಗೆ ಒಂದು ಯೋಜನೆಯನ್ನು ತಯಾರು ಮಾಡಿದ್ದೇವೆ. ಇಷ್ಟರಲ್ಲಿಯೇ ನಾವು ಒಂದು ಸಭೆ ಸೇರಿ ತೀರ್ಮಾನ ಮಾಡುವವರಿದ್ದೇವೆ. ಆ ಬಗ್ಗೆ ಏನೇನು ರೂಪುರೇಖೆಗಳು ಇರಬೇಕೆಂದು ಸಹ ನಿರ್ಧರಿಸಿದ್ದೇವೆ. ಇನ್ನು ಕೋ ಆಪರೇಟೀವ್ ಆಡಿಟ್ ಬಗ್ಗೆ ಕೆಲವು ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ ಮಾನ್ಯ ಶಿವನಂಜಪ್ಪನವರು ಸಹ ಈ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ಕೋ ಆಪರೇಟೀವ್ ಆಡಿಟ್ ಡಿಲೇ ಆಗಿದೆ. ಅದನ್ನು ನಾನೂ ಸಹ ಒಪ್ಪಿಕೊಳ್ಳುತ್ತೇನೆ. ಇದಕ್ಕೆ ಮೂಲಭೂತವಾದಂಥ ಕಾರಣವೇನೆಂದರೆ, ಸಿಬ್ಬಂದಿಯ ಕೊರತೆ ಇದೆ. ಆದ್ದರಿಂದ ನಾವು ಈ ಸಾರಿ ಸುಮಾರು ೩೦೦ ಜನರನ್ನು ರಿಕ್ರೂಟ್ ಮಾಡಬೇಕೆಂದು ಇದ್ದೇವೆ. ನಾವು ಈಗಾಗಲೇ ಸುಮಾರು ೧೮, ೪೪೯ ಸಹಕಾರ ಸಂಘಗಳ ಲೆಕ್ಕಪತ್ರಗಳನ್ನು ಆಡಿಟ್ ಮಾಡಿದ್ದೇವೆ. ಕೆಲವು ಸಹಕಾರ ಸಂಘಗಳಲ್ಲಿ ಆಡಿಟ್‌ಗೆ ಬೇಕಾದಂಥ ಪುಸ್ತಕಗಳೇ ಸಿಗುತ್ತಿಲ್ಲ. ಆದ್ದರಿಂದ ನಾವು ಸಹಕಾರ ಸಂಘಗಳ ನಿಯಮ ೧೯೪ರ ಪ್ರಕಾರ ಎಲ್ಲಾ ಕಡೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಮತ್ತು ಯಾವ ಸಹಕಾರ ಸಂಘಗಳು ನಿಷ್ಕ್ರಿಯಗೊಂಡಿವೆ ಆ ಸಹಕಾರ ಸಂಘಗಳ ಬಗ್ಗೆ ಕೂಡ ಸರ್ಕಾರ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತದೆ. ಇನ್ನು ತೂಕ ಮತ್ತು ಅಳತೆಗಳ ಇಲಾಖೆಯ ಬಗ್ಗೆ ಮಾನ್ಯ ಸದಸ್ಯರು ಯಾರೂ ಸಹ ಮಾತನಾಡಲಿಲ್ಲ. ಈ ಸಂಸ್ಥೆ ಬಹಳ ಮುಖ್ಯವಾದಂಥ ಸಂಸ್ಥೆ. ಈ ಸಂಸ್ಥೆ ಮಾನ್ಯ ಸದಸ್ಯರ ಕಣ್ಣಿಗೆ ಬೀಳಲಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ರಾಜ್ಯದಲ್ಲಿ ಗ್ರಾಹಕರಿಗೆ ಈ ಸಂಸ್ಥೆಯಿಂದಲೇ ಬಹಳ ಮೋಸ ನಡೆಯುತ್ತಿರುವುದು. ಈ ಸಂಸ್ಥೆಯಲ್ಲಿ ಮೋಸ ನಡೆಯಲು ಇಷ್ಟೇ ಕಾರಣ. ಒಂದು ಜಿಲ್ಲೆಗೆ ಒಬ್ಬ ಅಸಿಸ್ಟೆಂಟ್ ಕಂಟ್ರೋಲರ್ ಮತ್ತು ನಾಲ್ಕು ತಾಲ್ಲೂಕುಗಳಿಗೆ ಒಬ್ಬ ಇನ್‌ಸ್ಪೆಕ್ಟರ್ ಇರುತ್ತಾರೆ. ಅವರು ಯಾವ ರೀತಿಯಲ್ಲಿ ನೋಡಿಕೊಳ್ಳಬೇಕೆಂದುದನ್ನು ತಾವೇ ಯೋಚನೆ ಮಾಡಿ. ಈ ವರ್ಷ ನಾವು ಸುಮಾರು ೧೦,೯೧೧ ಮೊಕದ್ದಮೆಗಳನ್ನು ಹೂಡಿದ್ದೇವೆ. ಇದರಲ್ಲಿ ದಂಡ ವಸೂಲಿ ಮಾಡಿರುವುದು ಸುಮಾರು ೮,೬೨೧ ರೂಪಾಯಿಗಳು. ಈ ಇಲಾಖೆಯಲ್ಲಿ ನಾನು ಮೊದಲೇ ಹೇಳಿದ

ಹಾಗೆ, ವ್ಯವಸ್ಥೆ ಸರಿಯಾಗಿಲ್ಲ. ನ್ಯಾಯಾಲಯದಲ್ಲಿ ಶಿಕ್ಷೆಯಾಗಿರತಕ್ಕಂಥಾದ್ದು ಸುಮಾರು ೧,೪೫೫ ಜನರಿಗೆ ಮಾತ್ರ. ಈ ಸಾರಿ ನಾವು ಈ ಇಲಾಖೆಯಲ್ಲಿ ಸ್ಕ್ವಾಡ್ ಮಾಡಿದ್ದೇವೆ. ಇವರು ಎಲ್ಲಾ ಕಡೆ ಅನಿರೀಕ್ಷಿತ ಭೇಟಿಯನ್ನು ಕೊಟ್ಟು ತಪಾಸಣೆ ಮಾಡುತ್ತಾರೆ. ಮೊಟ್ಟಮೊದಲನೆಯದಾಗಿ. ನಾವು ಇಂತಹ ಒಂದು ವ್ಯವಸ್ಥೆಯನ್ನು ಹುಬ್ಬಳ್ಳಿಯಲ್ಲಿ ಜಾರಿಗೆ ತಂದಿದ್ದೇವೆ ಇನ್ನೂ ಹಲವಾರು ಕಡೆ ಪ್ರಾರಂಭ ಮಾಡಬೇಕೆಂದು ಸಹ ಇದ್ದೇವೆ. ಈ ಸಂಸ್ಥೆಗೆ ಬೇಕಾಗುವಂತಹ ಮೂರೂವರೆ ಎಕರೆ ಜಮೀನನ್ನು ಸರ್ಕಾರ ಕೇಂದ್ರ ಸರ್ಕಾರಕ್ಕೆ ಜಕ್ಕೂರು ಬಳಿ ಕೊಟ್ಟಿದೆ. ಅಲ್ಲಿ ಕೇಂದ್ರ ಸರ್ಕಾರದವರು ಒಂದು ಪ್ರಯೋಗ ಶಾಲೆಯನ್ನು ತೆರೆಯುವವರಿದ್ದಾರೆಂದು ನಾನು ಬಹಳ ಸಂತೋಷದಿಂದ ಈ ಸದನಕ್ಕೆ ತಿಳಿಸಬಯಸುತ್ತೇನೆ. ಇನ್ನು ನನ್ನ ಇಲಾಖೆಗೆ ಉಗ್ರಾಣಗಳ ಸಂಸ್ಥೆ ಸಹ ಬರುತ್ತಿದೆ. ದಿನಾಂಕ ೩೧–೧–೧೯೮೬ಕ್ಕೆ ಈ ಉಗ್ರಾಣದ ಕೆಪ್ಯಾಸಿಟಿ ಸುಮಾರು ೨,೮೭,೩೬೬ ಟನ್‌ಗಳಷ್ಟು ಇತ್ತು. ಇದರಲ್ಲಿ ಈಗ ಉಪಯೋಗ ಮಾಡಿಕೊಂಡಿರುವುದು ಸುಮಾರು ೨,೦೮,೩೬೬ ಟನ್‌ಗಳಷ್ಟು ಶೇಖರಣೆಯನ್ನು ಮಾಡಿಟ್ಟಿದ್ದೇವೆ. ಈ ಉಗ್ರಾಣಗಳನ್ನು ನಾವು ರಾಜ್ಯದ ಮೂಲೆ ಮೂಲೆಗಳಲ್ಲಿ ತೆರೆಯಬೇಕೆಂದು ಯೋಚನೆ ಮಾಡಿದ್ದೇವೆ. ಆದರೆ ರೀತಿಯಲ್ಲಿ ನಾವು ಈ ಸಾರಿ ಅರಸೀಕೆರೆಯಲ್ಲಿ ತೆಂಗಿನ ಕಾಯಿಯ ಗೋಡೌನ್ ತೆರೆದಿದ್ದೇವೆ. ಮತ್ತು ನಿಪ್ಪಾಣಿಯಲ್ಲಿ ಹೊಗೆಸೊಪ್ಪಿನ ಗೋಡೌನ್ ಅನ್ನು ಸಹ ತೆರೆದಿದ್ದೇವೆ. ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಈಗಾಗಲೇ ಸರ್ವೆಯನ್ನು ಸಹ ನಡೆಸಿದ್ದೇವೆ. ಕೊನೆಯ ಪಕ್ಷ ಈ ಸಾರಿ ಒಂದು ನೂರು ಗೋಡೌನ್‌ಗಳನ್ನು ಕಟ್ಟಬೇಕೆಂದು ಸರ್ಕಾರದ ಯೋಚನೆ ಇದೆ. ಗ್ರಾಮಾಂತರ ಪ್ರದೇಶಗಳ ರೈತರು ತಮ್ಮ ಸರಕುಗಳನ್ನು ಈ ಉಗ್ರಾಣಗಳಲ್ಲಿ ಇಟ್ಟರೆ ಅವರಿಗೆ ಬೇರೆಯವರಿಗೆ ಕೊಡುವ ಚಾರ್ಜ್‌ಗಿಂತ ೩೦ ಪರ್ಸೆಂಟ್ ಕಡಿಮೆ ರೇಟ್‌ನಲ್ಲಿ ಕೊಡಬೇಕೆಂದು ಯೋಚನೆ ಮಾಡಿದ್ದೇವೆ. ಮತ್ತು ಈ ಕಾರ್ಯಕ್ರಮವನ್ನು ನಾವು ಈಗಾಗಲೇ ಅನುಷ್ಠಾನಕ್ಕೆ ತಂದಿದ್ದೇವೆ. ಇನ್ನು ತೂಕ ಮತ್ತು ಅಳತೆಗಳ ಸಲುವಾಗಿ ತುಮಕೂರು ಮತ್ತು ರಾಯಚೂರು ಹಾಗೂ ಹುಬ್ಬಳ್ಳಿಗಳಲ್ಲಿ ವೇ ಬ್ರಿಡ್ಜ್‌ಗಳನ್ನು ಮಾಡಿದ್ದೇವೆ. ಇನ್ನು ಡೈರಿ ಕೋ ಆಪರೇಟೀವ್ ಸೊಸೈಟಿಗಳ ಬಗ್ಗೆ ಹೇಳುವುದಾದರೆ, ಎಲ್ಲಾ ಡೈರಿ ಸೊಸೈಟಿಗಳು ನಮ್ಮ ರಾಜ್ಯದಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ. ಇದರಲ್ಲಿ ಆಮೂಲ್ ಟೈಪ್ ಇರತಕ್ಕಂಥ ಸೊಸೈಟಿಗಳು ಸುಮಾರು ೩,೮೮೮ ಇವೆ. ಈ ಸಹಕಾರ ಸಂಘಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ. ನಾವು ಕೆ.ಎಂ.ಎಫ್ ಮತ್ತು ಡೈರಿಯನ್ನು ನಿಜವಾಗಿಯೂ ಅಭಿನಂದಿಸಬೇಕಾಗಿದೆ. ಇನ್ನು ಮಾರ್ಕೆಟಿಂಗ್ ಡಿಪಾರ್ಟ್‌ಮೆಂಟ್ ಬಗ್ಗೆ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಶಿವನಂಜಪ್ಪನವರು ಮತ್ತು ಮಾನ್ಯ ಸದಸ್ಯರಾದಂಥ ಶ್ರೀಮಾನ್ ಕೆ. ಹೆಚ್. ಪಾಟೀಲ್‌ರವರು ಮಾತನಾಡುತ್ತಾ ಈ ಸಂಸ್ಥೆಯಲ್ಲಿ ಬಹಳ ಮೋಸ ನಡೆಯುತ್ತಿದೆ ಎಂದು ಹೇಳಿದ್ದಾರೆ. ಅದನ್ನು ನಾನೂ ಸಹ ಒಪ್ಪಿಕೊಳ್ಳುತ್ತೇನೆ. ಇರತಕ್ಕಂಥ ವಿಷಯವನ್ನು ನಾನು ಆ ಇಲಾಖೆಯ ಮಂತ್ರಿ ಎಂದು ಮುಚ್ಚಿಡುವುದಕ್ಕೆ ಹೋಗುವುದಿಲ್ಲ. ಆ ಮಾತನ್ನು ನಾನು ಸಹ ಬಿಚ್ಚು ಮನಸ್ಸಿನಿಂದ ಹೇಳುತ್ತಿದ್ದೇನೆ. ಈ ಇಲಾಖೆಯಲ್ಲಿ ನಡೆಯುತ್ತಿರತಕ್ಕಂಥ ಮೋಸವನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗಿಲ್ಲ. ಇದಕ್ಕೆ ಕಾರಣ ಅಲ್ಲಿ ಕೆಲವು ಅಧಿಕಾರಿಗಳೂ ಸಹ ಶಾಮೀಲಾಗಿದ್ದಾರೆ. ದುರಾದೃಷ್ಟವಶಾತ್, ನಮ್ಮ ಅಧಿಕಾರೇತರರು ಸಹ ಇದ್ದಾರೆ. ಜೊತೆಗೆ ಈ ಕಮೀಷನ್‌ದಾರರಿಗೂ ಸಹ ಅತಿಯಾಸೆಯಾಗಿ ಬಿಟ್ಟಿದೆ. ಆದ್ದರಿಂದ ನಾನು ಇದೇ ಅಧಿವೇಶನದಲ್ಲಿ ಈ ಬಗ್ಗೆ ಒಂದು ಅಮೆಂಡ್‌ಮೆಂಟ್ ತರಬೇಕೆಂದು ಇದ್ದೇನೆ. ಹೋದ ಸದನದಲ್ಲಿಯೇ ಈ ಬಗ್ಗೆ ಒಂದು ಅಮೆಂಡ್‌ಮೆಂಟ್ ತರಬೇಕೆಂದು ಇತ್ತು. ಆದರೆ ಅಷ್ಟರಲ್ಲಿ ಅದು ಫೈನಲ್ ಆಗಿರಲಿಲ್ಲ. ಇನ್ನು ಬೆಂಗಳೂರು ಹಣ್ಣು ಮತ್ತು ತರಕಾರಿ ವ್ಯಾಪಾರಿಗಳನ್ನು ನಿಯಂತ್ರಣ ಮಾಡುವ ದೃಷ್ಟಿಯಿಂದ ಅವರೆಲ್ಲರೂ ಲೈಸೆನ್ಸ್‌ಗಳನ್ನು ಪಡೆದುಕೊಳ್ಳಬೇಕೆಂದು ಸರ್ಕಾರ ನಿರ್ಧರಿಸಿದೆ. ಮತ್ತು ಅವರೆಲ್ಲರಿಗೂ ನಾವು ನೋಟೀಸ್ ಕೊಟ್ಟಿದ್ದೇವೆ. ಆದ್ದರಿಂದ ಅವರೆಲ್ಲರೂ ಮೊನ್ನೆಯ ದಿವಸ ಮುಷ್ಕರ ಸಹ ಮಾಡಿದ್ದರು. ಮತ್ತು ಈ ಬಗ್ಗೆ ರಾಜ್ಯದ ಹೈಕೋರ್ಟಿನಲ್ಲಿ ಒಂದು ವಿವಾದವನ್ನು ಸಹ ಅವರು ಹೂಡಿದ್ದಾರೆ.

ಅದು ಇಷ್ಟರಲ್ಲೇ ತೀರ್ಮಾನವಾಗುತ್ತದೆಂದು ತಿಳಿದುಕೊಂಡಿದ್ದೇನೆ. ಹೈಕೋರ್ಟ್‌ನವರು ಏನು ನಿರ್ಧಾರ ಕೊಡುತ್ತಾರೆ, ಅದನ್ನು ಅನುಸರಿಸಿಕೊಂಡು, ಹಣ್ಣು, ತರಕಾರಿಗಳನ್ನು ನಿಯಂತ್ರಿಸಬೇಕೆಂದು ತೀರ್ಮಾನ ಮಾಡಿದ್ದೇವೆ. ಅಧ್ಯಕ್ಷರೇ, ನಾನು ಹೋದ ವರ್ಷವೂ ಕೂಡ ಹೇಳಿದ್ದೆ. ಕೆಲವೊಂದು ಮಾರ್ಕೆಟ್‌ಗಳಲ್ಲಿ ವ್ಯವಸ್ಥೆಯನ್ನು ಮಾಡಿಕೊಟ್ಟಿದ್ದೇವೆ. ಈಗಲೂ ಸಹ ರೈತರು ಬೆಳೆದ ವಸ್ತುಗಳನ್ನು ಸುಗಮವಾಗಿ ತರುವುದಕ್ಕೆ ಲಾಭ ಮತ್ತು ನಷ್ಟ ಜಾಸ್ತಿ ಇಲ್ಲದಹಾಗೆ, ವಾಹನ ಸೌಕರ್ಯವನ್ನು ಒದಗಿಸು

ವಂಥ ಏರ್ಪಾಡು ಮಾಡಿದ್ದೇವೆ, ಈ ವರ್ಷ ನಾವು ಹುಬ್ಬಳ್ಳಿ, ಗುಲ್ಬರ್ಗ, ತಿಪಟೂರು, ಚಿಕ್ಕಬಳ್ಳಾಪುರ, ರಾಣಿಬೆನ್ನೂರು, ಹೊಸಪೇಟೆ, ಬೀದರ್, ಅರಸೀಕೆರೆ, ಬಾಗಲಕೋಟೆ ಮಾರ್ಕೆಟ್‌ಗಳಿಗೆ ೫೦ ಭಾಗ ನಾವು, ಇನ್ನು ೫೦ ಭಾಗ ಎ. ಪಿ. ಎಂ. ಸಿ. ಎಸ್. ನವರು ಹಾಕಿಕೊಂಡು ವಾಹನಗಳನ್ನು ಪಡೆದು, ರೈತರಿಗೆ ಅನುಕೂಲ ಮಾಡಿದ್ದೇವೆ. ಇದರ ಜೊತೆಗೆ ನಾವು ಈ ವರ್ಷ ಬೆಂಗಳೂರು ಮಾರ್ಕೆಟ್‌ಗೆ ಹಣ್ಣು, ತರಕಾರಿಗಳನ್ನು ತರುವುದಕ್ಕೋಸ್ಕರ ೮ ವಾಹನಗಳನ್ನು ಖರೀದಿ ಮಾಡುವುದಕ್ಕೆ ಅವರಿಗೆ ಪರವಾನಿಗಿ ಕೊಡುತ್ತಿದ್ದೇವೆ. ಇದರಿಂದ ಬಹಳಷ್ಟು ರೈತರು ಕಷ್ಟಪಡುತ್ತಿರುವುದು ತಪ್ಪುತ್ತದೆ. ಹಣ್ಣು, ತರಕಾರಿಗಳನ್ನು ಮಾರ್ಕೆಟ್‌ಗೆ ಸಾಗಿಸಬೇಕಾದರೆ ರೈತರು, ಕೂಲಿಯವರಿಗಾಗಿ ಮತ್ತು ವಾಹನಗಳಿಗಾಗಿ ಅನುಭವಿಸುವ ಕಷ್ಟವನ್ನು ತಪ್ಪಿಸುವುದಕ್ಕೆ ನೇರವಾಗಿ ಬೆಳೆದ ಸ್ಥಳದಿಂದ ಮಾರ್ಕೆಟ್ ಪ್ರದೇಶಕ್ಕೆ ತರುವುದಕ್ಕೆ ವ್ಯವಸ್ಥೆ ಮಾಡಲು ೬ ಲಾರಿಗಳನ್ನು ಒದಗಿಸುತ್ತಿದ್ದೇವೆ. ಬೆಂಗಳೂರು ಎ. ಪಿ. ಎಂ. ಸಿ. ಎಸ್. ನವರು, ಬೆಂಗಳೂರಿನಲ್ಲಿ ೯೦ ಕಡೆ ಅಂಗಡಿಗಳನ್ನು ತಮ್ಮದೇ ಖರ್ಚಿನಲ್ಲಿ ಕಟ್ಟಿಸಿ, ಹಣ್ಣು ಮತ್ತು ತರಕಾರಿಗಳನ್ನು ಅಗ್ಗದ ದರದಲ್ಲಿ ಗ್ರಾಹಕರಿಗೆ ಒದಗಿಸುವ ಏರ್ಪಾಡು ಮಾಡಿದ್ದಾರೆ. ೧೯೮೨ ಕ್ಕಿಂತ ಹಿಂದೆ ವರ್ಲ್ಡ್ ಬ್ಯಾಂಕಿನಿಂದ ೧೨ ಕೋಟಿ ರೂಪಾಯಿಗಳನ್ನು ಪಡೆದು ಬಹಳಷ್ಟು ಮಾರ್ಕೆಟ್ ಅಭಿವೃದ್ಧಿ ಮಾಡಿದ್ದೇವೆ. ಇದಾದ ನಂತರ ೧೯೮೨-೮೩ ರಿಂದ ೧೯೮೫-೮೬ರ ವರೆಗೆ ಅಂದರೆ ೧೯೮೩-೮೪ರಲ್ಲಿ ೮೮೦ ಲಕ್ಷ, ೧೯೮೪-೮೫ ರಲ್ಲಿ ೭೩೪ ಲಕ್ಷ, ೧೯೮೫-೮೬ ರಲ್ಲಿ ೪೭೫ ಲಕ್ಷ ಒಟ್ಟು ಈಗಾಗಲೇ ೨೦ ಕೋಟಿ ರೂಪಾಯಿಗಳ ಕೆಲಸವನ್ನು ನಮ್ಮದೇ ಆದ ಹಣದಲ್ಲಿ ಮಾರ್ಕೆಟ್ ಅಭಿವೃದ್ಧಿ ಮಾಡುತ್ತಿದ್ದೇವೆ. ಆ ಮೇಲೆ ಮಾರ್ಕೆಟ್ ಇಲಾಖೆಯಲ್ಲಿರುವ ಅಧಿಕಾರಿಗಳಿಗೆ ವಾಸ ಮಾಡುವುದಕ್ಕೆ ಮನೆಗಳನ್ನು ಕಟ್ಟಿಸಬೇಕೆಂದು ಈಗಾಗಲೇ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಅಧ್ಯಕ್ಷರೇ, ಇನ್ನು ನ್ಯಾಷನಲ್ ರೂರಲ್ ಗೋಡೌನ್ಸ್ ಬಗ್ಗೆ ಹೇಳುವುದಾದರೆ ಇದರಲ್ಲಿ ಮೊದಲನೇ ಹಂತ ಪೂರ್ಣ ಮಾಡಿದ್ದೇವೆ. ಎರಡನೇ ಹಂತದಲ್ಲಿ ೧೨೦ ಗೋಡೌನ್ಸ್ ಅರ್ಧ ಮುಗಿಸಿದ್ದೇವೆ. ೩ನೇ ಹಂತದಲ್ಲಿ ೬೨ ಗೋಡೌನ್ಸ್‌ಗೆ ಹಣ ಮಂಜೂರಾತಿಗಾಗಿ ಈಗಾಗಲೇ ಕೇಳಿದ್ದೇವೆ. ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಸಂತೋಷವಾಗುತ್ತದೆ. ನಮ್ಮ ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಏನು ಮಾರ್ಕೆಟ್ ವ್ಯವಸ್ಥೆ ಮಾಡಿದ್ದೇವೆ ಅದಕ್ಕೋಸ್ಕರ ಇಡೀ ರಾಷ್ಟ್ರದಲ್ಲಿ, ನಮ್ಮ ರಾಜ್ಯಕ್ಕೆ ಎರಡನೇ ಬಹುಮಾನ ಸಂದಿದೆ ಎಂದು ಹೇಳುವುದಕ್ಕೆ ಸಂತೋಷ ಪಡುತ್ತೇನೆ ಅದಕ್ಕಾಗಿ ಇಲಾಖೆಯ ಅಧಿಕಾರಿಗಳು ಹಾಗೂ ಅಧಿಕಾರೇತರರಿಗೂ ಕೂಡ ಅಭಿನಂದನೆ ಸಲ್ಲಿಸುತ್ತೇನೆ. ಇನ್ನು ತುಮಕೂರಿನಲ್ಲಿ ಮಾರ್ಕೆಟ್ ಷಿಫ್ಟ್ ಮಾಡಬೇಕೆಂದು ಬಹಳ ವರ್ಷಗಳಿಂದ ಪ್ರಯತ್ನ ನಡೆದಿತ್ತು. ಮಾನ್ಯ ಶಿವನಂಜಪ್ಪನವರು ಇದನ್ನು ಗಮನಿಸಬೇಕು ಜೂನ್ ಮೊದಲನೇ ವಾರದಲ್ಲಿ ಮಾರ್ಕೆಟ್ ಷಿಫ್ಟ್ ಮಾಡುತ್ತಿದ್ದೇವೆ. ೧೦-೧೫ ದಿವಸಗಳಿಂದ ನಾನೂ ಕೂಡ ನೋಡಿ ಕೊಂಡು ಬಂದಿದ್ದೇನೆ. ಅತ್ಯಂತ ಜಾಗರೂಕತೆಯಿಂದ ಕೆಲಸಕಾರ್ಯಗಳನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಜೂನ್ ೧ನೇ ತಾರೀಖಿನ ದಿವಸ, ವ್ಯಾಪಾರವನ್ನು ಹಳೇ ಮಾರ್ಕೆಟ್‌ನಿಂದ ಹೊಸ ಮಾರ್ಕೆಟ್‌ಗೆ ಬದಲಾವಣೆ ಮಾಡುತ್ತೇವೆ. ಇನ್ನು ಮಾನ್ಯ ಕೆ. ಹೆಚ್. ಪಾಟೀಲರು ಈಗಾಗಲೇ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ, ಇನ್ನೊಂದು ಸಾರಿ ವ್ಯಕ್ತಪಡಿಸುತ್ತಾರೆಂದು ತಿಳಿದುಕೊಂಡಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಪಾಟೀಲರು ಒಬ್ಬರೇ ಮೆಚ್ಚುಗೆ ವ್ಯಕ್ತಪಡಿಸಬೇಕೋ ಬೇರೆಯವರು ಮೆಚ್ಚುಗೆ ವ್ಯಕ್ತಪಡಿಸಬೇಕಾಗಿಲ್ಲವೇ ?

ಶ್ರೀ ಆರ್. ಎಲ್. ಜಾಲಪ್ಪ.— ಈಗಾಗಲೇ ಅಲ್ಲಿ ೬ ಜನ ಬಿಟ್ಟು ಉಳಿದ ಎಲ್ಲರೂ ಕೂಡ ಷಿಫ್ಟ್ ಮಾಡಿದ್ದಾರೆ. ಅಲ್ಲಿ ಅನುಕೂಲಗಳನ್ನು ಒದಗಿಸುವುದಕ್ಕೆ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಕಳೆದ ಸಾರಿ ಭಾಷಣ ಮಾಡತಕ್ಕಂಥ ಸಂದರ್ಭದಲ್ಲಿ ಸನ್ಮಾನ್ಯ ಖರ್ಗೆಯವರು ಗುರುಮಿಟ್‌ಕಲ್‌ನಲ್ಲಿ ಏನೂ ಕೆಲಸ ಆಗಿಲ್ಲ ಎಂದು ಹೇಳಿದರು. ಅವರ ಗಮನಕ್ಕೆ ಈ ವಿಷಯವನ್ನು ತರುತ್ತಿದ್ದೇನೆ, ಆಫೀಸ್ ಬಿಲ್ಡಿಂಗ್ ಪೂರ್ಣವಾಗಿದೆ, ಸ್ಯಾನಿಟರಿ ಬ್ಲಾಕ್ಸ್ ಪೂರ್ಣವಾಗಿದೆ, ಆಕ್ಷನ್ ಹಾಲ್ ಗೋಡೌನ್ ಮುಗಿಯುವ ಹಂತದಲ್ಲಿದೆ. ವಾರದ ಸಂತೆ, ಅಂದರೆ ದನಗಳ ಸಂತೆ ಕೂಡ ಅಲ್ಲಿ ವ್ಯವಸ್ಥೆ ಮಾಡಿದ್ದೇವೆ. ರಾಜ್ಯದಲ್ಲಿ ೨೦ ಕಡೆ ಸಂತೆಗಳ ಮೈದಾನಗಳನ್ನು ಅಭಿವೃದ್ಧಿಗೊಳಿಸಲು ಎ. ಪಿ. ಎಂ. ಸಿ. ನವರು ತೀರ್ಮಾನ ತೆಗೆದುಕೊಂಡಿದ್ದಾರೆ. ಈ ವರ್ಷ ನಂದಗಡ, ಹಳಿಯಾಳ, ಎಲ್ಲಾಪುರ ಗ್ರಾಮಗಳಲ್ಲಿನ ಮಾರ್ಕೆಟ್‌ಗಳನ್ನು ಹೊಸ ಮಾರ್ಕೆಟ್‌ಗೆ ಸ್ಥಳಾಂತರ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇಷ್ಟು ಹೇಳಿ, ಸನ್ಮಾನ್ಯ ಪಾಟೀಲರು ನಿನ್ನೆಯ ದಿವಸ ಬಹಳ ಚೆನ್ನಾಗಿ ಮಾತನಾಡಿ, ನನಗೆ ಕೆಲವು ಸಲಹೆಗಳನ್ನು

ಕೊಟ್ಟಿದ್ದಾರೆ. ನಾನು ಅವರಿಗೆ ಮತ್ತೊಮ್ಮೆ ವಂದಿಸುತ್ತೇನೆ. ಪ್ರೊಫೆಸರ್ ಕಳವೆ, ವೈಕುಂಠ ಮೆಹತಾ ಅವರ ಉದಾಹರಣೆಗಳನ್ನು ಹೇಳಿದ್ದಾರೆ. ಅವರಿಗೂ ಗೊತ್ತಿದೆ, ದುರಾದೃಷ್ಟವಶಾತ್. ಅಂತಹ ಜನಗಳು ನಮ್ಮಲ್ಲಿ ಕಡಿಮೆಯಾಗುತ್ತಿದ್ದಾರೆ. ಅವರು "Registrar should be a friend, philosopher and guide" ಎಂದು ಹೇಳಿದ್ದಾರೆ. ನಾನು ಅದನ್ನು ಒಪ್ಪುತ್ತೇನೆ. ನಮ್ಮಲ್ಲಿ ಈಗ ಆಗಿರುವುದು ಏನು. ರಿಜಿಸ್ಟ್ರಾರ್ ಅವರೇ ಬ್ರಹ್ಮ, ವಿಷ್ಣು, ಮಹೇಶ್ವರ ಆಗಿದ್ದಾರೆ. ರಿಜಿಸ್ಟರ್ ಮಾಡುವವರು ಅವರೇ, ಮಂಜೂರ್ಮಾಡುವವರೂ ಅವರೇ, ಕೊನೆಗೆ ಲಿಕ್ವಿಡೇಟ್ ಮಾಡುವವರು ಅವರೇ, ಕಾರಣ ನಾನು ಈಗಾಗಲೇ ಹೇಳಿದ್ದೇನೆ. ನಮ್ಮ ಜನಗಳಲ್ಲಿ, ಇದು ನಮ್ಮದೇ ಸಹಕಾರ ಸಂಘ ಎಂಬ ಭಾವನೆ ಬಂದಿಲ್ಲ. ನಾವು ಷೇರು ಹಾಕುತ್ತೇವೆ, ನಮಗೆ ಅನುಕೂಲ ಬೇಡವೇ ಎಂದು ತಮ್ಮ ಷೇರನ್ನು ವಾಪಸ್ ತೆಗೆದುಕೊಳ್ಳುತ್ತಾರೆ. ಸಹಕಾರ ಸಂಘಗಳು ಸರಿಯಾಗಿ ನಡೆದರೆ, ಅಲ್ಲಿಯ ಆಡಳಿತ ಮಂಡಲಿಗೆ ಶಹಭಾಸ್‌ಗಿರಿ ಕೊಡುತ್ತಾರೆ. ಎಲ್ಲಿಯುವರೆಗೆ ಸಹಕಾರ ಸಂಘಗಳು ತಮ್ಮ ಕಾಲಿನಮೇಲೆ ನಿಲ್ಲುವುದಿಲ್ಲವೋ, ಅಲ್ಲಿಯುವರೆಗೆ ಇದನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಪಾಟೀಲರು, ಎನ್‌ಸಿಡಿಸಿ. ನಲ್ಲಿ ಬಹಳಷ್ಟು ಹಣ ಸಿಕ್ಕುತ್ತದೆ, ನಬಾರ್ಡ್‌ನವರು ಹಣ ಕೊಡುತ್ತಾರೆ, ಇದಕ್ಕೆ ಏನೂ ಕೊರತೆ ಇಲ್ಲ ಎಂದು ಹೇಳಿದರು. ಎನ್. ಸಿ. ಡಿ. ಸಿ. ನವರಿಗೂ ಮತ್ತು ನಬಾರ್ಡ್‌ನವರಿಗೂ ಹಾಗೂ ಪ್ರತಿಯೊಂದು ಕೇಸಿಗೂ ಸರ್ಕಾರ ಗ್ಯಾರಂಟಿ ನಿಲ್ಲಬೇಕು. ಒಂದು ಕಡೆ ನಮ್ಮ ಇನ್‌ವಾಲ್ವ್‌ಮೆಂಟ್ ಇದೆ. ನಮ್ಮ ಹಿಡಿತ, ಇಂಟರ್‌ಫಿಯರೆನ್ಸ್ ಇದೆ ಎಂದು ಮಾನ್ಯ ಪಾಟೀಲರು ಹೇಳುತ್ತಾರೆ. ಎಲ್ಲಿಯುವರೆಗೆ ಸಹಕಾರ ಸಂಘಗಳು ತಮ್ಮ ಸ್ವಂತ ಕಾಲಿನಮೇಲೆ ನಿಲ್ಲುವುದಕ್ಕಾಗುವುದಿಲ್ಲವೋ ಅಲ್ಲಿಯುವರೆಗೆ ಇದು ತಪ್ಪುವುದಿಲ್ಲ. ಧಾರವಾಡದಲ್ಲೂ ಕೆಲವು ಸಹಕಾರ ಸಂಘಗಳು ಇವೆ. ಅವು ತಮ್ಮದೇ ಆದ ಡಿಪಾಸಿಟ್ ಮಾಡಿಕೊಂಡಿವೆ ಕೊಡಗು, ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ನಮ್ಮದು ಇಂಟರ್‌ಫಿಯರೆನ್ಸ್ ಇಲ್ಲ. ಅಲ್ಲಿ ಒಳ್ಳೆಯ ಚೊಕ್ಕ ಸಂಸ್ಥೆಗಳಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ. ಕೆಲವು ಸಮಯ ಸೂಪರ್‌ಸೀಡ್ ಮಾಡಬೇಕಾಗುತ್ತದೆ. ೫ ಸಹಕಾರಿ ಬ್ಯಾಂಕ್‌ಗಳನ್ನು ಸೂಪರ್‌ಸೀಡ್ ಮಾಡಿದ್ದೇವೆ. ಒಂದು ಷೋಕಾಸ್ ನೋಟೀಸ್ ಕೊಟ್ಟರೆ ಹೈಕೋರ್ಟಿನಲ್ಲಿ ಸ್ಟೇ ತರುತ್ತಾರೆ,ಸದಸ್ಯರಿಂದ ಸೊಸೈಟಿಗೆ ಎಷ್ಟು ಹಣ ಬರಬೇಕು ಬ್ಯಾಂಕಿಗೆ ಎಷ್ಟು ಹಣ ಕಟ್ಟಬೇಕು ಎಂಬುದನ್ನು ಲೆಕ್ಕ ಹಾಕಿದಾಗ ಆರೂವರೆ ಕೋಟಿ ರೂಪಾಯಿ ಕಡಿಮೆಯಾಗಿದೆ. ಇಂತಹ ಬ್ಯಾಂಕುಗಳಿಗೆ ನಾವು ಇಂಟರ್‌ಫಿಯರೆನ್ಸ್ ಆಗದೇ ಹೋದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ೫ ಸಹಕಾರಿ ಬ್ಯಾಂಕ್‌ಗಳನ್ನು ಸೂಪರ್‌ಸೀಡ್ ಮಾಡಿದ್ದೇವೆ. ಮಾರ್ಚಿಯೊಳಗೆ ಚುನಾವಣೆ ಮಾಡುತ್ತೇವೆ. ಸಹಕಾರಿ ಸಂಘಗಳನ್ನು ರಿವೈವ್ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಮಾನ್ಯ ದೇವೇಗೌಡರೂ ಹೇಳಿದರು, ಹಾಸನದಲ್ಲಿನ ಬ್ಯಾಂಕ್ ತುಂಬಾ ಅಧಃಪತನದಲ್ಲಿದೆ ಎಂದು ಹೇಳಿದರು. ಆ ಬ್ಯಾಂಕನ್ನು ಪುನಶ್ಚೇತನ ಮಾಡಬೇಕೆಂದು ಹೇಳಿದ್ದೇನೆ. ಈ ದಿಸೆಯಲ್ಲಿ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಈ ಬ್ಯಾಂಕ್ ಬಿಟ್ಟು, ಉಳಿದ ೪ ಬ್ಯಾಂಕುಗಳಲ್ಲಿ ಎರಡು ಚುನಾವಣೆಗಳು ಈಗಾಗಲೇ ಆಗಿದೆ. ಉಳಿದ ಎರಡಕ್ಕೆ ಮಾರ್ಚಿಯೊಳಗೆ ಚುನಾವಣೆ ಮಾಡಿ ಮುಗಿಸುತ್ತೇವೆ. ಕಳೆದ ೬–೮ ವರ್ಷಗಳಿಂದ ಒಟ್ಟು ೧೯ ಜಿಲ್ಲಾ ಬ್ಯಾಂಕ್‌ಗಳಲ್ಲಿ ೧೯ ಬ್ಯಾಂಕುಗಳು ನಬಾರ್ಡ್‌ನವರ ಸಹಾಯ ತೆಗೆದುಕೊಂಡಿದ್ದರಿಂದ ಈವೊತ್ತಿನ ದಿವಸ ಅದು ಚೆನ್ನಾಗಿ ನಡೆಯುವುದಕ್ಕೆ ಸ್ವಲ್ಪ ಶಕ್ತಿ ಬಂದಿದೆ. ಇದರಲ್ಲಿ ನಮ್ಮ ಸಾಧನೆ ಬಹಳ ಅಲ್ಪವಾದುದು ಎಂದು ಹೇಳುತ್ತೇನೆ. ಇನ್ನೊಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ ತಮಗೆ ಒಂದು ಸಂತೋಷದ ಸುದ್ದಿ ಹೇಳುತ್ತೇನೆ. ಏನೆಂದರೆ, ಐಎಫ್‌ಸಿಓ ಅವರೇ ರಾಷ್ಟ್ರಮಟ್ಟದಲ್ಲಿ ಒಳ್ಳೆಯ ಸಹಕಾರ ಸಂಘಗಳು ಯಾವುದು ಅನ್ನುವುದನ್ನು ರೆಕಗ್ನೈಸ್ ಮಾಡಿ, ಅವರಲ್ಲಿ ಒಂದು ಸನ್ಮಾನ ಮಾಡುವ ಏರ್ಪಾಡನ್ನು ಮಾಡಿದ್ದಾರೆ. ಅದರಲ್ಲಿ ೧೯೮೪ಕ್ಕೆ ಶ್ರೀ ಕೆ. ಹೆಚ್. ಪಾಟೀಲರ ಹೆಸರನ್ನು ಸೂಚಿಸಿದ್ದಾರೆ. ಅವರ ಹೆಸರನ್ನು ಫೈನಲೈಸ್ ಮಾಡಿದ್ದಾರೆ ಎಂದು ನನಗೆ ತಿಳಿದು ಬಂದಿದೆ. ಬಹಳ ಸಂತೋಷ. ಕರ್ನಾಟಕದಲ್ಲಿ ಒಳ್ಳೆಯ ಸಹಕಾರ ಸಂಘಗಳು ಇವೆ. ಅಷ್ಟೇ ಅಲ್ಲ, ಅವುಗಳಿಗೆ ಎಷ್ಟೇ ಶಕ್ತಿ, ಸಾಮರ್ಥ್ಯ ಇದ್ದರೂ ಕೂಡ ಕೆಲವು ಒಳ್ಳೆಯ ಇನ್ಸ್ಟಿಟ್ಯೂಷನ್ಸ್ ಕೆಟ್ಟಿವೆ. ತಮಗೆ ಹೇಳಬೇಕಾದರೆ ಧಾರವಾಡದಲ್ಲಿ ೪–೫ ಸಹಕಾರ ಸಂಘಗಳು ಲಿಕ್ವಿಡೇಟ್ ಆಗಿವೆ ಅದು ಅವರ ದುರಾದೃಷ್ಟ. ಅವು ಯಾವ್ಯಾವುವು ಎಂದರೆ (೧) ಗದಗ್–ಬೆಟಗೇರಿ ಕೋ ಆಪರೇಟೀವ್ ಸೊಸೈಟಿ, (೨) ಧಾರವಾಡ ಜಿಲ್ಲಾ ಅಂಡರ್‌ಗ್ರೌಂಡ್ ಕೋ ಆಪರೇಟಿವ್ ಸೊಸೈಟಿ, (೩) ಧಾರವಾಡ ಜಿಲ್ಲಾ ಪ್ರೊಸೆಸಿಂಗ್ ಕೋ ಆಪರೇಟೀವ್ ಸೊಸೈಟಿ, (೪) ಶ್ರೀ ಕೃಷ್ಣಾ ಡೈರಿ ಕೋ ಆಪರೇಟೀವ್ ಸೊಸೈಟಿ ಮತ್ತು (೫) ಅನ್ ಎಂಪ್ಲಾಯ್ಡ್ ಗ್ರಾಜು

ಯೇಟ್ಸ್ ಕೋ ಆಪರೇಟೀವ್ ಸೊಸೈಟಿ. ಇದಕ್ಕೆ ಕಾರಣ ಇಷ್ಟೆ. ಅವರು ಅದರಲ್ಲಿ ಸರಿಯಾಗಿ ಪಾತ್ರ ವಹಿಸದೇ ಇದ್ದುದರಿಂದ ಮುತ್ಸದ್ದಿತನದಲ್ಲಿ ಅವರು ಅಷ್ಟು ಬುದ್ಧಿವಂತರು ಅಲ್ಲದೇ ಇದ್ದುದರಿಂದ ಅದು ಕಮಿಟ್‌ಮೆಂಟ್ ಆಗಿದೆ. ಅದು ಸರಿಯಾಗಿ ಕೆಲಸ ಮಾಡದೇ ಇದ್ದುದರಿಂದ ಆ ಸೊಸೈಟಿಯನ್ನು ಉಳಿಸಲಿಕ್ಕೆ ಬಹಳ ಕಷ್ಟವಾಗಿದೆ. ಅದಕ್ಕೆ ಅವರೇ ಸ್ವಲ್ಪ ಪ್ರಯತ್ನ ಪಡಬೇಕಾಗಿದೆ ಎಂದು ಹೇಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್. — ಧಾರವಾಡದ ಅನ್ ಎಂಪ್ಲಾಯ್ಡ್ ಗ್ರಾಜುಯೇಟ್ಸ್ ಕೋ ಆಪರೇಟೀವ್ ಸೊಸೈಟಿ ಲಿಕ್ವಿಡೇಟ್ ಆಗಿಲ್ಲ. ಅದನ್ನು ಗದಗ್ ಟೆಕ್ಸ್‌ಟೈಲ್‌ಗೆ ಲೀಸ್‌ಗೆ ಕೊಟ್ಟಿದ್ದೇವೆ. ಈಗ ಅದು ಛಲೋ ಆಗಿ ನಡೆಯುತ್ತಾ ಇದೆ.

ಶ್ರೀ ಆರ್. ಎಲ್. ಜಾಲಪ್ಪ.— ಅದು ಚೆನ್ನಾಗಿ ಇಂಪ್ರೂ ಆಗಿದ್ದರೆ ಸಂತೋಷ.

ಶ್ರೀ ಕೆ. ಹೆಚ್. ಪಾಟೀಲ್.— ಆ ಬಗ್ಗೆ ಅಧಿಕಾರಿಗಳು ಕೈಬಿಟ್ಟಮೇಲೆ ಅದು ಇಂಪ್ರೂ ಆಗಿದೆ.

ಶ್ರೀ ಆರ್. ಎಲ್. ಜಾಲಪ್ಪ.—ಅಧಿಕಾರಿಗಳು ಅಲ್ಲಿಗೆ ಮೊದಲು ಬಂದಿದ್ದು ಏತಕ್ಕೆ ? ಈಗ ಚೆನ್ನಾಗಿ ನಡೆಯುತ್ತಾ ಇರಬಹುದು.

ಶ್ರೀ ಕೆ. ಹೆಚ್. ಪಾಟೀಲ್ —ಇದು ಮೊದಲು ಸರಿಯಾಗಿ ನಡೆಯದೇ ಇದ್ದದ್ದು ಅಧಿಕಾರಿಗಳು ಬಂದಿದ್ದರಿಂದ, ಈ ಸಂಘ ಶ್ರೀಮಾನ್ ನಿಜಲಿಂಗಪ್ಪನವರ ಕಾಲದಿಂದಲೂ ಇದೆ. ಆವಾಗಿನಿಂದಲೂ ಚೆನ್ನಾಗಿ ನಡೆದುಕೊಂಡು ಬರುತ್ತಿತ್ತು.

ಶ್ರೀ ಆರ್. ಎಲ್. ಜಾಲಪ್ಪ — ಮಾನ್ಯ ಸದಸ್ಯರಾದ ಶ್ರೀ ಕೆ. ಹೆಚ್. ಪಾಟೀಲರು ಡಿಪಾಜಿಟ್ ಮೊಬಲೈಸೇಷನ್ ಬಗ್ಗೆ ಹೇಳಿದರು. ಈಗ ಸಹಕಾರ ಸಂಘ ಸಂಸ್ಥೆಗಳಲ್ಲಿ ಈ ಡಿಪಾಜಿಟ್ ಮೊಬಿಲೈಸೇಷನ್‌ನಿಂದ ಡಿಪಾಜಿಟ್ ಜಾಸ್ತಿಯಾಗಿದೆ ಎಂದು ಹೇಳುತ್ತೇನೆ. ತಮಗೆ ಹೇಳಬೇಕಾದರೆ ೧೯೮೫ನೇ ಇಸವಿಗೆ ೨೩೪ ಲಕ್ಷ ರೂಪಾಯಿಗಳು ಡಿಪಾಸಿಟ್ ಬಂದಿದೆ. ಮತ್ತು ಅಪೆಕ್ಸ್ ಬ್ಯಾಂಕಿನಲ್ಲಿ ಒಟ್ಟು ಇರುವುದು ೩೫೫ ಕೋಟಿ ರೂಪಾಯಿಗಳು ಅಲ್ಲದೆ ಈ ಸಹಕಾರ ಸಂಘಗಳು ಮತ್ತು ಬೇರೆ ಬೇರೆ ಸಂಸ್ಥೆಗಳಲ್ಲಿ ೨೩೪ ಕೋಟಿ ರೂಪಾಯಿ ಆಗಿದೆ, ಇದಲ್ಲದೆ ವ್ಯಕ್ತಿಗಳಿಂದ, ಇಂಡಿವಿಜ್ಯುಯಲ್ಸ್ ೧೨೧.೦೫ ಕೋಟಿ ರೂಪಾಯಿಗಳಷ್ಟು ಡಿಪಾಸಿಟ್ ಮೊಬಿಲೈಸೇಷನ್ ಮಾಡಿದ್ದಾರೆ. ಕಳೆದ ೩ ವರ್ಷಗಳಿಂದ ೪೫ ಕೋಟಿ ರೂಪಾಯಿಗಳಷ್ಟು ಹೆಚ್ಚಿನ ಹಣ ಇಂಡಿವಿಜ್ಯುಯಲ್ಸ್, ಅವರಿಂದ ಕ್ರೋಢೀಕರಿಸಿದ್ದಾರೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಇನ್ನು ಲಿಂಕಿಂಗ್ ಕ್ರೆಡಿಟ್ ಮಾರ್ಕೆಟಿಂಗ್ ಬಗ್ಗೆ ಶ್ರೀ ಕೆ. ಹೆಚ್. ಪಾಟೀಲರು ಹೇಳಿದ್ದಾರೆ ಅದನ್ನು ಗಮನದಲ್ಲಿಟ್ಟು ಯಾವ ರೈತ ಮುಂದೆ ಸಾಲ ಪಡೆಯುತ್ತಾನೆ ಅವನು ತನ್ನ ಭೂಮಿಯಲ್ಲಿ ಆಹಾರಧಾನ್ಯ ಬೆಳೆಯುವುದಕ್ಕೆ ಆ ಸಹಕಾರ ಸಂಘಗಳ ಮುಖಾಂತರ ಸಾಲ ದೊರೆಯುವ ಹಾಗೆ ಅಷ್ಟೇ ಅಲ್ಲದೆ, ಆತನು ಬೆಳೆದ ಆಹಾರ ಧಾನ್ಯವನ್ನು ಆ ಸಹಕಾರ ಸಂಘಗಳಿಗೆ ಮಾರುವುದಾದರೆ ಆಗ ಮಾರ್ಕೆಟ್ ಧಾರಣೆ ಏನು ಇದೆ ಅದಕ್ಕೆ ೧೦೦ಕ್ಕೆ ೫ರಷ್ಟು ಜಾಸ್ತಿ ಹಣ ಕೊಡುತ್ತೇವೆಂದು ಹೇಳಿದ್ದೇವೆ. ದುರಾದೃಷ್ಟವಶಾತ್ ನಾವು ಹಾಕಿಕೊಂಡಿದ್ದ ಟಾರ್ಗೆಟ್ ಅಷ್ಟು ರೀಚ್ ಆಗಲಿಲ್ಲ. ನಾವು ಇದಕ್ಕಾಗಿ ಒಂದು ಕೋಟಿ ರೂಪಾಯಿ ಹಣವನ್ನು ಇಟ್ಟಿದ್ದರಲ್ಲಿ ಕೇವಲ ೧೪ ಸಾವಿರ ರೂಪಾಯಿ ಖರ್ಚಾಗಿದೆ. ಆದುದರಿಂದ ಈ ಸಲ ಇದರ ಬಗ್ಗೆ ಸ್ವಲ್ಪ ಬದಲಾವಣೆ ಮಾಡಬೇಕಾಗಿದೆ. ಈ ಲಿಂಕಿಂಗ್ ಕ್ರೆಡಿಟ್ ಮಾರ್ಕೆಟಿಂಗ್ ಸಿಸ್ಟಂ ಮಾಡದೇ ಹೋದರೆ ಈ ಸಹಕಾರ ಸಂಘಗಳಿಂದ ರೈತರಿಗೆ ಅನುಕೂಲವಾಗುವುದಿಲ್ಲ ಎಂದು ತಿಳಿದು ಅದರ ಬಗ್ಗೆ ಈಗಾಗಲೇ ತಕ್ಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ. ಅದಕ್ಕೆ ಕಾನೂನು ಬೇಕಾದರೂ ಬದಲಾವಣೆ ಮಾಡುವುದಕ್ಕೆ ತಯಾರಾಗಿದ್ದೇವೆ. ಎನ್.ಡಿ.ಸಿ.ಸಿ. ಯವರು ಮಾರ್ಕೆಟಿಂಗ್ ರೇಟ್ ಕೊಟ್ಟರೂ ಕೂಡ ಅದು ಸರಿಯಾಗಿ ಉಪಯೋಗವಾಗುವುದಿಲ್ಲ ಎನ್.ಡಿ.ಸಿ.ಸಿ. ಯವರು ಈಗ ೧೨½ ಪರ್ಸೆಂಟ್ ಕೊಡಬೇಕಾದರೆ ಮಾರ್ಜಿನ್ ಮನಿ ಇರಬೇಕು. ೧೦೦ಕ್ಕೆ ೩೦ ರಷ್ಟು ಅವರು ತಮ್ಮದೇ ಆದ ಹಣವನ್ನು ಅಲ್ಲಿ ತೊಡಗಿಸಬೇಕು. ಈ ಒಂದು ಕೆಲಸ ಮೂರು ವರ್ಷದಿಂದಲೂ ಅರ್ಥಕ್ಕೆ ಅರ್ಥ ಆಗುತ್ತಾ ಇಲ್ಲ. ಆದುದರಿಂದ ಅವು ಕ್ಷೀಣವಾಗುತ್ತಾ ಇವೆ. ಎನ್.ಡಿ.ಸಿ.ಸಿ. ಯವರೂ ಕೂಡ ಕೊಟ್ಟ ಹಣವನ್ನು ಇದರಿಂದ ಸರಿಯಾಗಿ ಉಪಯೋಗಿಸಿಕೊಳ್ಳುವುದಕ್ಕಾಗಿಲ್ಲ. ಈ ಬಗ್ಗೆ ಎನ್.ಡಿ.ಸಿ.ಸಿ. ಯವರು ಮತ್ತು ನಬಾರ್ಡ್‌ನವರು ನಮಗೆ ಸಹಾಯ ಮಾಡುತ್ತೇವೆಂದು ಮುಂದೆ ಬಂದಿದ್ದರೂ ಕೂಡ ಅದನ್ನು ಉಪಯೋಗಿಸುವುದಕ್ಕೆ ಆಗುತ್ತಾ ಇಲ್ಲ.

ಇನ್ನು ಸಾಲದ ಬಗ್ಗೆ ಸರಿಯಾಗಿ ಸಿಕ್ಕುತ್ತಾ ಇಲ್ಲ ಎಂದು ಹೇಳಿದರು. ಏತಕ್ಕೆ ಹಾಗಾಯಿತು ಅನ್ನುವುದು ಗೊತ್ತಿಲ್ಲ. ನಿಜವಾಗಿಯೂ ಹೇಳಬೇಕಾದರೆ ಧಾರವಾಡ ಜಿಲ್ಲೆಯಲ್ಲಿ ತೊಂದರೆ ಇದೆ. ಈ ಬಗ್ಗೆ ಒಂದು ಗಾದೆ ಇದೆ. ಅದೇನೆಂದರೆ, ನಾವು ಹೇಳುವುದು ಒಂದು ದಾರಿ ಆದರೆ ಅವರು ಮಾಡುವ ಕೆಲಸ ನಮಗೆ ಎಡವಟ್ಟು ದಾರಿ ಆಗುತ್ತದೆಂದು. ಗೊಬ್ಬರಕ್ಕೆ ಬ್ಯಾಂಕ್ ಗ್ಯಾರಂಟಿ ಕೊಡಬೇಕು ಎಂದು ಮಾಡಿದ್ದಾರೆಂದು ಹೇಳಿದರು. ಹಾಗೇಕೆ ಮಾಡಿಕೊಂಡು ಬಂದರೋ ಗೊತ್ತಿಲ್ಲ. ಬಹುಶಃ ನಾರ್ಮಲ್ ಕ್ರೆಡಿಟ್ ಸ್ಟೇಟ್‌ಮೆಂಟ್ ಕೊಡಬೇಕು ಅಂತ ಇದೆ, ಅದನ್ನು ಕೊಟ್ಟಿಲ್ಲ. ಯಾರು ಬೇಕಾದರೂ ಬಿ. ಕಾಂಪೊನೆಂಟ್ಸ್ ತೆಗೆದುಕೊಳ್ಳಬಹುದು. ಹಾಗೆ ತೆಗೆದುಕೊಳ್ಳುವಾಗ ಮೊದಲು 'ಎ' ಕಾಂಪೋನೆಂಟ್ಸ್ ಕೊಟ್ಟು ಅನಂತರ 'ಬಿ' ಕಾಂಪೋನೆಂಟ್ಸ್ ತೆಗೆದುಕೊಳ್ಳಬೇಕು ಎನ್ನುವ ಒಂದು ಹೊಸ ಸಿಸ್ಟಂ ಅನ್ನು ಇಟ್ಟಿದ್ದಾರೆ. ಸಾಲಕೊಡುವಾಗ ಈ ತರಹ ಒಂದು ಸಿಸ್ಟಂ ಇಟ್ಟಿದ್ದಾರೆ. ಆದುದರಿಂದ ನಾವು ಈಗ ಏನು ಮಾಡಬೇಕೆಂದಿದ್ದೇವೆಂದರೆ ಮುಂದೆ ಸಾಲ ಕೊಡುವಾಗ ಮುಂದಿನ ಮಾರ್ಚಿ, ಏಪ್ರಿಲ್ ತಿಂಗಳಿನಲ್ಲಿ ಸಾಲ ಕೊಡುವಾಗ ಆ ರೈತರಿಗೆ ಹಣವನ್ನೇ ಕೊಡುವ ವ್ಯವಸ್ಥೆ ಮಾಡಿದ್ದೇವೆ. ಆ ರೈತನು ಅರ್ಜಿ ಕೊಟ್ಟ ೧೫ ದಿವಸದೊಳಗಾಗಿ ತೆಗೆದುಕೊಳ್ಳುವ ಹಾಗೆ ಮಾಡಬೇಕು ಎಂದು ಇದ್ದೇವೆ.

ತಮಗೆ ಇನ್ನೊಂದು ವಿಷಯ ಹೇಳಬೇಕಾದರೆ, ಈ ಡೀಸೆಂಟ್ರಲೈಷನ್ ಬಗ್ಗೆ ಮೈನರ್ ಇರ್ರಿಗೇಷನ್‌ನಲ್ಲಿ ೫೦ ಸಾವಿರ ರೂಪಾಯಿಗಳವರೆಗೂ ಕೂಡ ಜಿಲ್ಲಾ ಮಟ್ಟದಲ್ಲೇ ಕೊಡಬೇಕು ಅನ್ನುವ ವ್ಯವಸ್ಥೆ ಮಾಡಿದ್ದೇವೆ. ಅವರು ರಾಜ್ಯ ಮಟ್ಟಕ್ಕೇನೂ ಬರಬೇಕಾದ್ದಿಲ್ಲ. ಜಿಲ್ಲಾ ಮಟ್ಟದಲ್ಲೇ ಅವರಿಗೆ ಸಿಗಬೇಕು. ವ್ಯವಸಾಯ ಕಾಲದಲ್ಲಿ ಆ ರೈತ ಅರ್ಜಿ ಹಾಕಿದ ೧೫ ದಿವಸದೊಳಗೆ ಸಾಲ ಕೊಡುವ ವ್ಯವಸ್ಥೆ ಮಾಡುತ್ತೇನೆ ಎನ್ನುವ ಭರವಸೆಯನ್ನು ನಾನು ಕೊಡುತ್ತೇನೆ.

ಇನ್ನು ವೇರ್ ಹೌಸಿಂಗ್‌ನ ಗೋಡೌನ್‌ನಲ್ಲಿ ಇಡಬೇಕಾದರೆ ಈ ಬಗ್ಗೆ ಬೇರೆ ಕಡೆಯಿಂದ ಕೊಂಡುಕೊಂಡಿರತಕ್ಕಂಥಾ ರಶೀತಿ ಇರಬೇಕು ಎಂದು ಹೇಳಿದರು. ಆದುದರಿಂದ ಈ ಸಹಕಾರಿ ಗೋಡೌನ್ ಹೆಚ್ಚು ಹೆಚ್ಚು ಆಗಬೇಕು ಮತ್ತು ಇದರ ಬಗ್ಗೆ ಟ್ರೈನಿಂಗ್ ವ್ಯವಸ್ಥೆ ಇರಬೇಕು ಎಂದು ಹೇಳಿದರು. ತಮಗೆ ಹೇಳಬೇಕಾದರೆ ಅಪೆಕ್ಸ್ ಬ್ಯಾಂಕ್ ಮೂಲಕ ಎಂ.ಜಿ ಆರ್.ಡಿ. ಗೋಡೌನ್ಸ್ ೮೨೦ ಮಾಡಿದ್ದೇವೆ ಮತ್ತು ಅವರಿಗೆಲ್ಲಾ ಟ್ರೈನಿಂಗ್ ಕೊಟ್ಟಿದ್ದೇವೆ. ಆಮೇಲೆ ಇನ್ನೊಂದು ಮಾತು ಹೇಳಿದರು. ಅದೇನೆಂದರೆ ಚೌಗುಲೆ ಅನ್ನುವ ಅಧಿಕಾರಿಗಳ ಬಗ್ಗೆ ಹೇಳಿದ್ದಾರೆ. ಇವರು ಬಂದಮೇಲೆ ಇಲ್ಲಿ ಬೇಕಾದಷ್ಟು ಅಸಾಹುತ ಮಾಡಿದ್ದಾರೆ ಅದನ್ನು ಎನ್‌ಕ್ವೈರಿ ಮಾಡಿಸಬೇಕೆಂದು ಹೇಳಿದ್ದಾರೆ. ನನಗೆ ತಿಳಿದು ಬಂದಿರುವ ವರ್ತಮಾನದ ಪ್ರಕಾರ ಅವರು ಡೆಪ್ಯೂಟಿ ರಿಜಿಸ್ಟ್ರಾರ್ ಆಗಿ ಪ್ರಮೋಷನ್ ಆದದ್ದು ೨೬-೯-೧೯೭೭ರಲ್ಲಿ. ಆಮೇಲೆ ಜಾಯಿಂಟ್ ರಿಜಿಸ್ಟ್ರಾರ್ ಆಗಿ ಪ್ರಮೋಷನ್ ಆದುದ್ದು ೨೫- ೯೮೧ರಲ್ಲಿ ಅದರಿಂದ ಆಗಿರುವ ನಷ್ಟ ೫೦೪೨೬ ರೂಪಾಯಿ.

ಶ್ರೀ ಕೆ. ಹೆಚ್. ಪಾಟೀಲ್. – ಬರೇ ೫೦೪೨೩ ರೂಪಾಯಿ ಅಲ್ಲ ಇನ್ನೂ ಕೂಡ ಎಷ್ಟು ಹೋಯಿತು ಅನ್ನುವುದು ಲೆಕ್ಕವೇ ಇಲ್ಲ, ಇದಲ್ಲದೆ ಇನ್ನೂ ಬೇಕಾದಷ್ಟು ಸರಕು ಇತ್ತು. ಅದರ ಲೆಕ್ಕವೇ ಸಿಕ್ಕುತ್ತಾ ಇಲ್ಲ.

ಶ್ರೀ ಆರ್, ಎಲ್. ಜಾಲಪ್ಪ.— ಇದು ೧೯೭೭-೭೮ರಲ್ಲಿ ಆದುದು. ಆವಾಗ ಇದರ ಎಸ್ಟಿಮೇಟೆಡ್ ಲಾಸ್ ೩೦೬೮೧ ರೂಪಾಯಿ.

ಶ್ರೀ ಕೆ. ಹೆಚ್. ಪಾಟೀಲ್.—ಅವರನ್ನು ನೀವೇ ಡಿಫೆಂಡ್ ಮಾಡುತ್ತಿದ್ದೀರಲ್ಲಾ., ತಮಗೆ ಹೇಳಬೇಕಾದರೆ ಅಲ್ಲಿ ಏನಾದರೂ ಮೆಟೀರಿಯಲ್ಸನ್ನು ಮಾರಾಟ ಮಾಡಬೇಕಾದರೆ ಮೊದಲು ಚೀಫ್ ಕಂಟ್ರೋಲರ್ ಇಂಪೋರ್ಟ್ ಅಂಡ್ ಎಕ್ಸ್‌ಪೋರ್ಟ್ ಅವರಿಂದ ಪರ್ಮಿಷನ್ ತೆಗೆದುಕೊಳ್ಳಬೇಕು. ಅದನ್ನು ಅವರು ತೆಗೆದುಕೊಂಡಿಲ್ಲ. ಅಲ್ಲಿಗೆ ಮ್ಯಾನೇಜಿಂಗ್ ಡೈರೆಕ್ಟರನ್ನು ಪೋಸ್ಟ್ ಮಾಡಿದ್ದೀರಿ, ಅವರ ಪರ್ಮಿಷನ್ನೂ ಇಲ್ಲ, ಅದಕ್ಕೆ ರಿಜಿಸ್ಟ್ರಾರ್ ಪರವಾನಗಿ ಬೇಕು, ಅವರದ್ದೂ ಇಲ್ಲ ಅದಕ್ಕೆ ಬೋರ್ಡ್ ಆಫ್ ಡೈರೆಕ್ಟರ್ಸ್ ಪರವಾನಗಿ ಬೇಕು. ಅವರದ್ದೂ ಇಲ್ಲ, ಅಷ್ಟೇ ಅಲ್ಲದೆ ಅದಕ್ಕೆ ಜನರಲ್ ಬಾಡಿ ಮೀಟಿಂಗ್‌ನಲ್ಲಿ ಇಟ್ಟು ಅವರ ಅಪ್ರೂವಲ್ ತೆಗೆದುಕೊಳ್ಳಬೇಕು, ಅದೂ ಇಲ್ಲ. ಒಂದು ರೂಪಾಯಿ ಲಾಸ್ ಆದರೂ ಇವರೆಲ್ಲರದ್ದೂ ಪರವಾನಗಿ ಬೇಕು. ಅವರು ಹೀಗೆಲ್ಲಾ ಮಾಡಿದ್ದಾರೆ. ಆದುದರಿಂದ ನಾನು ಹೇಳುವುದು He is a thief. He must be punished.

ಶ್ರೀ ಆರ್. ಎಲ್. ಜಾಲಪ್ಪ.—ಇದು ೮–೧೦ ವರ್ಷಗಳ ಹಿಂದೆ ಆಗಿರುವುದು. ಅದನ್ನು ನಾನು ಎನ್‌ಕ್ವೈರಿ ಮಾಡಿಸುತ್ತೇನೆ.

ಇನ್ನು ಕಾಟನ್ ಮಾರ್ಕೆಟಿಂಗ್ ಫೆಡರೇಷನ್ ಹುಬ್ಬಳ್ಳಿ ಅವರಿಗೆ ಸಾಲ ಸಿಗುತ್ತಾ ಇಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಆ ವಿಚಾರದಲ್ಲಿ ಹೇಳಬೇಕಾದರೆ ಈ ಬಗ್ಗೆ ಆರ್. ಬಿ. ಐ ನವರು ಒಂದು ಕಂಡೀಷನ್ ಹಾಕಿದ್ದಾರೆ, ಅದನ್ನು ಫುಲ್‌ಫಿಲ್ ಮಾಡದೇ ಇದ್ದುದರಿಂದ ಅವರಿಗೆ ಸಾಲ ಸಿಕ್ಕಿಲ್ಲ. ಅವರು ಏನು ಹೇಳಿದ್ದಾರೆಂದರೆ ಧಾರವಾಡ ಜಿಲ್ಲೆಯಲ್ಲಿರುವ ಎಲ್ಲ ಪ್ರಾಥಮಿಕ ಸಂಘಗಳನ್ನೂ ಸದಸ್ಯರನ್ನಾಗಿ ಮಾಡಿಕೊಳ್ಳಬೇಕೆನ್ನುವ ಒಂದು ಕಂಡೀಷನ್ ಹಾಕಿದ್ದಾರೆ. ಕೇವಲ ಮಾರ್ಕೆಟಿಂಗ್ ಸೊಸೈಟಿ, ತಾಲ್ಲೂಕ್ ಲೆವಲ್ ಮಾರ್ಕೆಟಿಂಗ್ ಸೊಸೈಟಿ ಅವರನ್ನು ಮಾಡಿಕೊಂಡಿದ್ದಾರೆ. ಅಲ್ಲದೇ ಅವರು ಅದರಲ್ಲಿ ಶೇಕಡ ೧೨ ರಷ್ಟು ಮೆಂಬರ್ಸ್‌ನ್ನು ಮಾತ್ರ ಮಾಡಿಕೊಂಡಿದ್ದಾರೆ ಅವರು ಹೇಳಿದ ಕಂಡೀಷನ್ ಫುಲ್‌ಫಿಲ್ ಆಗದೇ ಇದ್ದುದರಿಂದ ಅವರಿಗೆ ಹಣ ಸಿಗಲಿಲ್ಲ. ಪುನಃ ಈ ವಿಚಾರವನ್ನು ನಬಾರ್ಡ್‌ನವರಿಗೆ ವಿವರಿಸಿ ಈ ಸಂಸ್ಥೆಗಳಿಗೆ ಎಷ್ಟು ಆಗುತ್ತದೋ ಅಷ್ಟು ಹಣವನ್ನು ಸಾಧ್ಯವಾದಷ್ಟು ಮಟ್ಟಿಗೆ ಈ ಒಂದು ಕಂಡೀಷನ್ ಏನಿದೆ ಅದನ್ನು ಏನಾದರೂ ಸಡಿಲಿಸುವುದಕ್ಕೆ ಸಾಧ್ಯವೇ ಎನ್ನುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಇನ್ನು ಆಯಿಲ್ ಫೆಡರೇಷನ್ ಬಗ್ಗೆ ಒಂದು ಮಾತು ಹೇಳುತ್ತೇನೆ. ಕೆಲವು ವರ್ಷ ಇದರ ಬಗ್ಗೆ ನ್ಯಾಷನಲ ಡೈರಿ ಡೆವಲಪ್‌ಮೆಂಟ್ ಬೋರ್ಡ್‌ನವರು ಈ ಒಂದು ಕಾರ್ಯಕ್ರಮವನ್ನು ಕೈಗೊಂಡಿದ್ದರು. ಇದಕ್ಕೆ ಬಂಡವಾಳ ೧೪½ ಕೋಟಿ ರೂಪಾಯಿ ಹೂಡಿದ್ದಾರೆ. ಇದನ್ನು ೫ ಜಿಲ್ಲೆಗಳಲ್ಲಿ ಮ್ಯಾನೇಜ್ ಮಾಡಿದ್ದಾರೆ. ಅಲ್ಲಿಗೆ ಕುರಿಯನ್‌ರವರೂ ಬಂದಿದ್ದರು.

ಶ್ರೀ ಕೆ. ಹೆಚ್. ಪಾಟೀಲ್.—ಅವರು ಬಂದು ಅಲ್ಲಿ ೨ ಸಾವಿರ ಚೀಲವನ್ನು ಖರೀದಿ ಮಾಡಿದ್ದಾರೆ

ಶ್ರೀ ಆರ್. ಎಲ್ ಜಾಲಪ್ಪ.—ಆದರೆ ಅವರು ಹಾಲಿನ ವ್ಯವಸ್ಥೆಯನ್ನು ಚೆನ್ನಾಗಿ ನಡೆಸಿಕೊಂಡು ಹೋಗುತ್ತಿರುವುದು ತಮಗೆ ಗೊತ್ತಿದೆ. ಅವರು ಇದನ್ನೂ ಸಹ ಚೆನ್ನಾಗಿ ಮಾಡಬೇಕು ಎಂದು ಹೇಳಿದ್ದಾರೆ. ಅವರ ಎಬಿಲಿಟಿ ಬಗ್ಗೆ ನಾವೇನೂ ಕೊಶ್ಚನ್ ಮಾಡುವ ಹಾಗೇ ಇಲ್ಲ. ಅವರು ಚೆನ್ನಾಗಿ ಕೆಲಸ ಮಾಡುತ್ತಾರೆ, ನಮಗೂ ಅದರಿಂದ ಧೈರ್ಯ ಇದೆ. ಸ್ವಲ್ಪ ಕಾದು ನೋಡೋಣ ಅದು ಒಳ್ಳೆಯ ಯೋಜನೆ. ನಮ್ಮ ಆಸೆ ಇಷ್ಟೆ. ಹೇಗೇ ಆಗಲಿ ಇಂಡಿವಿಜುವಲ್ಸ್ ಏನು ಮಾನಾಪಲಿ ಮಾಡಿಕೊಂಡಿದ್ದಾರೆ ಅದು ಹೋಗಿ ಸಹಕಾರ ಸಂಘಗಳ ಕೈಗೆ ಸಿಕ್ಕಿದರೆ ಗ್ರಾಹಕರಿಗೂ ಅನುಕೂಲವಾಗುತ್ತದೆ ಮತ್ತು ಸರ್ಕಾರಕ್ಕೆ ಬರಬೇಕಾದ ಕಮರ್ಷಿಯಲ್ ಟ್ಯಾಕ್ಸ್ ಮುಂತಾದ್ದು ಇವತ್ತು ಸಲೀಸಾಗಿ ಬರಬಹುದು. ಅಡಕೆ ಮಾರ್ಕೆಟನ್ನು ತೆಗೆದುಕೊಂಡರೆ ಕ್ಯಾಂಕೊನವರು ೧೦೦ಕ್ಕೆ ೬೦ರಷ್ಟು ತಯಾರಾಗುವ ಅಡಕೆಯನ್ನು ಸಹಕಾರ ರಂಗದಲ್ಲಿ ತಂದಿದ್ದಾರೆ ಸುಮಾರು ೬೦–೭೦ ಕೋಟಿ ವ್ಯವಹಾರ ಕ್ಯಾಂಕೊ ಒಂದೇ ಮಾಡುತ್ತಿದೆ ಪುತ್ತೂರಿನಲ್ಲಿ ಚಾಕಲೇಟ್ ಫ್ಯಾಕ್ಟರಿ ತಯಾರಾಗಬಹುದು, ಅದು ೧೩ ಕೋಟಿ ರೂಪಾಯಿಗಳ ಯೋಜನೆ ಮೊದಲು ಸಾಲ ಕೊಡಿಸುವುದಕ್ಕೆ ನಾನು ಏರ್ಪಾಟು ಮಾಡಿದೆ ಮೊದಲು ಒಂದು ದಿವಸ ನಿಲ್ಲಿಸಿದರು, ಕಾಡಬರೀಸ್ ಮೊದಲಾದವರು ತೆಗೆದುಕೊಳ್ಳಲಿಲ್ಲ ಅದನ್ನು ಕ್ಯಾಂಕೊನವರು ತೆಗೆದುಕೊಂಡು ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ ಅದು ಪೂರ್ಣವಾಗಿ ಸಹಕಾರಿರಂಗದಲ್ಲಿದೆ ಇಂತಹ ವ್ಯಾಪಾರಿಗಳ ಕೈಗೆ ಸಿಕ್ಕಿದ್ದರಿಂದ ರೈತನಿಗೂ ಅನುಕೂಲವಾಗುತ್ತದೆ ಮತ್ತು ಸರ್ಕಾರದ ಬೊಕ್ಕಸಕ್ಕೂ ಹಣ ಸಿಗುತ್ತದೆ ತಾವು ಸ್ಟೇಟ್‌ಲೆವೆಲ್ ಅಡ್ವೈಸರಿ ಕಮಿಟಿ ಬಗ್ಗೆ ಹೇಳಿದಿರಿ ಇದನ್ನು ನಾವು ಮಾಡಿದ್ದಲ್ಲ ನಮಗೆ ಯಾರು ಸಾಲ ಕೊಡುತ್ತಿದ್ದಾರೋ ಅವರು ಮಾಡಿದ್ದು ಎಲ್ಲಾ ಸರಿ ಎಂದು ಹೇಳುವುದಿಲ್ಲ, ಅದರಲ್ಲಿ ನೀವೂ ಇದ್ದಿರಿ, ತಮಗೆಲ್ಲಾ ಗೊತ್ತಿದೆ. ನಾವು ಹಣ ಕೊಡದೇ ಇರುವುದರಿಂದ ನಬಾರ್ಡ್‌ನವರು ಹೇಳಿದ ಹಾಗೆ ನಡೆಯಬೇಕಾಗುತ್ತದೆ. ಅದರಲ್ಲಿ ಏನಾದರೂ ವ್ಯತ್ಯಾಸವಾದರೆ ತಾವು ನೋಡಿಕೊಳ್ಳಬಹುದು. ಆಮೇಲೆ ಟೆಕ್ಸ್‌ಟೈಲ್ ಮಿಲ್‌ಗಳ ಬಗ್ಗೆ ಏನೆಲ್ಲಾ ಮಾಡಿದಿರಿ, ಎಂದು ತಾವು ಹೇಳಿದಿರಿ ನಮ್ಮಲ್ಲಿ ೭ ಟೆಕ್ಸ್‌ಟೈಲ್ ಮಿಲ್‌ಗಳು ಚೆನ್ನಾಗಿ ಕೆಲಸ ಮಾಡುತ್ತಿವೆ ಎಂದು ಹೇಳುವುದಕ್ಕಾಗುವುದಿಲ್ಲ, ಕೆಲಸ ಮಾಡುತ್ತಿವೆ. ಆದರೆ ಹುಲಕೋಟಿಯಲ್ಲಿರುವ ಟೆಕ್ಸ್‌ಟೈಲ್ ಮಿಲ್ ಚೆನ್ನಾಗಿ ಕೆಲಸ ಮಾಡುತ್ತಿದೆ ಇನ್ನು ಮಿಕ್ಕಿದ ಕಡೆ ಬಿಜಾಪುರ, ಬಾಗಲಕೋಟೆ, ಬೆಳಗಾಂ, ಬನಹಟ್ಟಿ ಮತ್ತು ರಾಯಚೂರು ಇಲ್ಲಿ ಸರಿಯಾಗಿ ಕೆಲಸಗಳು ಪ್ರಾರಂಭವಾಗಿಲ್ಲ. ಕೆಲಸ ನಡೆಯುತ್ತಿಲ್ಲ. ನಾವು ಮೂರು ನೂಲಿನ ಗಿರಣಿಗಳನ್ನು ಹೊಸ

ದಾಗಿ ತೆಗೆಸಿದಿದ್ದೇವೆ. ಸವದತ್ತಿ, ಲಕ್ಷ್ಮೇಶ್ವರ, ತುಂಗಭದ್ರ, ರಾಣಿಬೆನ್ನೂರು – ಇಲ್ಲಿ ಎನ್.ಸಿ.ಡಿ.ಸಿ. ಯವರು ಮತ್ತು ಸರ್ಕಾರದ ಷೇರು ಹಣ ಕೊಟ್ಟಿದ್ದೇವೆ, ಐಡಿಬಿಐ ನವರು ಹಣ ಕೊಟ್ಟಿಲ್ಲ. ಇದರ ಜೊತೆಗೆ, ಮಲಪ್ರಭ ಹತ್ತಿ ಗಿರಣಿ ಕೋಆಪರೇಟಿವ್ ಸೊಸೈಟಿ, ಸೋಮೇಶ್ವರ ಹತ್ತಿಗಿರಣಿ ಕೋಆಪರೇಟಿವ್ ಸೊಸೈಟಿ, ಲಕ್ಷ್ಮೇಶ್ವರ, ತುಂಗಭದ್ರ ಹತ್ತಿ ಗಿರಣಿ, ಸಿದ್ದೇಶ್ವರ, ಚಿಕ್ಕೋಡಿ ರೈತರ ಸಹಕಾರ ಸಂಘ, ರಾಣಿಬೆನ್ನೂರು, ವೆಂಕಟೇಶ್ವರ ನೂಲಿನ ಗಿರಣಿ ಅಣ್ಣಿಗೆರೆ, ಮಹಾವೀರ ಸಹಕಾರಸಂಘ ಬಾಗಲಕೋಟೆ ಸಂಜಯ ನೂಲಿನ ಗಿರಣಿ ಹುಬ್ಬಳ್ಳಿ, ಸಹ್ಯಾದ್ರಿ ನೂಲಿನ ಗಿರಣಿ ಚನ್ನಗಿರಿ, ಮುಳಗುಂದ ನೂಲಿನ ಗಿರಣಿ ಮುಳಗುಂದ, ರಾಯಬಾಗ ಇವುಗಳ ಬಗ್ಗೆ ಕೇಂದ್ರಸರ್ಕಾರಕ್ಕೆ ಕಳಿಸುತ್ತಾ ಇದ್ದೇವೆ. ಮಾನ್ಯ ಪಾಟೀಲರು ಮಾತನಾಡುವಾಗ ಕೋಳಿವಾಡದ ಸಹಕಾರಿ ಸಂಸ್ಥೆಗೆ ಏಕೆ ಸಹಾಯ ಮಾಡಿಲ್ಲ, ಹರಿಜನರು ಜಾಸ್ತಿ ಇದ್ದಾರೆ ಎಂದು ಹೇಳಿದರು. ಪ್ರಾಜೆಕ್ಟ್ ಕಾಸ್ಟ್ ೭೭೦ ಲಕ್ಷ ರೂಪಾಯಿ ಇತ್ತು, ಈಗ ೯೦೦ ಲಕ್ಷಕ್ಕೆ ಬರಬಹುದು. ಷೇರ್ ವಸೂಲು ಮಾಡಿರುವುದು ೨೨-½ ಲಕ್ಷ, ಸದಸ್ಯರು ಇರುವುದು ೯೦೭. ಎಸ್.ಸಿ.ಎಸ್.ಟಿ. ಸದಸ್ಯರು ಇರುವುದು ೯೭ ಜನ. ಈಗಾಗಲೇ ಇದನ್ನು ನಾವು ಕಳಿಸಿದ್ದೇವೆ. ನ್ಯಾಷನಲ್ ಕೋಆಪರೇಟೀವ್ ಡೆವಲಪ್‌ಮೆಂಟ್ ಕಾರ್ಪೋರೇಷನ್‌ನಲ್ಲಿ ಪೆಂಡಿಂಗ್ ಇದೆ. ಮಾನ್ಯ ಪಾಟೀಲರು ಡೆಲ್ಲಿಗೆ ಹೋದಾಗ ತಮ್ಮ ಪ್ರಭಾವ ಬೀರಬೇಕು ಎಂದು ಕೇಳಿಕೊಳ್ಳುತ್ತೇನೆ

ಇನ್ನು ನಮ್ಮ ರಾಜ್ಯದಲ್ಲಿ ಹಲವಾರು ಸಕ್ಕರೆ ಕಂಪನಿಗಳಿವೆ. ಇದರಲ್ಲಿ ೧೯೭೩-೭೪ರಲ್ಲಿ ಸಂಕೇಶ್ವರ ಸಕ್ಕರೆ ಕಂಪನಿ ಒಂದು ಚೆನ್ನಾಗಿ ಲಾಭ ಸಂಪಾದನೆ ಮಾಡಿತ್ತು. ೧೯೭೪-೭೫ರಲ್ಲಿ ಸಂಕೇಶ್ವರ, ಮಲಪ್ರಭ, ಪಾಂಡವಪುರ ಮತ್ತು ಚಿಕ್ಕೋಡಿ ಲಾಭ ಮಾಡುತ್ತಿವೆ ಎಂದು ಹೇಳಬಲ್ಲೆವು. ಇದರ ಜೊತೆಗೆ ೧೯೭೬-೭೭ಕ್ಕೆ ಬೀದರ್ ಕೂಡ ಲಾಭ ಮಾಡಬಹುದು. ಆದರೆ ಇದರಲ್ಲಿ ದುರದೃಷ್ಟವಶಾತ್ ಬಹಳಷ್ಟು ಸಹಕಾರ ಸಕ್ಕರೆ ಕಾರ್ಖಾನೆಗಳು ಕೆಲಸ ಮಾಡುತ್ತಾ ಇಲ್ಲ. ಗೌರಿಬಿದನೂರು ಕೆಲಸ ಮಾಡುತ್ತಿಲ್ಲ. ಶ್ರೀರಾಮ ಕೊಂಚಮಟ್ಟಿಗೆ ಕೆಲಸ ಮಾಡಬಹುದು. ಲಿಕ್ವಿಡೇಟ್ ಆಗುತ್ತಿದೆ. ಕೊಳ್ಳೇಗಾಲ ಹಿರಿಯೂರು ಇದಕ್ಕೆ ಕಬ್ಬು ಇಲ್ಲ ನೀರು ಇಲ್ಲ. ಬ್ರಹ್ಮಾವರದ್ದು ಕೆಲಸ ಮಾಡುತ್ತಿದೆ. ಹೇಮಾವತಿ ಸಕ್ಕರೆ ಕಂಪನಿಗೆ ಕಬ್ಬು ಇಲ್ಲದೆ ಕೆಲಸ ನಡೆಯುತ್ತಿಲ್ಲ. ಹೀಗೆ ನಾನಾ ಕಾರಣಗಳಿವೆ. ಒಂದು ಕಡೆ ಕಬ್ಬು ಸರಿಯಾದ ಧಾರಣೆಗೆ ಸಿಕ್ಕದೇ ಇರುವುದು. ನೀರಿನ ವ್ಯವಸ್ಥೆ ಇಲ್ಲದೇ ಇರುವುದು ಕಬ್ಬು ಸಕಾಲಕ್ಕೆ ಸಿಗದೆ ಇರುವುದು, ಹಣ ಕೊಡದೇ ಇರುವುದರಿಂದ ಬಹಳಷ್ಟು ಫ್ಯಾಕ್ಟರಿಗಳ ಬಗ್ಗೆ ರೈತರಿಗೆ ನಂಬಿಕೆ ಬರಲಿಲ್ಲ. ಈಗ ರೈತರು ಕಬ್ಬು ಬಿಟ್ಟು ಬೇರೆ ವ್ಯವಸಾಯ ಮಾಡುತ್ತಾ ಇದ್ದಾರೆ. ದುರದೃಷ್ಟವಶಾತ್ ನಾಲ್ಕೈದು ವರ್ಷಗಳಿಂದ ಮಳೆ ಇಲ್ಲದೆ ಬೇಕಾದಷ್ಟು ನೀರು ಸಿಗುತ್ತಿಲ್ಲ. ಈ ಎಲ್ಲಾ ಕಾರಣಗಳಿಂದ ನಮಗೆ ತೊಂದರೆಯಾಗಿದೆ ಎಂಬ ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಜಿ. ಮಾದೇಗೌಡ.—ಸಹಕಾರ ತತ್ವದ ಮೇಲೆ ನಡೆಯುತ್ತಿರುವ ಸಕ್ಕರೆ ಕಾರ್ಖಾನೆಗಳು ಸರಿಯಾಗಿ ಕೆಲಸ ಮಾಡದೇ ಇರುವುದಕ್ಕೆ ಕಾರಣವೇನು ಎನ್ನುವುದನ್ನು ತಾವು ದಯವಿಟ್ಟು ಹೇಳಬೇಕು. ಮತ್ತು ಕೆಲವು ಸಕ್ಕರೆ ಕಂಪನಿಗಳನ್ನು ಮಾರಾಟ ಮಾಡುವುದಕ್ಕೆ ಸರ್ಕಾರ ತೀರ್ಮಾನ ಮಾಡಿದೆ ಎನ್ನುವ ವದಂತಿ ಬಂದಿದೆ, ಇದು ನಿಜವೇ. ಇವೆರಡಕ್ಕೆ ಉತ್ತರ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಕಾರಣಗಳನ್ನು ನಾನು ಈಗಾಗಲೇ ಹೇಳಿದೆ. ಭಾರತ ಸರ್ಕಾರ ಕಬ್ಬಿಗೆ ಏನು ಇವತ್ತಿನ ದಿವಸ ಧಾರಣೆ ನಿಗದಿಮಾಡಿದೆ ಆ ಧಾರಣೆ ಅನುಕೂಲಕರವಾಗಿಲ್ಲ, ಈ ವರ್ಷ ಸ್ವಲ್ಪ ಮೇಲು, ಜಾಸ್ತಿ ಮಾಡಿದ್ದಾರೆ. ಸಕ್ಕರೆ ಅಭಾವವಿರುವುದರಿಂದ ಧಾರಣೆ ಜಾಸ್ತಿ ಇದೆ. ಕಳೆದ ೪-೫ ವರ್ಷಗಳಿಂದ ಏನು ಧಾರಣೆ ಇತ್ತು ಅದು ಅನುಕೂಲಕರ ಆಗಿರಲಿಲ್ಲ. ಮತ್ತು ಫ್ಯಾಕ್ಟರಿ ಏರಿಯಾನಲ್ಲಿ ನೀರೂ ಇಲ್ಲ. ಗೌರಿಬಿದನೂರು ಸಕ್ಕರೆ ಕಂಪನಿಯ ವ್ಯಾಪ್ತಿಯಲ್ಲಿ ೩ ಕೆರೆ ಇತ್ತು, ಗೌರಿಬಿದನೂರು ತಾಲ್ಲೂಕಿನಲ್ಲಿ ತಿಪ್ಪಗಾನಹಳ್ಳಿ ಕೆರೆ ಇತ್ತು. ಅದರಲ್ಲಿ ನಾಲ್ಕೈದು ವರ್ಷಗಳಿಂದ ನೀರು ತುಂಬಲಿಲ್ಲ. ಚನ್ನಸಾಗರ ಕೆರೆ ಕೊರಟಗೆರೆ ತಾಲ್ಲೂಕಿನಲ್ಲಿ ಇತ್ತು, ಅಲ್ಲೂ ನಾಲ್ಕೈದು ವರ್ಷಗಳಿಂದ ನೀರು ತುಂಬಲಿಲ್ಲ. ದೊಡ್ಡಬಳ್ಳಾಪುರದ ಗುಂಡನಗೆರೆ ಕೆರೆ ಇತ್ತು. ಅದರಲ್ಲೂ ಐದಾರು ವರ್ಷಗಳಿಂದ ನೀರು ತುಂಬಲಿಲ್ಲ. ಬಾವಿಗಳು ಒಣಗಿ ಹೋಗಿವೆ, ಹೀಗಾಗಿ ಕಬ್ಬು ಬೆಳೆಯಲಿಲ್ಲ. ಮೊದಲು ನಾನ್ ಅಫಿಷಿಯಲ್ ಮ್ಯಾನೇಜ್‌ಮೆಂಟ್‌ನವರು ನಡೆಸಿದರು, ಅವರ ಕಾಲದಲ್ಲಿ ದುಂದು ಖರ್ಚುಮಾಡಿ

ಕಾರ್ಖಾನೆಗಳನ್ನು ಸರಿಯಾಗಿ ನಡೆಸದೆ ಹಾಳಾಗಿದೆ. ಕೊಳ್ಳೆಗಾಲ ಮತ್ತು ಗೌರಿಬಿದನೂರು ಸಕ್ಕರೆ ಕಾರ್ಖಾನೆಗಳನ್ನು ಮಾಡಬೇಕು ಎಂದು ಪ್ರಯತ್ನಪಟ್ಟು ಟೆಂಡರ್ ಕರೆದದ್ದು ನಿಜ, ಅದನ್ನು ಇಟ್ಟುಕೊಂಡು ಏನು ಮಾಡುವುದು, ನೌಕರರಿಗೆ ಕೆಲಸ ಬೇಕು ಮತ್ತು ಪ್ರತಿವರ್ಷ ಅವರಿಗೆ ದುಡ್ಡು ಕೊಡಬೇಕಾದರೆ ಕಷ್ಟವಾಗುತ್ತದೆ ಸುಮಾರು ೧೨೨ ಲಕ್ಷ ರೂಪಾಯಿಗಳನ್ನು ಗೌರಿಬಿದನೂರು ಕಾರ್ಖಾನೆಗೆ ನಮ್ಮ ಸರ್ಕಾರ ಕೊಟ್ಟಿದೆ, ಅದರಿಂದ ೧೨೨ ಕಾಸೂ ನಮಗೆ ಬರಲಿಲ್ಲ. ಸುಮಾರು ೯೦ ಲಕ್ಷ ರೂಪಾಯಿಗಳನ್ನು ಕೊಳ್ಳೆಗಾಲ ಫ್ಯಾಕ್ಟರಿಗೆ ಕೊಟ್ಟಿದ್ದೇವೆ. ಇನ್ನಷ್ಟು ಹಣ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ, ಎನ್‌ಡಿಸಿಸಿ, ಐಡಿಬಿಐನವರು ಹಣ ಕೊಡಬೇಕಾದರೆ ಅವರಿಗೆ ಪ್ರತಿವರ್ಷ ಬಡ್ಡಿ ಕೊಡಬೇಕು. ಪರಿಸ್ಥಿತಿ ಹೀಗಾಗಿದೆ ಆದ್ದರಿಂದ ನಾವು ಮಾರಬೇಕು ಎಂದು ಯೋಚನೆ ಮಾಡಿರುವುದು ನಿಜ. ಟೆಂಡರ್ ಕೂಡ ಕರೆದಿದ್ದೇವೆ. ಮಾನ್ಯ ಯಡಿಯೂರಪ್ಪನವರು ಕೆಲವು ವಿಷಯಗಳನ್ನು ಹೇಳಿದರು. ಸಂಕ್ರಿಕೊಪ್ಪ ರಿಪೋರ್ಟನ್ನು ಹೇಳಿ ಬರೆಸಿಕೊಂಡಿದ್ದೀರಿ ಎಂದು ಹೇಳಿದರು. ಅದನ್ನು ನಾವು ಹೇಳಿ ಬರೆಸಿದ್ದಲ್ಲ ಅವರೇ ಬರೆದಿದ್ದಾರೆ. ಇದರಲ್ಲಿ ಕೆಲವನ್ನು ಈಗಾಗಲೇ ಇಂಪ್ಲಿಮೆಂಟ್ ಮಾಡಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಬಡ್ಜೆಟ್ ಭಾಷಣದಲ್ಲಿ ಹೇಳಿದ್ದಾರೆ ಎಲ್ಲಿ ೩ ವರ್ಷ ಸತತವಾಗಿ ಬರಬಿದ್ದಿದೆ ಅಲ್ಲಿ ೧೯೮೫-೮೬ನೇ ಸಾಲಿನಲ್ಲಿ ಕೊಟ್ಟಿರುವ ಹಣದ ಮೇಲೆ ಅತಿ ಸಣ್ಣ, ಸಣ್ಣ ರೈತರ ಬಡ್ಡಿ ವಸೂಲು ಮಾಡುವುದಿಲ್ಲ ಎಂದು ಹೇಳಿದ್ದಾರೆ.

ಅವರು ಮಾತನಾಡುತ್ತೇವೆಂದು ಹೇಳಿದರು. ಸಾಲವನ್ನು ವಜಾ ಮಾಡಿದರೆ ಏನು ಕಷ್ಟ ಎಷ್ಟು ಮಹಾ ಹೋಗುತ್ತದೆ ಎಂದು ಹೇಳಿದರು. ಈ ಹಣ ಇಲ್ಲಿಂದ ಬಂದಿವೆಯೆಂದು ಗೊತ್ತಿದೆಯೇ? ಇದನ್ನು ನಾವು ಡೆಪಾಸಿಟರ್ಸ್‌ನಿಂದ ಕಲೆಕ್ಟ್ ಮಾಡಿದ್ದೇವೆಂದು ಈಗಾಗಲೇ ಹೇಳಿದ್ದೇನೆ. ೩೫೦ ಕೋಟಿ ರೂಪಾಯಿಗಳು ಅಪೆಕ್ಸ್ ಬ್ಯಾಂಕ್‌ನಲ್ಲಿ, ಜಿಲ್ಲಾ ಬ್ಯಾಂಕ್‌ಗಳಲ್ಲಿ ಡೆಪಾಸಿಟ್ ಇದೆ. ೧೨೫ ಕೋಟಿ ರೂಪಾಯಿಯಷ್ಟು ಹಣವನ್ನು ವ್ಯಕ್ತಿಗಳಿಂದ ಸಾಲ ಪಡೆದಿದ್ದೇವೆ ಅವರೆಲ್ಲಾ ಸಾಲ ಕೊಟ್ಟಿದ್ದಾರೆ. ನಬಾರ್ಡ್ ಸಂಸ್ಥೆಯವರಿಂದ ಸಹ ಸಾಲ ತೆಗೆದುಕೊಂಡು ಬಂದಿದ್ದೇವೆ. ಈಗ ನಾವು ವಜಾ ಮಾಡಿದರೆ ಈ ಡೆಪಾಸಿಟರ್ಸ್‌ಗೆ ಹೇಗೆ ಹಣ ವಾಪಸ್ ಕೊಡುವುದು? ಈ ವರ್ಷ ವಜಾ ಮಾಡಿದ್ದೇವೆಂದು ಇಟ್ಟುಕೊಳ್ಳಿ ಮುಂದಿನವರ್ಷ ಏನು ಮಾಡುವುದು. ಅವರು ಪುನಃ ನಮಗೆ ಸಾಲವನ್ನು ಕೊಡುವುದಿಲ್ಲ. ನಮ್ಮ ಶಕ್ತಿ ಮೀರಿ ರೈತರಿಗೆ ಸಹಾಯ ಮಾಡಿದ್ದೇವೆ. ನಮ್ಮ ಈ ಸೇವೆಯಿಂದ ಬಹಳ ರೈತರಿಗೆ ಸಹಾಯವಾಗಿದೆಯೆಂದು ಹೇಳುವುದಕ್ಕೆ ತಯಾರಾಗಿಲ್ಲ. ನಮ್ಮ ಕೈಲಾದಷ್ಟು ಅಲ್ಪಸ್ವಲ್ಪ ಸೇವೆ ಮಾಡಿದ್ದೇವೆ. ತಾವು ದಯವಿಟ್ಟು ಅರ್ಥಮಾಡಿಕೊಳ್ಳಬೇಕು ನಾವು ರೈತ ವಿರೋಧಿಗಳೆಂದು ಹೇಳಿದ್ದಾರು. ನಾವು ರೈತ ವಿರೋಧಿಗಳಲ್ಲ. ರೈತರಿಗೆ ಏನೂ ಸಹಾಯ ಮಾಡುತ್ತಿಲ್ಲ. ವೇದಾಂತ ಹೇಳುತ್ತಿದ್ದೀರಿ ಎಂದು ಮಾನ್ಯ ಯಡಿಯೂರಪ್ಪನವರು ಹೇಳಿದರು. ನಾವು ವೇದಾಂತ ಹೇಳುತ್ತಿಲ್ಲ ನಮ್ಮ ಸರ್ಕಾರ ಬಂದ ಮೇಲೆ ಹೇಳದೇ ಕೇಳದೆ ೫೦ ಕೋಟಿ ರೂಪಾಯಿಗಳಷ್ಟು ಬಡ್ಡಿ ವಜಾ ಮಾಡಿದ್ದೇವೆ. ಮೊನ್ನೆ ತಾನೆ ಬಡ್ಜೆಟ್ಟಿನಲ್ಲಿ ಸರ್ಕಾರಕ್ಕೆ ಬರಬೇಕಾದ ೬ ಕೋಟಿ ರೂಪಾಯಿ ಸಾಲವನ್ನು ವಜಾ ಮಾಡಿದ್ದೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಬಡ್ಡಿಯಲ್ಲಿ ನಾಲ್ಕು ಕೋಟಿ ರೂಪಾಯಿ ವಜಾ ಮಾಡಿದ್ದೇವೆ. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಅನುಕೂಲವಾಗಿದೆ, ಇದರ ಜೊತೆಗೆ ದೊಡ್ಡ ರೈತರಿಗೆ ೭ ರೂಪಾಯಿಯ ಕನ್‌ವರ್ಷನ್ ಚಾರ್ಜ್ ಏನಿದೆ, ಅದನ್ನು ಸರ್ಕಾರವೇ ಕೊಡುತ್ತದೆಂದು ಹೇಳಿದ್ದೇವೆ. ೨೬೦೦೦ ಬಾವಿಗಳ ಬಗ್ಗೆ ವಜಾ ಮಾಡಿದ್ದೇವೆ. ಇದೆಲ್ಲಾ ವೇದಾಂತವೆಂದು ಮಾನ್ಯ ಯಡಿಯೂರಪ್ಪನವರು ಹೇಳಿದರೆ ಅದಕ್ಕೆ ಏನು ಹೇಳುವುದು, ನಮ್ಮ ಕರ್ಮವೆಂದು ಹೇಳಬೇಕೇ ವಿನಹ ಏನೂ ಹೇಳುವುದಕ್ಕೆ ಇಷ್ಟ ಬರುವುದಿಲ್ಲ ರೈತರಿಗೆ ನಮ್ಮ ಶಕ್ತಿ ಮೀರಿ ನಮ್ಮ ಹಣಕಾಸಿನ ಇತಿಮಿತಿ ಏನಿದೆ, ಅದನ್ನು ನೋಡಿಕೊಂಡು ಸಹಾಯ ಮಾಡಿದ್ದೇವೆಂದು ಧೈರ್ಯವಾಗಿ ಈ ಸದನದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ ಇನ್ನು ಆಡಿಟ್ ಬಗ್ಗೆ ಹೇಳಿದ್ದೀರಿ ಹಿಂದಿನ ಕಾನೂನಿನಲ್ಲಿ ಸೆಕ್ಷನ್ ೨೯ ಸಬ್‌ಸೆಕ್ಷನ್ ೨ ರಲ್ಲಿ ರೀ ಆಡಿಟ್ ಮಾಡುವುದಕ್ಕೆ ಮಾಡಿಫಿಕೇಷನ್ ಮಾಡುವ ಅವಕಾಶವಿದೆ ಎಂದು ತಾವು ಹೇಳಿದ್ದೀರಿ ಈ ಸಾರಿ ಅದನ್ನು ಕಾನೂನಿನಲ್ಲಿ ಅಳವಡಿಸುತ್ತಿದ್ದೇವೆ ಎನ್ನುವ ಭರವಸೆಯನ್ನು ಕೊಡುತ್ತೇನೆ ಇನ್ನು ಎಲೆಕ್ಟ್ರಿಕ್ ಸೊಸೈಟೀಸ್ ಬಗ್ಗೆ ಹೇಳಿದ್ದೀರಿ ಈಗಾಗಲೇ ೯ ಎಲೆಕ್ಟ್ರಿಕ್ ಸೊಸೈಟಿಗಳವರು ರಿಜಿಸ್ಟರ್ ಮಾಡಿದ್ದಾರೆ ೮ ಸಹಕಾರ ಸಂಘಗಳು ಕಾರಣಾಂತರಗಳಿಂದ ಕೆಲಸ ಮಾಡುತ್ತಿಲ್ಲ ಎಲೆಕ್ಟ್ರಿಕ್ ಡಿಪಾರ್ಟ್‌ಮೆಂಟಿನ ಜೊತೆಯಲ್ಲಿ, ಅವರ ಮಂತ್ರಿಗಳನ್ನು ಹಾಗೂ ಚೀಫ್ ಇಂಜಿನಿಯರ್‌ರವರನ್ನು ಕರೆದು ಇನ್ನು ಮಿಕ್ಕ ಸಹಕಾರ ಸಂಘಗಳು ಕೆಲಸ ಮಾಡುವುದಕ್ಕೆ ಏನು ವ್ಯವಸ್ಥೆ ಆಗ ಬೇಕೋ ಅದನ್ನು ಮಾಡುವುದಕ್ಕೆ

ಪ್ರಯತ್ನ ಮಾಡುತ್ತೇನೆ. ನನಗೆ ಗೊತ್ತಿದ್ದ ಮಟ್ಟಿಗೆ ದುರದೃಷ್ಟವಶಾತ್ ನೌಕರರು ಅದರ ಪರವಾಗಿ ಇಲ್ಲವೆಂದು ತಿಳಿದಿದೆ ಅವರನ್ನೂ ಕರೆದು ಮಾತನಾಡಿ ಅವು ಕೆಲಸ ಮಾಡುವಂತೆ ಪ್ರಯತ್ನ ಮಾಡುತ್ತೇನೆಂದು ಭರವಸೆ ಕೊಡುತ್ತೇನೆ ಇನ್ನು ಬೀಡಿ ಕಟ್ಟುವುದರ ಬಗ್ಗೆ ಹೇಳಿದ್ದೀರಿ ಮಂಗಳೂರಿನಲ್ಲಿ ಬೀಡಿ ಕಟ್ಟುವ ಸೊಸೈಟಿಗಳು ರಿಜಿಸ್ಟರ್ ಆದವುಗಳು ಫೆಡರೇಷನ್ ಆಗಬೇಕಿತ್ತು ಒಬ್ಬ ಲೋಕಸಭಾ ಸದಸ್ಯರು ಅದಕ್ಕೆ ಅಧ್ಯಕ್ಷರಾಗಿದ್ದರು ಅದು ಇನ್ನೂ ಕಾರ್ಯಕ್ರಮಗಳನ್ನು ಕೈಗೊಳ್ಳಲಿಲ್ಲ ಅದಕ್ಕೆ ತಕ್ಕ ಅನುಕೂಲಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ ಎಸ್. ಯಡಿಯೂರಪ್ಪ — ಈ ಸೊಸೈಟಿಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಹಣ ಬರುತ್ತದೆ. ಆದ್ದರಿಂದ ಇದರ ಬಗ್ಗೆ ಹೆಚ್ಚು ಗಮನಹರಿಸಬೇಕು.

ಶ್ರೀ ಆರ್ ಎಲ್. ಜಾಲಪ್ಪ.— ಮಾನ್ಯ ಜಿ ಎಸ್. ಆಚಾರ್‌ರವರು ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಬಗ್ಗೆ ಮಾತನಾಡಿದ್ದಾರೆ. ಈ ಸಕ್ಕರೆ ಕಾರ್ಖಾನೆ ನಮ್ಮಿಂದ ಆಗಿದಲ್ಲ ಇದನ್ನು ನಾವು ಮಾಡಿದ್ದಲ್ಲ ನಾವು ಬರುವ ಹೊತ್ತಿಗೆ ಅರ್ಧ ಕೆಲಸ ಮುಗಿದಿತ್ತು ಅದಕ್ಕೆ ಇನ್ನರ್ಧ ಹಣ ಒದಗಿಸಿ ಆ ಕೆಲಸ ಪೂರ್ತಿಗೊಳಿಸಿದ್ದೇವೆ. ಟ್ರಯಲ್ ಆಗಿದೆ ಕ್ರಷಿಂಗ್ ಮೊದಲನೇ ವರ್ಷ ಕೊಟ್ಟಿಲ್ಲ ೧೦ ರಷ್ಟು ಕಳೆದ ವರ್ಷ ಮಾಡಿದ್ದೇವೆ ಅದು ಲುಕ್ಸಾನ್‌ನಲ್ಲಿದೆ ನಾವು ಅವರಿಗೆ ಅನ್‌ಲಿಮಿಟೆಡ್ ಆಗಿ ಎಷ್ಟು ಪಂಪ್ ಸೆಟ್ ಇಲ್ಲವೇ ಎಷ್ಟು ಬೋರ್‌ವೆಲ್‌ಗಳನ್ನು ಬೇಕಾದರೂ ಕೊಡುತ್ತೇವೆ ಎಂದು ಹೇಳಿದ್ದೇವೆ Sky is the Limit ಅದರ ಜೊತೆಗೆ ಕೇಂದ್ರ ಸರ್ಕಾರದವರು ಕೆಲವು ಸೌಲಭ್ಯಗಳನ್ನು ಕೊಡುತ್ತೇವೆಂದು ಮುಂದೆ ಬಂದಿದ್ದಾರೆ ಡೆವಲಪ್‌ಮೆಂಟ್‌ಕೆ ಕೇನ್‌ಗೆ ಕೊಟ್ಟು ಅದನ್ನು ಅಭಿವೃದ್ಧಿ ಗೊಳಿಸಲಿಕ್ಕೆ ಹಣ ಕೊಡುತ್ತೇವೆಂದು ಮುಂದೆ ಬಂದಿದ್ದಾರೆ ೧೦ ರಷ್ಟನ್ನು ಫ್ಯಾಕ್ಟರಿಯವರು ಕೊಡಬೇಕು ೬೦ ರಷ್ಟನ್ನು ಅವರು ಕೊಡುತ್ತೇವೆಂದು ಹೇಳಿದ್ದಾರೆ. ಈ ಫ್ಯಾಕ್ಟರಿಯ ಬಗ್ಗೆ ಸರ್ಕಾರಕ್ಕೆ ಬರೆದಿದ್ದೇವೆ ೧೯ ಲಕ್ಷ ೨೦ ಸಾವಿರದ ಯೋಜನೆಯನ್ನು ಅವರಿಗೆ ಕಳಿಸಿದ್ದೇವೆ ೧೦೦ ಕ್ಕೆ ಆರು ಪರ್ಸೆಂಟ್ ಬಡ್ಡಿಯಲ್ಲಿ ಸಿಗುತ್ತದೆ ಅದೇ ರೀತಿ ಹೇಮಾವತಿ ಕಾರ್ಖಾನೆಗೂ ಸಿಗುತ್ತದೆ ಹಾಗೂ ಎಲ್ಲೆಲ್ಲಿ ಅನುಕೂಲವಿದೆಯೋ ಅಲ್ಲಲ್ಲಿ ಅದನ್ನು ನಡೆಸುವುದಕ್ಕೆ ಪ್ರಯತ್ನ ಪಡುತ್ತೇವೆಂದು ಈ ಸದನಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ ಮಾನ್ಯ ಭೂಪತಿಯವರು ಕೆಲವು ವಿಷಯಗಳನ್ನು ಹೇಳಿದ್ದಾರೆ. ಅದರಲ್ಲಿ ಈ ಶೀರ್ಷಿಕೆಯು ಮೂರನೇ ಪೇಜ್‌ನಲ್ಲಿ ಹಣ ಖರ್ಚು ಮಾಡಿಲ್ಲವೆಂದು ಹೇಳಿದ್ದಾರೆ ನಾವು ಆ ಹಣವನ್ನು ಬಡ್ಜೆಟ್ಟಿನಲ್ಲಿ ಪ್ರೊವೈಡ್ ಮಾಡಿರುವುದು ಎನ್. ಸಿ. ಡಿ. ಸಿ. ಯಿಂದ ಏನು ನೆರವು ಬರುತ್ತದೆ ಅದು ಸಕ್ಕರೆ ಕಾರ್ಖಾನೆಗಾಗಲೀ ಇಲ್ಲವೇ ಸ್ಪಿನ್ನಿಂಗ್ ಮಿಲ್‌ಗಾಗಲೀ ಏನು ನೆರವು ಬರುತ್ತದೆ. ಅದರ ಆಧಾರದ ಮೇಲೆ ಇದನ್ನು ಇಟ್ಟಿದ್ದೇವೆ ನಮಗೆ ವರ್ಷದ ಕಡೆಯೊಳಗೆ ಹಣ ಬರುವುದು ಅದು ಬಂದ ಮೇಲೆ ಈ ಹಣ ಪೂರ್ತಿ ಖರ್ಚು ಮಾಡುತ್ತೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ಸಾಲದ ಗುರಿ ಮುಟ್ಟಿಲ್ಲವೆಂದು ಹೇಳಿದರು ೧೯೮೫–೮೬ ಕ್ಕೆ ನಾವು ಸಾಲ ಕೊಡಬೇಕೆಂದು ನಿಗದಿ ಮಾಡಿದವು ೧೩೦ ಕೋಟಿ ರೂಪಾಯಿ ಅಲ್ಪಾವಧಿ ಸಾಲ ೧೨ ಕೋಟಿ ರೂಪಾಯಿ ಮಧ್ಯಮಾವಧಿ ಸಾಲ, ೩೫ ಕೋಟಿ ರೂಪಾಯಿ ದೀರ್ಘಾವಧಿ ಸಾಲ ಎಂದು ಈಗ ಜನವರಿ ಕಡೆಗೆ ೧೯ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ ಇನ್ನು ೫೦ ಕೋಟಿ ರೂಪಾಯಿಯಷ್ಟನ್ನು ಕೊಡಬೇಕು. ಆದರೆ ದುರದೃಷ್ಟವಶಾತ್ ಬರಗಾಲದ ದೆಸೆಯಿಂದಾಗಿ ಕೇವಲ ೯೨ ಕೋಟಿ ರೂಪಾಯಿಗಳಷ್ಟು ಮಾತ್ರ ಖರ್ಚಾಯಿತು ಅದೊಂದು ಬಿಟ್ಟರೆ ಮಿಕ್ಕ ಮಧ್ಯಮಾವಧಿ ಸಾಲ ಹಾಗೂ ದೀರ್ಘಾವಧಿ ಸಾಲವೆಲ್ಲಾ ಪೂರ್ಣವಾಗಿ ಖರ್ಚು ಮಾಡುತ್ತೇವೆಂಬ ಭರವಸೆ ಕೊಡುತ್ತೇನೆ ಸಣ್ಣ ರೈತರಿಗೆ ಬಹಳ ಕಡಿಮೆಯಾಗಿದೆಯೆಂದು ಹೇಳಿದ್ದಾರೆ ೪ ಪರ್ಸೆಂಟ್ ಬಡ್ಡಿಯಂತೆ ೧೯ ಕೋಟಿ ರೂಪಾಯಿಯಷ್ಟನ್ನು ಕೊಟ್ಟಿದ್ದೇವೆ ಎಲ್ಲೆಲ್ಲಿ ಸಾಲಕ್ಕೆ ಅರ್ಜಿಗಳು ಬಂದಿವೆ ಅಲ್ಲೆಲ್ಲಾ ಯಾರಿಗೂ ಇಲ್ಲವೆಂದು ಹೇಳದೆ ಸಾಲ ಕೊಟ್ಟಿದ್ದೇವೆ ಸಾಲದ ಅರ್ಜಿ ವಾಪಸ್ ಕೊಟ್ಟಿಲ್ಲ ಇನ್ನು ಬಿಜಾಪುರದ ನೂಲಿನ ಗಿರಣಿ ಬಗ್ಗೆ ಹೇಳಿದ್ದಾರೆ ೧ ಕೋಟಿ ರೂಪಾಯಿಯನ್ನು ಕೆ ಟೆಕ್ಸ್‌ಗೆ ಮಂಜೂರು ಮಾಡಿಸಿ ಅದರಲ್ಲಿ ೫೦ ಲಕ್ಷ ರೂಪಾಯಿಯನ್ನು ಬಿಜಾಪುರ ಸ್ಪಿನ್ನಿಂಗ್ ಮಿಲ್‌ಗೆ ನೀಡಿದೆ. ಆದರೆ ದುರದೃಷ್ಟವಶಾತ್ ಅಲ್ಲಿನ ನೂಲಿನ ಕ್ವಾಲಿಟಿ ಸರಿಯಾಗಿ ಆಗಿಲ್ಲ. ಈಗ ಹೇಳುತ್ತಾರೆ ಸ್ಪಿನ್ನಿಂಗ್‌ನ ರಿಂಗ್ ಫ್ರೇಮ್ಸ್ ಅನ್ನು ಬದಲಾಯಿಸಬೇಕೆಂದು ಇದು ಮೊದಲೇ ಏಕೆ ಗೊತ್ತಾಗಲಿಲ್ಲವೋ ನನಗಂತೂ ಗೊತ್ತಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನಿಮಗೆ ಕೊಟ್ಟ ಹಣವನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳಲಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಪವರ್ ಚಾರ್ಜಸ್ ಕೊಟ್ಟಿಲ್ಲವೆಂದು ಆ ಫ್ಯಾಕ್ಟರಿಯನ್ನು ಮುಚ್ಚಿದರೆಂದು ಗೊತ್ತಾಗಿದೆ. ಒಂದು ಸಂತೋಷದ ಸುದ್ದಿಯೇನೆಂದರೆ ನಿನ್ನೆಯಿಂದ ಬಿಜಾಪುರದ ಫ್ಯಾಕ್ಟರಿ ಪ್ರಾರಂಭವಾಗಿದೆ. ತಾವೂ ಕೂಡ ತಮ್ಮ ಕಾರ್ಮಿಕರಿಗೆ ಕ್ವಾಲಿಟಿ ಸರಿಯಾಗಿ ಮಾಡಿ ಎಂದು ಅಡ್ವೈಸ್ ಮಾಡಬೇಕು ತಾವು ಅಡ್ವೈಸ್ ಮಾಡಿದರೆ ಬಹಳ ಅನುಕೂಲವಾಗುತ್ತದೆ. ಬಹಳ ಕಷ್ಟಪಟ್ಟು ಸುಳ್ಳೋ ಪಳ್ಳೋ ಹೇಳಿ ಅದಕ್ಕೆ ದುಡ್ಡು ಕೊಡಿಸಿದ್ದೇವೆ ಅದನ್ನು ಸರಿಯಾಗಿ ನಡೆಸಿಕೊಂಡು ಹೋಗಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಲ್ಲದಿದ್ದರೆ ವಿಧಿಯಿಲ್ಲ ಇನ್ನು ಹೌಸ್ ಬಿಲ್ಡಿಂಗ್ ಸೊಸೈಟಿಗಳ ಬಗ್ಗೆ ಹೇಳಿದ್ದಾರೆ ಅವರು ಹೇಳಿದ್ದು ಅಕ್ಷರಶ: ನಿಜ ಇದು ಒಂದು ಕಾಲದಲ್ಲಿ ನಡೆಯುತ್ತಿತ್ತು ನಮ್ಮ ಸರ್ಕಾರ ಬಂದ ಮೇಲೆ ಒಂದು ಇಂಚು ಜಮೀನು ಕೃಷ್ಣ ಭಟ್ಟರ ಸೊಸೈಟಿಗೆ ಕೊಟ್ಟಿಲ್ಲವೆಂಬುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮೂರು ಜನರ ಸಮಿತಿಯನ್ನು ಏನು ಮಾಡಿದ್ದೇವೆ, ಆ ಸಮಿತಿ ನಿಷ್ಪಕ್ಷಪಾತವಾಗಿ ನ್ಯಾಯವಾಗಿ ಕೆಲಸ ಮಾಡುತ್ತಿದೆಯೆಂದು ಧೈರ್ಯವಾಗಿ ಹೇಳಬಲ್ಲೆ ಯಾವ ದೇವರ ಮುಂದೆ ನಿಂತುಕೊಂಡು ಬೇಕಾದರೂ ಹೇಳಬಲ್ಲೆ. ಇದರಿಂದಾಗಿ ಆ ಒಂದು ಸಂಪ್ರದಾಯಕ್ಕೆ ಕಡಿವಾಣ ಬಿದ್ದಿದೆ. ಇದು ಪೂರ್ತಿ ನಿಂತಿದೆಯೆಂದು ಹೇಳುವುದಿಲ್ಲ ಅಂತೂ ಬಹಳಷ್ಟು ಕಡಿವಾಣ ಬಿದ್ದಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಕೃಷ್ಣಾಭಟ್ ಸೊಸೈಟಿಯ ಬಗ್ಗೆ ದಿನಾ ಅಡ್ವರ್‌ಟೈಸ್ ಬರುತ್ತಿದೆ. ನಮಗೆ ಪರವಾನಗಿ ಸಿಕ್ಕಿದ ದುಡ್ಡು ಕೊಡಿ ಎಂದು ಹೇಳುತ್ತಿದ್ದಾರೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ.

ಶ್ರೀ ಆರ್. ಎಲ್. ಜಾಲಪ್ಪ.—ಅದರ ಬಗ್ಗೆ ಕಾರ್ಯಕ್ರಮದ ಅವಶ್ಯಕತೆಯಿಲ್ಲವೆಂದು ಅಂದೂ ಕೊಂಡಿದ್ದೇವೆ. ಇದು ಪ್ರತಿಯೊಬ್ಬರಿಗೂ ಗೊತ್ತಿದೆ. ಯಾವ ತರಹದ ಅಡ್ವರ್‌ಟೈಸ್ ಮಾಡಿದರೂ ಯಾರೂ ದುಡ್ಡು ಕೊಡುತ್ತಾ ಇಲ್ಲ. ಪಳಿಯ ದಂಡ್ಡಿನಲ್ಲಿ ಅಡ್ವರ್‌ಟೈಸ್ ಮಾಡಿಕೊಂಡು ಹೋಗುತ್ತಿರಬಹುದು. ಈ ಸೊಸೈಟಿ ಬಗ್ಗೆ ಎನ್‌ಕ್ವೈರಿ ಮಾಡಿಸಬೇಕೆಂದು ತೀರ್ಮಾನ ಮಾಡಿದ್ದೇವೆ. ಇನ್ನು ಸಿ.ಸಿ.ಎ. ಬಗ್ಗೆ ಹೇಳಿದ್ದಾರೆ ೧೫೮ನೇ ಸೆಕ್ಷನ್ ಅಮೆಂಡ್‌ಮೆಂಟ್ ಮಾಡಿದೆ. ಇನ್ನೂ ಕಾರ್ಯಕ್ರಮ ಹಾಕಿಲ್ಲ. ಬೇರೆ ಸಿ.ಸಿ.ಎ. ಬರಲಿ ಎಂದು ಹಾಗೇ ಇಡಲಾಗಿದೆ. ಈ ಮಧ್ಯೆ ಅಪೀಲು ಮಾಡಿ. ಡಬಲ್ ಬೆಂಚಗೆ ಹೋಗಿ! ಅಲ್ಲಿ ತೀರ್ಮಾನ ಕೊಟ್ಟಿದ್ದಾರೆ. ಆ ತೀರ್ಮಾನಕ್ಕೆ ಅನುಗುಣವಾಗಿ ಅಳವಡಿಸಬೇಕು. ೧೫ ದಿವಸ ಅಥವಾ ಒಂದು ತಿಂಗಳೊಳಗೆ ಅದನ್ನು ಮುಗಿಸುತ್ತೇನೆಂದು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಸದಸ್ಯರಾದ ವೆಂಕಟರಾಮಯ್ಯನವರು ಈ ವರ್ಷ ೩೩೫ ಸಹಕಾರ ಸಂಘಗಳು ಜಾಸ್ತಿಯಾಗಿವೆ! ಆದರೆ ಅನುಕೂಲ ಮಾತ್ರ ಜಾಸ್ತಿಯಾಗಲಿಲ್ಲವೆಂದು ಹೇಳಿದ್ದಾರೆ. ಜಾಸ್ತಿಯಾಗಿದ್ದು ನಿಜ. ೪೫೪೦ ಸಹಕಾರ ಸಂಘಗಳನ್ನು ಲಿಕ್ವಿಡೇಟ್ ಕೂಡ ಮಾಡಿದ್ದೇವೆ. ಪುಟ ೯೮ರಲ್ಲಿ ಸಾಲ ೧೨ ಲಕ್ಷ, ೧೩ ಲಕ್ಷ ಎಂದು ಇದೆ, ಕೋಟಿಗಳಿಗೆ ಹೋಗಿಲ್ಲವೆಂದು ಹೇಳಿದರು. ನಿಮ್ಮ ಜಿಲ್ಲಾ ಬ್ಯಾಂಕ್‌ಗೆ ನಾನು ಬಂದಮೇಲೆ ಚುನಾವಣೆ ಮಾಡಿಸಿದ್ದೇನೆ. ೧೯೮೪-೮೫ರಲ್ಲಿ ೧೦೫ ಲಕ್ಷ ಅಲ್ಪಾವಧಿ ಸಾಲ ೬ ಲಕ್ಷ ಮಧ್ಯಮಾವಧಿ ಸಾಲ ಕೊಡಲಾಗಿದೆ. ೬ ಲಕ್ಷ ರೂಪಾಯಿ ಅಪೆಕ್ಸ್ ಬ್ಯಾಂಕ್‌ನಿಂದ ಕೊಟ್ಟಿರುವುದು. ನಬಾರ್ಡ್‌ನಿಂದ ಹಣ ಪಡೆಯುವಂಥ ಶಕ್ತಿ ನಿಮ್ಮ ಜಿಲ್ಲಾ ಬ್ಯಾಂಕಿಗೆ ಬಂದಿಲ್ಲ. ಇನ್ನು ಸಕ್ಕರೆ ಕಾರ್ಖಾನೆ ಬಗ್ಗೆ ಹೇಳಿದ್ದಾರೆ. ಎಷ್ಟು ಹಣ ಕೊಡಲಿ, ೧೦ ಲಕ್ಷ ರೂಪಾಯಿಗಳನ್ನು ಸಂಕೇಶ್ವರ ಸಕ್ಕರೆ ಕಾರ್ಖಾನೆಯಿಂದ ೧೨ ಲಕ್ಷ ರೂಪಾಯಿ ಸರ್ಕಾರದಿಂದ ಕೊಡಿಸಿದರೂ ಒಂದು ರೂಪಾಯಿ ಕೂಡ ವಾಪಸ್ಸು ಬಂದಿಲ್ಲ. ಅಲ್ಲಿ ಕಬ್ಬು ಇಲ್ಲ. ನನ್ನದೂ ನನ್ನ ಹೆಂಡತಿ ಮಕ್ಕಳದ್ದು ೧೨,೦೦೦ ರೂಪಾಯಿ ಷೇರು ಕ್ಯಾಪಿಟಲ್ ಇದೆ. ನನಗೆ ವಾಪಸ್ಸು ಹಣ ಬರಬೇಕೆಂಬ ಆಸೆ ಇಲ್ಲವೇ ? ಆದರೆ. ಅಲ್ಲಿ ಅರೆಯುವುದಕ್ಕೆ ಕಬ್ಬು ಇಲ್ಲ. ಹರಾಜು ಹಾಕುತ್ತೇವೆಂದರೂ ಯಾರೂ ಕೇಳುವವರಿಲ್ಲ. ಇನ್ನು ಡಿಸ್ಟಲರೀಸ್ ಬಗ್ಗೆ ಹೇಳಿದ್ದಾರೆ. ೧೦,೦೦೦ ಲೀಟರಿಗೆ ಅವರು ಖರ್ಚು ಮಾಡಿರುವುದು ರೂ. ೫೬ ಲಕ್ಷ ರೂಪಾಯಿಗಳು, ಇದು ಅತಿ ಆಯಿತು ಇದು ೧೯೭೭-೭೮ರಲ್ಲಿ ಆಗಿದೆ. ಮತ್ತೆ ೧೯೭೯-೮೦ರಲ್ಲಿ ಬಾಡಿಗೆಗೆ ಕೊಟ್ಟಿದ್ದಾಗ ನಂತರ ಸಿಕ್ ಇಂಡಸ್ಟ್ರೀಸ್ ಎಂದು ತೆಗೆದುಕೊಂಡಾಗ ಹೈಕೋರ್ಟಿಗೆ ಹೋದರು. ಅಲ್ಲಿ ಬಾಡಿಗೆ ಜಾಸ್ತಿ ಮಾಡಬೇಕೆಂದು ಡಿಸಿಷನ್ ಕೊಟ್ಟರು ಮತ್ತೆ ಅವರು ಸುಪ್ರೀಂಕೋರ್ಟಿಗೆ ಹೋದರು. ಜಾಸ್ತಿ ಬಾಡಿಗೆ ಮಾಡುವುದಕ್ಕಾಗುವುದಿಲ್ಲವೆಂದು ಸುಮ್ಮನೆ ಕೂತಿದ್ದೇವೆ. ಇದು ನಮ್ಮ ಕಾಲದಲ್ಲಿ ಆದಂತಹ ವ್ಯವಹಾರವಲ್ಲ ಏನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಮಾನ್ಯ ಸದಸ್ಯರಾದ ಶಿವನಂಜಪ್ಪನವರು ೩೨,೦೦೦ ಸಹಕಾರ ಸಂಘಗಳಲ್ಲಿ ದುರುಪಯೋಗವಾಗದೇ ಇರತಕ್ಕ ಸಹಕಾರ ಸಂಘಗಳು ಎಷ್ಟು

ಎಂದು ಕೇಳಿದ್ದಾರೆ. ಬೇಕಾದಷ್ಟು ಇವೆ. ೬೫೫ ಸಂಘಗಳಲ್ಲಿ ದುರ್ವ್ಯವಹಾರ ಆಗಿದೆ. ಮಾನ್ಯ ಸದಸ್ಯರಾದ ಆಚಾರ್‌ರವರು ಮಾತನಾಡುವಾಗ ಒಂದು ಮಾತನ್ನು ಹೇಳಿದರು. ಅಲ್ಪಸ್ವಲ್ಪ ದುರುಪಯೋಗವಾಗಿದೆಯೆಂದು ಹೇಳಿದರು. ಅದನ್ನು ಮ್ಯಾಗ್ನಿಫೈಡ್ ಮಾಡುವುದು ಬೇಡ ಎಂದು ಕೂಡ ಹೇಳಿದ್ದಾರೆ. ಸಹಕಾರ ಸಂಘದಿಂದ ಎರಡು ಲಕ್ಷ ಬಾವಿಗಳಿಗೆ ಸಾಲ ಕೊಡಲಾಗಿದೆ, ೧೨,೦೦೦ ಟ್ರ್ಯಾಕ್ಟರುಗಳಿಗೆ ಸಾಲ ಕೊಡಲಾಗಿದೆ, ೪೮ ಹಾರ್ಟಿಕಲ್ಚರ್ ಫಾರಂಗಳಿಗೆ ಸಾಲ ಕೊಡಲಾಗಿದೆ, ಪವರ್ ಟಿಲ್ಲರ್‌ಗಳಿಗೆ ಸಾಲ ಕೊಡಲಾಗಿದೆ. ಲಕ್ಷಾಂತರ ರೈತರು ಉದ್ಧಾರವಾಗಿದ್ದಾರೆ. ಇದು ಯಾರ ಗಮನಕ್ಕೂ ಬಂದಂತೆ ಕಾಣುತ್ತಿಲ್ಲ. ವರ್ಷಕ್ಕೆ ೧೫೦ ರಿಂದ ೧೮೦ ಕೋಟಿವರೆಗೆ ಸಾಲ ಕೊಡಲಾಗುತ್ತಿದೆ. ೨೨೪ ಕೋಟಿ ರೂಪಾಯಿ ವರ್ಕಿಂಗ್ ಕ್ಯಾಪಿಟಲ್ ಇರುವಾಗ ೯ ಕೋಟಿ ರೂಪಾಯಿ ದುರುಪಯೋಗವಾಗಿರುವುದು ದೊಡ್ಡದೇನಲ್ಲ. ಇದನ್ನು ಮಾತ್ರ ಮ್ಯಾಗ್ನಿಫೈ ಮಾಡುತ್ತಾರೆ. ಸಹಕಾರದಲ್ಲಿರುವವರೆಲ್ಲಾ ಕೆಟ್ಟವರಲ್ಲ. ಕಾನೂನು ಎನ್ನುವುದು ಜೇಡರಬಲೆ ಇದ್ದಹಾಗೆ ಸ್ವಾಮಿ, ಸಹಕಾರ ಸಂಘಗಳ ಬಗ್ಗೆ ಟೀಕೆ ಮಾಡುವುದಕ್ಕೆ ಬದಲು ಇವುಗಳು ಯಾವ ರೀತಿಯಾಗಿ ಕೆಲಸ ಮಾಡಬೇಕು. ಇವುಗಳು ಯಾವ ರೀತಿಯ ಪಾತ್ರ ವಹಿಸಬೇಕು ಎನ್ನುವುದನ್ನು ಯೋಚನೆ ಮಾಡಬೇಕು. ದೂರದಿಂದ ನೋಡಿ ಹಾಗೆ ಇದೆ, ಹೀಗಿದೆ ಎಂದು ಹೇಳುವುದು ಸರಿಯಲ್ಲ. ಇಲ್ಲಿ ಸಹಕಾರಿಗಳಾದ ಪಾಟೀಲರು ಇನ್ನಿತರ ಸದಸ್ಯರೂ ಇದ್ದಾರೆ. ಸಹಕಾರಿ ರಂಗಕ್ಕೆ ಸತ್ಯವಂತರು ಬರಬೇಕು. ಸಹಕಾರಿ ಸಂಘಗಳು ಹಾಳಾದರೆ, ನಮ್ಮಲ್ಲಿ ಪರ್ಯಾಯ ವ್ಯವಸ್ಥೆ ಯಾವುದು ಇದೆ. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಒಂದು ವರ್ಷಕ್ಕೆ ೧೫೦ ಕೋಟಿ ರೂಪಾಯಿ ದುರುಪಯೋಗವಾಗಿರುವಾಗ, ಸಹಕಾರ ಸಂಘಗಳಲ್ಲಿ ೮-೯ ಕೋಟಿ ರೂಪಾಯಿಗಳು ದುರುಪಯೋಗವಾಗಿದೆಯೆಂದು ಹೇಳುವುದು ಸಮಂಜಸವಲ್ಲ. ೬೩೪ ಕೇಸುಗಳಲ್ಲಿ ದುರ್ವ್ಯವಹಾರ ಆಗಿದೆ. ಒಟ್ಟು ೯.೬೭ ಲಕ್ಷ ರೂಪಾಯಿ ದುರ್ವ್ಯವಹಾರ ನಡೆದಿದ್ದು, ೧೧೭.೯೦ ಸಾವಿರ ರೂಪಾಯಿ ವಸೂಲು ಮಾಡಿದೆ, ೮.೫೦ ಲಕ್ಷ ರೂಪಾಯಿಗಳನ್ನು ವಸೂಲು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಲಾಗಿದೆ. ೨೦೦೩ ಜನ ನೌಕರರ ಮೇಲೆ ದಾವಾ ಹಾಕಲಾಗಿದೆ. ೭೦ ಜನ ಇಲಾಖೆಯ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ. ಮಾನ್ಯ ಶಿವನಂಜಪ್ಪನವರು ಎ ಪಿ ಎಂ ಸಿ ಗಳಲ್ಲಿ ರೈತರ ಶೋಷಣೆಯಾಗುತ್ತಿದೆ ಮೋಸವಾಗುತ್ತಿದೆಯೆಂದು ಹೇಳಿದ್ದಾರೆ. ನಿಜ. ಇದನ್ನು ತಡೆಯುವುದಕ್ಕೋಸ್ಕರ ಈ ಸದನದಲ್ಲಿಯೇ, ಒಂದು ತಿದ್ದುಪಡಿಯನ್ನು ತರುತ್ತಿದ್ದೇನೆ. ತುಮಕೂರಿನಲ್ಲಿ ಜೂನ್ ಮೊದಲನೇ ವಾರದಲ್ಲಿ, ಮಾರ್ಕೆಟ್ ಯಾರ್ಡ್ ಷಿಫ್ಟ್ ಮಾಡಲಾಗುವುದೆಂದು ಮಾನ್ಯ ಶಿವನಂಜಪ್ಪನವರ ಗಮನಕ್ಕೆ ತರುತ್ತೇನೆ. ಮಾನ್ಯ ಸದಸ್ಯರಾದ ಆಚಾರ್‌ರವರು ಹೇಳಿದಂತೆ ಹಣಕಾಸಿನ ತೊಂದರೆಯಿಂದ ಕೆಲವು ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಒಂದೊಂದು ತಾಲ್ಲೂಕಿನಲ್ಲೂ ಅಸಿಸ್ಟೆಂಟ್ ರಿಜಿಸ್ಟ್ರಾರ್ ನೇಮಕ ಮಾಡುತ್ತೇನೆಂದು ಹೇಳಿದೆ. ಹಣಕಾಸಿನ ತೊಂದರೆಯಿಂದ ಸಾಧ್ಯವಾಗಲಿಲ್ಲ. ಸಿ.ಸಿ.ಎ. ಬಗ್ಗೆ ಅಂತಿಮ ತೀರ್ಮಾನ ಮಾಡಿ, ಕ್ರಮ ತೆಗೆದುಕೊಳ್ಳಲಾಗುವುದು. ಮಂಗಳೂರು ಮತ್ತು ಬೆಳಗಾಂನಲ್ಲಿ ತರಬೇತಿ ಕೇಂದ್ರಗಳನ್ನು ಮಾಡುತ್ತೇನೆಂದು ಹೇಳಿದ್ದೆ, ಮಂಗಳೂರಿನಲ್ಲಿ ಮಾಡಲಾಗಿದೆ, ಬೆಳಗಾಂನಲ್ಲಿ ಈ ವರ್ಷ ಮಾಡುವುದಕ್ಕೆ ಸಾಧ್ಯವಾದರೆ ಪ್ರಯತ್ನ ಮಾಡುತ್ತೇನೆ ಎನ್ನುವ ಭರವಸೆ ಕೊಡುತ್ತೇನೆ, ೫೦ ಪರ್ಸೆಂಟ್ ಕೆಲಸಗಳಾಗಿವೆ. ಸಾಧ್ಯವಾದಷ್ಟು ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಶರಾಬಿ ಬಗ್ಗೆ ಫೌಂಡೇಷನ್ ಕೂಡ ಹಾಕಿಲ್ಲ. ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡಿದ್ದಾರೆ. ಲಿಫ್ಟ್ ಇರಿಗೇಷನ್ ಮೂಲಕವಾದರೂ ೨-೩ ಸಾವಿರ ಎಕರೆಯಲ್ಲಿ ಕಬ್ಬು ಬೆಳೆಯುವುದಕ್ಕೆ ವ್ಯವಸ್ಥೆ ಮಾಡಿ, ಲಾಭ ನಷ್ಟ ಎರಡೂ ಇಲ್ಲದೆ ಕಾರ್ಖಾನೆಯನ್ನು ನಡೆಸಿಕೊಂಡು ಹೋಗುವುದಕ್ಕೆ ಅನುಕೂಲ ಮಾಡಬೇಕಾಗುತ್ತದೆ. ಇನ್ನು ಗೇರು ಬೀಜದ ಮಾರಾಟದಲ್ಲಿ ವಸೂಲು ಆಗಿರುವ ಕಮರ್ಷಿಯಲ್ ಟ್ಯಾಕ್ಸ್ ವಿಚಾರದಲ್ಲಿ ಹೇಳಿದ್ದಾರೆ. ಅದರ ಬಗ್ಗೆ ಕೂಡ ಕ್ರಮ ತೆಗೆದು ಕೊಳ್ಳುತ್ತೇನೆ. ಇಲಾಖೆಯನ್ನು ಅಭಿವೃದ್ಧಿ ಪಡಿಸುವ ದೃಷ್ಟಿಯಿಂದ ನನ್ನ ಶಕ್ತಿ ಮೀರಿ ಕೆಲಸ ಮಾಡಿದ್ದೇನೆ. ನೂರಕ್ಕೆ ನೂರು ಅಭಿವೃದ್ಧಿಯಾಗಿದೆಯೆಂದು ಹೇಳುವಂಥ ಭೂಪ ನಾನಲ್ಲ. ಈ ಮನೆಯ ಸದಸ್ಯರ ಸಹಕಾರದ ಜೊತೆಗೆ ಆಶೀರ್ವಾದವೂ ಬೇಕು. ಕರ್ನಾಟಕ ರಾಜ್ಯದಲ್ಲಿ ಸಹಕಾರ ಇಲಾಖೆ ಇದೆ ಎನ್ನುವುದು ಜನರ ಮನಸ್ಸಿಗೆ ಬರುವಂತೆ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ಈ ಮನೆ ನನ್ನ ಇಲಾಖೆಯ ಬೇಡಿಕೆಗಳಿಗೆ ಒಪ್ಪಿಗೆ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಕೆ. ಬಿ. ಪಾಟೀಲ್.—ಮಾನ್ಯ ಸಚಿವರು ಬಹಳ ಉತ್ತಮವಾಗಿ ಉತ್ತರ ಕೊಟ್ಟಿದ್ದಾರೆ. ನನ್ನ ಕ್ಲಾರಿಫಿಕೇಷನ್ ಇದೆ. ಮೊದಲನೆಯದಾಗಿ, ಗೋಡೌನ್ ಸಾಕಷ್ಟಿವೆ ಎಂದಿದ್ದಾರೆ. ಎಲ್ಲೆಲ್ಲಿವೆ?

ಇಲ್ಲದಿರುವ ಕಡೆ ಸ್ಥಳ ಕೊಡುವ ವ್ಯವಸ್ಥೆ ಮಾಡಬೇಕು. ಎಲ್ಲೆಲ್ಲಿ ಸಹಕಾರ ಸಂಘಗಳು ಗೋಡೌನ್ ಗಳನ್ನು ಹೊಂದಿವೆ ಅಲ್ಲೆಲ್ಲ ಸಾಲ ಕೊಡಲು ಏನೇನು ವ್ಯವಸ್ಥೆ ಮಾಡುತ್ತಿದ್ದೀರಿ? ಪ್ರತಿಯೊಂದು ತಾಲ್ಲೂಕಿನಲ್ಲೂ ವೇಬ್ರಿಜ್ ಹಾಕುವ ವ್ಯವಸ್ಥೆ ಮಾಡಿದರೆ ಒಳ್ಳೆಯದು. ಹಾಗೆಯೇ ರೆಗ್ಯುಲೇಟೆಡ್ ಮಾರ್ಕೆಟ್ ಬಗ್ಗೆ ನಿಮ್ಮ ಶ್ರಮ ಮೆಚ್ಚುಗೆಯಾಗಿದೆ. ಇನ್ನು ಕೆಲವು ಸಂಘ ಸಂಸ್ಥೆಗಳನ್ನು ಲಿಕ್ವಿಡೇಟ್ ಮಾಡಲಾಗುವುದು ಎನ್ನುವಂತಹ ಮಾತನ್ನು ಹೇಳಿದ್ದೀರಿ. ಬಹಳ ಸಂತೋಷ. ಯಾವುದನ್ನು ಸುಧಾರಿಸಲು ಸಾಧ್ಯವಿಲ್ಲವೋ ಅವನ್ನು ಮಾಡಿ.

ಇನ್ನು ತುಂಗಭದ್ರಾ ಟೆಕ್ಸ್‌ಟೈಲ್ ಮಿಲ್ಸ್ ಬಗ್ಗೆ ಹೇಳುವುದಾದರೆ, ಅಲ್ಲಿ ಕೆಲವು ಅಧಿಕಾರಿಗಳು ಸಹಕಾರಿ ಕಾನೂನಿಗೆ ವಿರುದ್ಧವಾಗಿ ಹಣ ಕೊಟ್ಟಿದ್ದಾರೆ, ಅಲ್ಲದೆ ಮಾನ್ಯ ಮಾದೇಗೌಡರು ಹೇಳಿದಂತೆ ಸಂಸ್ಥೆಗಳನ್ನು ಮಾರಾಟ ಮಾಡುವುದು ಬಹಳ ಹಗುರ. ನೀವು ನಿಜವಾಗಿಯೂ ಸಹಕಾರ ಮಂತ್ರಿಗಳಾಗಿರುವುದರಿಂದ ಒಂದು ಮಾತು ಹೇಳುತ್ತೇನೆ. ಆ ಸಂಸ್ಥೆಗಳ ಮುಖಂಡರಲ್ಲಿ ನೀವು ಸ್ವಲ್ಪವಾದರೂ ವಿಶ್ವಾಸ ಇಡಬೇಕು. ಆದ್ದರಿಂದ ಶುಗರ್ ಮಿಲ್‌ಗಳನ್ನು ಮಾರಾಟ ಮಾಡವುದು ಸರಿಯಲ್ಲ. ನೀವು ಹಣ ಕೊಟ್ಟ ಮೇಲೆ ನಿಮಗೆ ವಿಶ್ವಾಸ ಇರುವವರನ್ನೇ ಅಲ್ಲೇ ಹಾಕಿ ನಿಮಗೆ ಒಳ್ಳೆಯ ಕ್ರೆಡಿಟ್ ಆದರೂ ಬರುತ್ತದೆ.

ಶ್ರೀ ಆರ್ ಎಲ್. ಜಾಲಪ್ಪ.—ಅಧ್ಯಕ್ಷರೇ, ಸನ್ಮಾನ್ಯ ಪಾಟೀಲರು ಒಳ್ಳೆಯ ಸಲಹೆಗಳನ್ನು ಇಟ್ಟಿದ್ದಾರೆ. ಎಪಿಎಂಸಿ ಅಮೆಂಡ್‌ಮೆಂಟ್ ಈಗಾಗಲೇ ಫೈನಲೈಸಾಗಿದೆ. ಆದರೂ ಅವನ್ನು ಪಾಟೀಲರಿಗೆ ಕೊಟ್ಟು ಅನುಭವ ಎರೆಯಲು ಕೇಳಿಕೊಳ್ಳುತ್ತೇನೆ. ಅವರು ಹೇಳಿದ್ದನ್ನು ಒಪ್ಪಿಕೊಳ್ಳಲು ಸಿದ್ಧನಿದ್ದೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಇರುವ ಗೋಡೌನ್‌ಗಳ ಜೊತೆಗೆ ಮತ್ತೆ ೮೦೦ ಮಾಡುತ್ತೇವೆ. ಸೂಕ್ತ ಪ್ರಮಾಣದ ಸಾಲ ಸ್ಥಳಗಳು ಸಿಗುವಂತೆ ವ್ಯವಸ್ಥೆ ಮಾಡುತ್ತೇವೆ. ಮತ್ತು ಲಿಕ್ವಿಡೇಷನ್ ಮಾಡುವ ಮುಂಚೆ ಅದು ನಿಜವಾಗಿಯೂ ಸಿಕ್ಕಾಗಿದೆಯೇ ಇಲ್ಲವೇ ಎನ್ನುವುದನ್ನು ನೋಡಿಯೇ ಮಾಡುತ್ತೇವೆ. ಇನ್ನು ವೇಬ್ರಿಜ್ಜಸ್ ಬಗ್ಗೆ ಹೇಳುವುದಾದರೆ ಬೆಂಗಳೂರಿನಲ್ಲಿ, ಹುಬ್ಬಳ್ಳಿ, ರಾಯಚೂರು ಇಂಥ ಕಡೆಗಳಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆಂದು ಹೇಳುತ್ತೇನೆ. ಇನ್ನು ತುಂಗಭದ್ರಾ ಟೆಕ್ಸ್‌ಟೈಲ್ ಮಿಲ್‌ನಲ್ಲಿ ಧಾರವಾಡ ಜಿಲ್ಲಾ ಬ್ಯಾಂಕ್‌ನವರು ೫ ಲಕ್ಷ ಕೊಟ್ಟಿದ್ದಾರೆ. ಇನ್ನೂ ಏನೇನೊ ಮಾಡಿದ್ದಾರೆ. ಅದಕ್ಕೋಸ್ಕರ ಸೂಪರ್‌ಸೀಡ್ ಮಾಡಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ. ರೈತರ ಸುಸ್ತಿ ಬಡ್ಡಿ ಮನ್ನಾ ವಿಚಾರದಲ್ಲಿ ಈ ಸರ್ಕಾರ ಇನ್ನೂ ಲಘು ನಿಲುವು ತೆಗೆದುಕೊಳ್ಳಬೇಕಾಗಿದೆ. ನೀವು ಈಗ ಕೊಟ್ಟಿರುವ ರಿಯಾಯಿತಿಗಳು ಮೇಲ್ಪಟ್ಟದ ಮತ್ತು ಮಧ್ಯಮ ವರ್ಗದ ರೈತರಿಗೆ ಸಹಕಾರಿಯಾಗಿವೆ. ಇದರಿಂದ ಸಣ್ಣ ರೈತರು ನಿರಾಶರಾಗಿದ್ದಾರೆ. ಅವರು ತಮ್ಮದನ್ನು ಮನ್ನಾ ಮಾಡಲು ಹೋರಾಟ ಮಾಡಿದರೆ ಆಶ್ಚರ್ಯವಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ —ಹೋರಾಟ ಮಾಡಿದರೆ ಅದು ಬಗೆಹರಿಯುವುದಿಲ್ಲ. ಅದಕ್ಕೆ ನಬಾರ್ಡ್‌ನವರ ಕೆಲವು ಕಂಡೀಷನ್‌ಗಳು ಮತ್ತು ಕಾಯಿದೆಗಳು ಇವೆ. There should be some method in our madness also. ಹೇಗೆ ಮಾಡುವುದು? ಅವರು ಆಬ್ಜೆಕ್ಷನ್ ತೆಗೆದುಕೊಳ್ಳುವುದಿಲ್ಲವೆ? They have been helping us. ಸುಮ್ಮನೆ ಹೇಳಿದರೆ ಆಗುವುದಿಲ್ಲ, ಅವರನ್ನು ಎದುರು ಹಾಕಿಕೊಳ್ಳುವುದಕ್ಕೆ ನಾನು ತಯಾರಾಗಿಲ್ಲ. ಬರಗಾಲದ ಹಿತದೃಷ್ಟಿಯನ್ನಿಟ್ಟುಕೊಂಡು ಬಡ್ಡಿಯನ್ನು ವಜಾಮಾಡಬಹುದು. ಅವರ ಕಂಡೀಷನ್‌ನೊಳಗೆ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಅಲ್ಪಾವಧಿ ಸಾಲದ ಪೂರ್ಣ ಬಡ್ಡಿಯನ್ನು ವಜಾ ಮಾಡುತ್ತೇವೆ. ೧೯೮೫—೮೬ರಲ್ಲಿ ೪ ಕೋಟಿ ರೂಪಾಯಿಗಳನ್ನು ಬಡ್ಜೆಟ್‌ನಲ್ಲಿ ಪ್ರೊವೈಡ್ ಮಾಡಿದ್ದೇವೆ ಉಳಿದ ರೈತರಿಗೆ ೭ ರೂಪಾಯಿ ಬಡ್ಡಿ ಕೊಡುವಂತೆ ಕನ್‌ವರ್ಷನ್ ಮಾಡುತ್ತೇವೆಂದ ಹೇಳಿದ್ದೇವೆ. ಇದಕ್ಕಿಂತ ಹೆಚ್ಚಿಗೆ ಮಾಡುವುದಕ್ಕೆ ಆಗುವುದಿಲ್ಲ. ಮೂರು ವರ್ಷ ಸತತವಾಗಿ ಕ್ಷಾಮ ಇದೆಯೆಂದು ಬಡ್ಡಿಯನ್ನು ವಜಾ ಮಾಡಲಾಗಿದೆ, ನಾಲ್ಕನೇ ವರ್ಷವೂ ಬಡ್ಡಿಯನ್ನು ವಜಾ ಮಾಡುವುದಕ್ಕೆ ಬರುವುದಿಲ್ಲ. ಈ ಬಗ್ಗೆ ನಬಾರ್ಡ್‌ನವರನ್ನು ಕೇಳಿದಾಗ ಅವರು ನಾಲ್ಕನೇ ವರ್ಷ ಕೂಡ ಬಡ್ಡಿಯನ್ನು ವಜಾ ಮಾಡುವುದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ. ಅದರ ಜೊತೆಗೆ ಕ್ಷಾಮಢಾಮರಗಳು ಜಾಸ್ತಿಯಾಗಿವೆ ಶೇಕಡ ೭೫ರಷ್ಟು ವಸೂಲಿ ಮಾಡುವುದಕ್ಕೆ, ಸಹ

ಕಷ್ಟ ಎಂದು ಹೇಳಿದ್ದೇವೆ. unlimited finance for minor irrigation or for any other scheme—ಕೊಡುವುದರ ಬಗ್ಗೆ ನಾವು ಅವರನ್ನು ಕೇಳಿಕೊಂಡೆವು. ನಾನೇ ಬಾಂಬೆಗೆ ಹೋಗಿ ನಬಾರ್ಡ್ ಸಂಸ್ಥೆಯ ಛೇರ್ಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್‌ರವನ್ನು ಕೇಳಿದ್ದೇನೆ. ಕ್ಷಾಮ ಬಹಳ ಇದೆ, ಎಲ್ಲವನ್ನೂ ರಿಲ್ಯಾಕ್ಸ್ ಮಾಡಿದರೆ ಕಷ್ಟವಾಗುತ್ತದೆ ಶೇಕಡ ೪೦ರಿಂದ ೫೦ರವರೆಗೆ ಮಾಡಬಹುದು, ಆದರೂ ಅವರು Sky is the limit. Go ahead ಎಂದು ಹೇಳಿದರು.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಿನ್ನೆ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ರೈತರ ಸಾಲದ ಬಡ್ಡಿಯನ್ನು ಮನ್ನಾ ಮಾಡಲು ಪರಿಶೀಲಿಸಲಾಗುತ್ತದೆಂದು ಸದನಕ್ಕೆ ಆಶ್ವಾಸನೆ ಕೊಟ್ಟರು. ಅದರ ಬಗ್ಗೆ ಮತ್ತೊಮ್ಮೆ ಚಿಂತನೆ ಮಾಡಿ ರೈತರ ಸಾಲದ ಬಡ್ಡಿಯನ್ನು ಪೂರ್ಣ ಮನ್ನಾ ಮಾಡಿದರೆ ಬಹಳ ಉಪಕಾರವಾಗುತ್ತದೆ ರೈತರು ಮಳೆ ಇಲ್ಲದೆ ಕೈಸುಟ್ಟುಕೊಂಡಿದ್ದಾರೆ, ಈ ಬಗ್ಗೆ ಮುಖ್ಯ ಮಂತ್ರಿಗಳಲ್ಲಿ ಸಹ ಹೇಳಿದ್ದಾರೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಮುಖ್ಯಮಂತ್ರಿಗಳು ಯಾವ ಅರ್ಥದಲ್ಲಿ ಹೇಳಿದ್ದಾರೋ ನನಗೆ ಗೊತ್ತಿಲ್ಲ. ನಮ್ಮ ಇಲಾಖೆಯ ಸಾಲದ ಬಡ್ಡಿಯನ್ನು ಔದಾರ್ಯದಿಂದ ವಜಾ ಮಾಡುವುದಾದರೆ ನನ್ನ ಅಭ್ಯಂತರವಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್‌ನವರಿಗೆ ಗೇಣಿದಾರರ ಪರವಾಗಿ ನಾವು ಪರಿಹಾರ ಕೊಡುತ್ತೇವೆಂದು ಕಳೆದ ಸಾರಿಯ ಬಜೆಟ್‌ನಲ್ಲಿ ಹೇಳಿದ್ದಾರೆ. ಗೇಣಿದಾರರಿಗೆ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್‌ನವರು ನೋಟಿಸ್ ಕೊಡುತ್ತಿದ್ದಾರೆ. ಅದನ್ನು ಕಟ್ಟಿಕೊಡುವ ಜವಾಬ್ದಾರಿ ಸರ್ಕಾರಕ್ಕೆ ಇದೆಯೆ? ನಮ್ಮ ಸ್ನೇಹಿತರೊಬ್ಬರು ಹೇಳಿದರು, ೬ ಕೋಟಿ ರೂಪಾಯಿ ಕೊಟ್ಟಿದ್ದಾರೆಂದು. ಹೇಳಿದ್ದಾರೆ, ಸರ್ಕಾರದವರು ನಿಜವಾಗಿಯೂ ಕೊಟ್ಟಿದ್ದರೆ ನಾನು ಅಭಿನಂದಿಸುತ್ತೇನೆ. ರೈತರ ಸಾಲದ್ದು ಮೂಲ ಸಮಸ್ಯೆಯಾಗಿದೆ. ಸಣ್ಣ ರೈತರು, ಅತಿ ಸಣ್ಣ ರೈತರು ಏನಿದ್ದಾರೆ ಅವರು ಕೋ—ಆಪರೇಟಿವ್ ಸೊಸೈಟಿಗಳಲ್ಲಿ ೮೦ ಕೋಟಿ ರೂಪಾಯಿ ಸಾಲ ಮಾಡಿದ್ದಾರೆ. ತಾವು ಹೇಳುವುದು ೫೦ ಕೋಟಿ, ಮತ್ತೊಂದು ೬ ಕೋಟಿ. ರೈತರ ಸಾಲವನ್ನು ರದ್ದು ಮಾಡಿದರೆ ತಮಗೆ ಕೀರ್ತಿ ಬರುತ್ತದೆ. ಮಹಾರಾಷ್ಟ್ರದಲ್ಲಿ ಮತ್ತು ತಮಿಳುನಾಡಿನಲ್ಲಿ ಸಾಲವನ್ನು ವಜಾ ಮಾಡಿದ್ದಾರೆ. ಅದರ ಬಗ್ಗೆ ಮಾನ್ಯಮಂತ್ರಿಗಳು ಹೇಳಬೇಕು. ಹೊಸ ಬಾವಿಗಳನ್ನು ಮಾಡಲು ಸಾಲ ಕೊಡುತ್ತೇವೆಂದು ಮೊದಲು ಹೇಳಿ. ಈಗ ಇರತಕ್ಕ ಹಳೆಯ ಬಾವಿಗಳಲ್ಲಿ ಬೋರ್‌ವೆಲ್‌ಗಳನ್ನು ಹಾಕಿಕೊಳ್ಳುವುದಕ್ಕೆ ಸಾಲ ಕೊಡುತ್ತೇವೆಂದು ಹೇಳುತ್ತಿದ್ದಾರೆ. ದಯವಿಟ್ಟು ಇದರ ಬಗ್ಗೆ ಮಾನ್ಯ ಮಂತ್ರಿಗಳು ಕ್ಲಾರಿಫೈ ಮಾಡಬೇಕು. ಹಳೆಯ ಬಾವಿ ಮತ್ತು ಹೊಸ ಬಾವಿಗಳ ಸರ್ವೆ ಮಾಡಿಸಿದ್ದಾರೆ. ಸರ್ವೆಯಲ್ಲಿ ಸಹ ಬಂದಿದೆ, ಇಲ್ಲಿ ನೀರು ಇದೆ ಡಾರ್ಕ್ ಏರಿಯಾ ಇಲ್ಲವೆಂದು ಹೇಳಿದ್ದಾರೆ, ಅಂಡರ್ ಗ್ರೌಂಡ್‌ನಲ್ಲಿ ಬೇಕಾದಷ್ಟು ನೀರು ಇದೆ. ಇದರ ಬಗ್ಗೆ ಕೂಡ ಹೇಳಬೇಕು ಗೌರಿಬಿದನೂರು ಸಕ್ಕರೆ ಕಾರ್ಖಾನೆಯ ಬಗ್ಗೆ ಅವರು ಏನು ಹೇಳುವುದೆಂದರೆ ೮೬ ಲಕ್ಷ ರೂಪಾಯಿಗಳನ್ನು ನಾವು ಡಿಸ್ಟಿಲರೀಸ್‌ಗೆ ಖರ್ಚು ಮಾಡಿರುವುದು, ಮತ್ತು ೧೮ ಲಕ್ಷ ರೂಪಾಯಿಗಳನ್ನು ನಾವು ಬಾಡಿಗೆ ಕೊಡುತ್ತಿರುವುದು. ಇದು ಸುಪ್ರೀಂ ಕೋರ್ಟ್‌ಗೆ ಹೋಗಿ ಹೈಕೋರ್ಟ್‌ಗೆ ವಾಪಸ್ಸು ಬಂತು. ಸಿಂಗಲ್ ಜಡ್ಜ್ ಬೆಂಚಿನಲ್ಲಿ ಸರ್ಕಾರದ ವಿರುದ್ಧ ಆದದ್ದು ಉಂಟು. ಇದು ಸುಮಾರು ಕೋಟಿಗಟ್ಟಲೆ ವ್ಯವಹಾರದ್ದು. ೧೫ ಲಕ್ಷ ರೂಪಾಯಿಗಳನ್ನು ವಾಪಸ್ಸು ಕೊಡುವುದಕ್ಕೆ ಅವರು ಬಂದಿದ್ದರು, ನಾನು ಒಪ್ಪಿಕೊಳ್ಳುತ್ತೇನೆಂದು. ೧೫ ಲಕ್ಷ ರೂಪಾಯಿಗಳನ್ನು ವಾಪಸ್ಸು ಕೊಡುತ್ತೇನೆಂದು ಪ್ರೈವೇಟಾಗಿ ಹೇಳಿದ್ದ. ಹೈಕೋರ್ಟಿನಲ್ಲಿ ವಿರುದ್ಧ ಆದಮೇಲೆ ಯಾರೋ ಒಬ್ಬ ಲಾಯರು ಅಡ್ವೈಸ್ ಕೇಳಿಕೊಂಡು ಇವರು ಅಪೀಲ್ ಹಾಕಲಿಲ್ಲ. ಆದರಿಂದ ಒಟ್ಟಿನಲ್ಲಿ ಗೌರಿಬಿದನೂರು ಸಕ್ಕರೆ ಕಾರ್ಖಾನೆಗೆ ನಷ್ಟವಾಗಿದೆ. ಲೀಸ್ ಪಿರಿಯಡ್ ಆಗಿ ಹೋಗಿಬಿಟ್ಟಿದೆ. ಅದನ್ನು ಈಗ ತೆಗೆದುಕೊಂಡರೆ ಗೌರಿಬಿದನೂರು ಸಕ್ಕರೆ ಕಾರ್ಖಾನೆಯೂ ನಡೆಯುತ್ತದೆ ಮತ್ತು ಅಲ್ಲಿಯ ರೈತರಿಗೂ ಮತ್ತು ಕಾರ್ಮಿಕರಿಗೂ ಸಹ ಇದರಿಂದ ಅನುಕೂಲ ವಾಗುತ್ತದೆ. ಅದನ್ನು ಪುನಃ ಪರಿಶೀಲಿಸಬೇಕು.

ಶ್ರೀ ಆರ್. ಎಲ್. ಜಾಲಪ್ಪ.— ಮಾನ್ಯ ವೆಂಕಟರಾಮಯ್ಯನವರು ಯಾರು ಏನೇನು ಹೇಳು ತ್ತಾರೆ ಅದೆಲ್ಲಾ ನಿಜವೆಂದು ತಿಳಿದುಕೊಂಡಿದ್ದಾರೆ. ಅವರು ಒಳ್ಳೆಯ ಲಾಯರ್ ಎಂದು ಕೋಲಾರದಲ್ಲಿ ಹೇಳುತ್ತಾರೆ. ಲೀಸ್ ಪಿರಿಯಡ್ ಮುಗಿದಿದ್ದರೆ ಒಂದು ದಿವಸ ಕೂಡ ಬಿಡುತ್ತಿರಲಿಲ್ಲ. ಲೀಸ್ ಹತ್ತು

ವರ್ಷಗಳಿಗೆ ಆಗಿದೆ. ಅದು ಸುಮಾರು ೧೯೭೭–೭೮ ಅಥವಾ ೧೯೭೮–೭೯ರಲ್ಲಿ ಲೀಸ್ ಕೊಟ್ಟಿದ್ದಾರೆ. ಇನ್ನು ಮೂರು ಮೂರುವರೆ ವರ್ಷಗಳ ಲೀಸ್ ಪಿರಿಯಡ್ ಇದೆ. ೧೫ ಲಕ್ಷ ರೂಪಾಯಿಗಳನ್ನು ಕೊಡ ಬೇಕೆಂದು ಹೈಕೋರ್ಟ್‌ನಲ್ಲಿ ತೀರ್ಮಾನವಾಗಿದೆ. ಅದರ ಮೇಲೆ ಇದು ಸುಪ್ರೀಂ ಕೋರ್ಟ್‌ಗೆ ಹೋಗಿ ಇದು ಸರಿಯಲ್ಲವೆಂದು ಅವರು ಒಡೆದುಹಾಕಿ ಇದನ್ನು ಡಿಸ್‌ಪೋಸ್ ಮಾಡಿಯೆಂದು ಹೈಕೋರ್ಟ್‌ಗೆ ವಾಪಸ್ಸು ಮಾಡಿದರು. ಅನಂತರ ಕಾನೂನು ಇಲಾಖೆಯನ್ನು ಕೇಳಲಾಗಿ, ಅವರು ಅಪೀಲ್ ಮಾಡಲಿಕ್ಕೆ ಇದು ಫಿಟ್ ಕೇಸ್ ಅಲ್ಲ, ಇದು ಈಗಾಗಲೇ ಸುಪ್ರೀಂ ಕೋರ್ಟ್‌ಗೆ ಹೋಗಿ ವಾಪಸ್ಸು ಬಂದಿದೆ, ಏನೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ ಮೇಲೆ ಬಿಟ್ಟಿದ್ದೇವೆಯೇ ವಿನಹ ಯಾರೋ ರೈತರು ಮತ್ತು ನೌಕರರು ಹೇಳುತ್ತಾರೆಂದು ಇದನ್ನು ತಾವು ಅರ್ಥಮಾಡಿಕೊಳ್ಳದೆ ಹೇಳಬಾರದು. ಕಾರ್ಖಾನೆಯ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡಿದ್ದೇವೆಯೇ ವಿನಹ ಇದರಲ್ಲಿ 'ಯಾರ ಹಿತದೃಷ್ಟಿಯೂ ಇಲ್ಲ. ಬೇಕಾದರೆ ಮಾನ್ಯ ವೆಂಕಟರಾಮಯ್ಯನವರನ್ನೇ ಛೇರ್ಮನ್ ಆಗಿ ಮಾಡುತ್ತೇನೆ, ಧೈರ್ಯವಿದ್ದರೆ ಅವರು ಅಲ್ಲಿ ಕೆಲಸ ಮಾಡಲಿ. ನೋ ಲಾಸ್ ನೋ ಪ್ರಾಫಿಟ್ ಮೇಲೆ ಅವರು ನಡೆಸಲಿ. ಈಗಲೇ ೧೨ ಗಂಟೆಯೊಳಗೆ ಛೇರ್ಮನ್ ಆಗಿ ಆರ್ಡರ್ ಮಾಡುತ್ತೇನೆ ತಾವು ಬನ್ನಿ I will give you authority. ನೀವೇ ನಡೆಸಿ ನಿಮ್ಮ ಶಾನಪ್ಪನವರು ನಡೆಸುವುದಾದರೆ ಅವರೇ ನಡೆಸಲಿ. ಮತ್ತೊಂದು ವಿಚಾರವನ್ನು ಹೇಳಿದರು, ಕಳೆದವರ್ಷ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್‌ನವರು ಗೇಣಿದಾರರಿಗೆ ಕೊಟ್ಟ ಸಾಲವನ್ನು ವಜಾ ಮಾಡುತ್ತೇವೆಂದು ಹೇಳಿದ್ದಾರೆಂದು ಹೇಳಿದರು. ನಾವು ಎಲ್ಲೂ ಆ ರೀತಿಯಾಗಿ ಹೇಳಿಲ್ಲ. ಸರ್ಕಾರದ ಆರ್ಡರ್‌ನಲ್ಲಿ ಗೇಣಿದಾರರಿಂದ ಏನು ಪ್ರೀಮಿಯಮ್ ಬರಬೇಕು ಅದನ್ನು ವಜಾ ಮಾಡುತ್ತೇವೆಂದು ಹೇಳಿದ್ದೇವೆ, ಅದನ್ನು ಮಾಡಿದ್ದೇವೆ. ದುರಾದೃಷ್ಟಕರ, ೧೧ಕೋಟಿ ರೂಪಾಯಿಗಳನ್ನು ಕೆಲವು ಜನರು ಭೂ ಅಭಿವೃದ್ಧಿ ಬ್ಯಾಂಕ್‌ನಲ್ಲಿ ಸಾಲಮಾಡಿ ಹಣ ಕಟ್ಟಿಬಿಟ್ಟಿದ್ದರು. ಅದರಲ್ಲಿ ಇನ್ನು ೭ಕೋಟಿ ರೂಪಾಯಿ ಪಿ. ಎಲ್. ಡಿ. ಬ್ಯಾಂಕಿಗೆ ಬಾಕಿ ಇದೆ. ಆ ಹಣವನ್ನು ವಜಾ ಮಾಡುತ್ತೇವೆಂದು ಹೇಳಿಲ್ಲ. ಸರ್ಕಾರಕ್ಕೆ ಬರಬೇಕಾದ ಹಣವನ್ನು ವಜಾ ಮಾಡುತ್ತೇವೆಂದು ಹೇಳಿಲ್ಲ. ಸರ್ಕಾರಕ್ಕೆ ಬರಬೇಕಾದ ಹಣವನ್ನು ವಜಾ ಮಾಡುತ್ತೇವೆಂದು ಹೇಳಿದ್ದೇವೆಯೇ ವಿನಹ ಬ್ಯಾಂಕಿಗೆ ಬರುವುದನ್ನು ವಜಾ ಮಾಡುತ್ತೇವೆಂದು ಹೇಳಿಲ್ಲ. ಅಡ್ಜಸ್ಟ್‌ಮೆಂಟ್ ಇತ್ಯಾದಿ ಏನೂ ಇಲ್ಲ, ನಾನು ಬೇಕಾದರೆ ಮುಖ್ಯಮಂತ್ರಿಯವರ ಗಮನಕ್ಕೆ ಇದನ್ನು ತರುತ್ತೇನೆ ಅದರ ಬಗ್ಗೆ ಸಚಿವ ಸಂಪುಟದಲ್ಲಿ ಏನು ತೀರ್ಮಾನವಾಗುತ್ತದೋ ನೋಡೋಣ. ರೈತರ ಸಾಲ ೮೦ ಕೋಟಿ ರೂಪಾಯಿಯನ್ನು ವಜಾ ಮಾಡಿದರೆ ಕೀರ್ತಿ ಬರುತ್ತದೆಂದು ಹೇಳಿದರು. ಸಣ್ಣ ಕೀರ್ತಿ ಬರುತ್ತದೆಂದು ಮಾಡಿದರೆ ದೊಡ್ಡ ಅಪಕೀರ್ತಿ ಬರುತ್ತದೆ ಸ್ವಾಮಿ. ರೈತರಿಗೆ ಕೊಟ್ಟಿರತಕ್ಕ ೫೦–೮೦ ಕೋಟಿ ರೂಗಳ ಸಾಲವನ್ನು ವಜಾ ಮಾಡಿದರೆ ಇನ್ನು ಮುಂದೆ ಮೂರು ಕಾಸು ಕೂಡ ಸಾಲ ನಮ್ಮ ರೈತರಿಗೆ ಸಿಗುವುದಿಲ್ಲ. ಸಣ್ಣ ಕೆಲಸ ಮಾಡಿ ಕೀರ್ತಿ ತೆಗೆದುಕೊಳ್ಳುವುದಕ್ಕೆ ಆಸೆಪಟ್ಟು ಅಪಕೀರ್ತಿ ತೆಗೆದುಕೊಳ್ಳುವುದಕ್ಕೆ ನಾನು ತಯಾರಾಗಿಲ್ಲವೆಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಮಂತ್ರಿಗಳು ಗೃಹ ನಿರ್ಮಾಣ ಸಹಕಾರ ಸಂಘಗಳ ಬಗ್ಗೆ ಮಾತನಾಡುತ್ತಾ, ಮೂರು ಜನರ ಒಂದು ಸಮಿತಿಯನ್ನು ಮಾಡಿದ್ದೇವೆ, ಅವರು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಅವರು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಅವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ ನಿಜ. ಕೆಲವು ದೂರುಗಳು ಬಂದಿವೆ. ಇನ್ನೂ ಹಲವಾರು ಕೇಸುಗಳನ್ನು ಹಾಗೆಯೇ ಇಟ್ಟುಕೊಂಡಿದ್ದಾರೆ, ಕೇಸುಗಳು ಬೇಗನೆ ತೀರ್ಮಾನವಾಗುತ್ತಿಲ್ಲ, ಎಷ್ಟು ತೀರ್ಮಾನ ಆಗಿವೆಯೋ, ಎಷ್ಟು ತೀರ್ಮಾನ ಆಗಿಲ್ಲವೋ ಗೊತ್ತಿಲ್ಲ. ಕೆಲವು ತೀರ್ಮಾನ ಆಗಿದ್ದರೂ ಅದಕ್ಕೆ ಕ್ಲಿಯರೆನ್ಸ್ ಕೊಡುತ್ತಾ ಇಲ್ಲ. ವಿಶೇಷ ಜಿಲ್ಲಾಧಿಕಾರಿಗಳವರು ತಕರಾರುಗಳನ್ನು ತಂದು ಕ್ಲಿಯರೆನ್ಸ್ ಕೊಡುತ್ತಿಲ್ಲ ಆದ್ದರಿಂದ ಅವುಗಳನ್ನು ಆದಷ್ಟು ಬೇಗ ತೀರ್ಮಾನ ಮಾಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರೋ ಇದರ ಬಗ್ಗೆ ಏನು ಮಾಡಿದ್ದಾರೆಂಬುದನ್ನು ಇನ್ನೊಮ್ಮೆ ವಿವರಣೆ ಕೊಟ್ಟರೆ ಒಳ್ಳೆಯದು. ಕೋಆಪರೇಟಿವ್ ಸೊಸೈಟಿಗಳ ನೌಕರರು ಏನಿದ್ದಾರೆ ಅವರ ಬಗ್ಗೆ ಸಿಸಿಎ ರೂಲ್ಸ್ ಮಾತ್ರ ಹೇಳಿದ್ದಾರೆ. ಯೂನಿಫಾರಂ ಪೇ ಸ್ಕೇಲು ಕೂಡ ಇರಬೇಕು. ಅದು ಜಾರಿಗೆ ಬರುತ್ತಿಲ್ಲ ಅದರ ಬಗ್ಗೆ ಕ್ರಮವನ್ನು ಸರ್ಕಾರ ತೆಗೆದುಕೊಳ್ಳಬೇಕು. ಇದರ ಬಗ್ಗೆ ಏನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಿ ಎನ್ನುವುದನ್ನು ಹೇಳಬೇಕು.

ಶ್ರೀ ಆರ್. ಎಲ್. ಜಾಲಪ್ಪ.— ಗೃಹ ನಿರ್ಮಾಣ ಸಹಕಾರ ಸಂಘಗಳ ಬಗ್ಗೆ ನೇಮಕ ಮಾಡಿರತಕ್ಕ ಮೂರು ಜನರ ಸಮಿತಿ ಏನಿದೆ ಅದು ಬಹಳಷ್ಟು ಕೇಸುಗಳನ್ನು ಡಿಸ್‌ಪೋಸ್ ಮಾಡಿಲ್ಲವೆಂದು ಮಾನ್ಯ ಸದಸ್ಯರು ಹೇಳಿದರು. ನಾನು ಈ ವ್ಯವಹಾರದಲ್ಲಿ ಇಂಟರ್‌ಫಿಯರ್ ಆಗುತ್ತಾ ಇಲ್ಲ ಆದರೂ ಬೇಗ ಕೇಸುಗಳನ್ನು ಮುಗಿಸಿ ಎಂದು ಹೇಳುತ್ತೇನೆ ಮೂರು ಜನರಸಮಿತಿ ಏನಿದೆ ಕೇಸುಗಳನ್ನು ಡಿಸ್‌ಪೋಸ್ ಮಾಡಿದರೂ ಇಲ್ಲಿ clear ಆಗುತ್ತ ಇಲ್ಲವೆಂದು ಹೇಳಿದರು ತಕರಾರು ಹಾಕುತ್ತಿದ್ದಾರೆ. ಇದು ನಮ್ಮ ಗಮನಕ್ಕೂ ಬಂದಿದೆ. ಮಾನ್ಯ ರೆವಿನ್ಯೂ ಮಂತ್ರಿಗಳ ಗಮನಕ್ಕೆ ಇದನ್ನು ತರುತ್ತೇನೆ. ಎರಡನೆಯದಾಗಿ ಎಷ್ಟು ಆಗಿದೆ, ಎಷ್ಟು ಆಗಿಲ್ಲ ಎಂದು ನನಗೆ ಗೊತ್ತಿಲ್ಲ. ನಾನು ಆ ಬಗ್ಗೆ ಎಲ್ಲ ಮಾಹಿತಿಯನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಸಿ.ಸಿ.ಎ. ಪ್ರಕಾರ ಅವರಿಗೆ ಸಂಬಳ ನಿಗದಿ ಮಾಡಬೇಕಾದುದು ಸರಿ. ಆದರೆ ಅವರಿಗೆ ಸಂಬಳ ಕೊಡುವುದು ಹೇಗೆ ? ಸಹಕಾರಿ ಸಂಘಗಳು ಲಾಭ ಮಾಡಿದರೆ ಅವರಿಗೆ ಸಂಬಳವನ್ನು ಕೊಡಬಹುದು. ಇಲ್ಲದಿದ್ದರೆ ಹೇಗೆ ಕೊಡುವುದು ? ಕೆಲವು ಸಂಸ್ಥೆಗಳಲ್ಲಿ ೨೦ ಪರ್ಸೆಂಟ್ ಬೋನಸ್ ಸಿಕ್ಕುತ್ತಿದೆ. ಅಪೆಕ್ಸ್ ಬ್ಯಾಂಕಿನಲ್ಲಿ ೪ನೇ ದರ್ಜೆಯ ನೌಕರನೂ ಕೂಡ ವರಮಾನ ತೆರಿಗೆಯನ್ನು ಕೊಡುತ್ತಿದ್ದಾನೆ. ಅಂದರೆ ಅವರ ಜಿಲ್ಲಾ ಬ್ಯಾಂಕುಗಳು ಚೆನ್ನಾಗಿ ದುಡಿಯುತ್ತಿವೆ. ಅದಕ್ಕಾಗಿ ಅವರು ಸಂಬಳವನ್ನು ಜಾಸ್ತಿ ಕೊಡುತ್ತಿದ್ದಾರೆ. ಯಾವುದೇ ಸಹಕಾರಿ ಸಂಘಗಳು ತನ್ನ ನೌಕರರಿಗೆ ಸಂಬಳವನ್ನು ಜಾಸ್ತಿ ಕೊಡುವ ಶಕ್ತಿ ಇದ್ದರೆ, ಕೊಡಬಹುದು. ಅದಕ್ಕೆ ನಾವು ಅಡ್ಡಿ ಬರುವುದಿಲ್ಲ. ಸಂಬಳವನ್ನು ನಿಗದಿ ಮಾಡಿದ ಮೇಲೆ ರಿಕವರಿಯಾಗದಿದ್ದರೆ ಯಾವ ಸಹಕಾರಿ ಸಂಘಗಳು ನಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. ನೌಕರರು ಸರಿಯಾಗಿ ಕೆಲಸ ಮಾಡಿದ್ದೇ ಆದರೆ, ಯಾವುದೇ ರೀತಿಯಾದ ತೊಂದರೆ ಬರುವುದಿಲ್ಲ ಅವರಿಗೆ ಹೆಚ್ಚಿನ ಸಂಬಳವನ್ನು ಕೊಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.— ನೌಕರರು ಸರಿಯಾಗಿಯೇ ಕೆಲಸ ಮಾಡುತ್ತಿದ್ದಾರೆ. ಆದರೆ ಅವರಿಗೆ ಸರಿಯಾದ ಸಂಬಳವನ್ನೇ ಕೊಡುತ್ತಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.— ಸರಿಯಾಗಿ ಕೆಲಸ ಮಾಡಿದ್ದೇ ಆದರೆ, ಈ ಪರಿಸ್ಥಿತಿಗೆ ಅವರು ಬರುತ್ತಾ ಇರಲಿಲ್ಲ. ಇದಕ್ಕೆ ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ, ದಯಮಾಡಿ ಕೇಳಿ. ಹಾಸನ ಜಿಲ್ಲೆಯಲ್ಲಿ ಸುಮಾರು ೧೪೫ ಸಹಕಾರಿ ಸಂಘಗಳು ಜಿಲ್ಲಾ ಬ್ಯಾಂಕಿಗೆ ಅಟಾಚ್ ಆಗಿವೆ. ಅವುಗಳಲ್ಲಿ ೨ ಸಹಕಾರಿ ಸಂಘಗಳು ಸಾಲದ ವಸೂಲಾತಿಯಲ್ಲಿ ೫೦ ಪರ್ಸೆಂಟ್‌ಗಿಂತ ಹೆಚ್ಚು ವಸೂಲಿ ಮಾಡಿದ್ದರೆ ಇನ್ನುಳಿದ ಮುಕ್ಕಾಲು ಭಾಗದ ಸಹಕಾರಿ ಸಂಘಗಳು ಸಾಲದ ವಸೂಲಾತಿಯಲ್ಲಿ '೦' ಮತ್ತೆ ೧೪೫ ಜನರ ಮೇಲೆ ದುರುಪಯೋಗದ ಆಪಾದನೆ ಇದೆ. ಇಂತಹ ಕಡೆಯಲ್ಲೂ ಸಂಬಳ ಕೊಡಿ ಅಂದರೆ ಹೇಗೆ ಕೊಡುವುದು ? ಒಳ್ಳೆಯ ಕೆಲಸಗಾರರಿಗೆ ಯಾವತ್ತೂ ಉತ್ತೇಜನ ಇದೆ ಅವರಿಗೆ ಸಹಾಯ ಮಾಡಬೇಕೆಂದೇ ಇಷ್ಟೆಲ್ಲಾ ನಾವು ಮಾಡಿದ್ದೇವೆ. ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಲ್ಲೆಲ್ಲಾ ಕಾಮನ್ ಕೇಡರ್ ಇರಬೇಕೆಂದು. ಸರ್ಕಾರದ ಸಂಬಳವನ್ನು ಅವರಿಗೆ ಕೊಟ್ಟಿದ್ದೇವೆ. ಅವರಿಗೆ ಇಷ್ಟೆಲ್ಲಾ ಅನುಕೂಲ ಮಾಡಿಕೊಟ್ಟಿದ್ದು ಅವರಿಗೆ ಸ್ಟ್ರೈಕ್ ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ ಅಷ್ಟೆ. ಅವರು ಸ್ಟ್ರೈಕ್ ಮಾಡುವುದು ಯಾವಾಗ ಎಂದರೆ ಏಪ್ರಿಲ್—ಮೇ ತಿಂಗಳಲ್ಲೇ, ಆ ತಿಂಗಳುಗಳಲ್ಲಿ ಅವರು ಏನಾದರೂ ಕಾರಣವನ್ನು ಹುಡುಕಿ ಸ್ಟ್ರೈಕ್ ಮಾಡುತ್ತಾರೆ. There are no Askers and Tellers. ಆಡಳಿತ ಮಂಡಲಿಯವರಿಗೆ ಅವರ ಮೇಲೆ ಹತೋಟಿಯೇ ಇಲ್ಲವಾಗಿದೆ. ಮಾತೆತ್ತಿದರೆ ಸ್ಟ್ರೈಕ್ ಮಾಡುವುದು, ಗಲಾಟೆ ಮಾಡುವುದು. ಆದರೆ ರಿಕವರಿ ಮಾತ್ರ ಮಾಡುವುದಕ್ಕೆ ಹೋಗುವುದಿಲ್ಲ. ಈ ರೀತಿ ಮಾಡಿರೆ ಅವರಿಗೆ ಸಂಬಳವನ್ನು ಕೊಡುವುದು ಹೇಗೆ ಎಂಬುದನ್ನು ನೀವೇ ಹೇಳಿ ಸ್ವಾಮಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾನು ಹೋದ ಸಲವೂ ಈ ಒಂದು ಪ್ರಶ್ನೆಯನ್ನು ಕೇಳಿದ್ದೆ. ಅದು ಯಾವ ಇಲಾಖೆಯಲ್ಲಿ ಬರುತ್ತದೆಂಬುದನ್ನು ವಿಚಾರ ಮಾಡಿ. ಎಂಬುದಾಗಿ ಹೇಳಿದ್ದೆ. ಅದು ಯಾವುದೆಂದರೆ, ಋಣ ಪರಿಹಾರ ಕಾಯಿದೆ ಏನಿದೆ ಅದರ ಬಗ್ಗೆ ನಾನು ಕಳೆದ ಸಲವೂ ಕೂಡ ಪ್ರಶ್ನೆಯನ್ನು ಕೇಳಿದ್ದೆ. ಇದರಿಂದ ಬಡವರಿಗೆ ಅನುಕೂಲವಾಗುತ್ತದೆ. ಆ ಕಾನೂನನ್ನು ಎಷ್ಟರ ಮಟ್ಟಿಗೆ ಜಾರಿಗೆ ಕೊಡಬೇಕೋ ಅಷ್ಟರಮಟ್ಟಿಗೆ ಅದನ್ನು ಜಾರಿಗೆ ಕೊಡುತ್ತಿಲ್ಲ. ಇದರಿಂದ ಎಷ್ಟೋ ಜನಗಳಿಗೆ ಅನನುಕೂಲವಾಗುತ್ತದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನಾದರೂ ಹೇಳುತ್ತಾರೆಂದು ನಾನು ನಿರೀಕ್ಷೆ ಮಾಡಿದ್ದೆ. ಅದರ ಬಗ್ಗೆ ಅವರು ಏನೂ ಹೇಳಿಲ್ಲ. ಕೊನೆ ಪಕ್ಷ ಅವರ ಇಲಾಖೆಯ

ವರದಿಯಲ್ಲಾದರೂ ಆ ಬಗ್ಗೆ ಪ್ರಸ್ತಾಪ ಮಾಡುತ್ತಾರೆಂದು ನಾನು ನಂಬಿದ್ದೆ, ಅದೂ ಇಲ್ಲ. ಈ ಒಂದು ಕಾನೂನನ್ನು ಶ್ರೀಮಾನ್ ದೇವರಾಜ್ ಅರಸುರವರು ಮುಖ್ಯಮಂತ್ರಿಗಳಾಗಿದ್ದಾಗ ಬಡವರಿಗೆ ಅನುಕೂಲವಾಗುತ್ತದೆಂಬ ಉದ್ದೇಶವನ್ನು ಇಟ್ಟುಕೊಂಡು ಇದನ್ನು ಜಾರಿಗೆ ತಂದರು. ಇದನ್ನು ೨೦ ಅಂಶದ ಕಾರ್ಯಕ್ರಮದಲ್ಲಿ ಒಳ್ಳೆಯ ರೀತಿಯಲ್ಲಿ ಎಗ್ಸಾಮಿನ್ ಮಾಡಿಸಿ ಬಡವರಿಗೆ ಅನುಕೂಲ ಮಾಡುವಂತಹ ವ್ಯವಸ್ಥೆಯನ್ನು ಮಾಡಿದರು. ಆದರೆ ಆ ಕೆಲಸ ನಿಮ್ಮ ಕಾಲದಲ್ಲಿ ನಡೆದೇ ಇಲ್ಲ, ಸಂಪೂರ್ಣವಾಗಿ ನಿಂತು ಹೋಗಿದೆ ಎಂಬುದು ನನಗೆ ಗೊತ್ತಿಲ್ಲ. ಅದರ ಬಗ್ಗೆ ಮಾನ್ಯ ಮಂತ್ರಿಗಳು ವಿವರಣೆಯನ್ನು ನೀಡಬೇಕು. ಮತ್ತೆ ಅನೇಕ ಸೊಸೈಟಿಗಳಲ್ಲಿ, ಕಾರ್ಪೊರೇಷನ್‌ಗಳಲ್ಲಿ ಮಾಡುವಂತಹ ನೇಮಕಾತಿಯಲ್ಲಿ ಹರಿಜನ—ಗಿರಿಜನ ಹಾಗೂ ಹಿಂದುಳಿದ ವರ್ಗದವರಿಗೆ ಬಹಳ ಅನ್ಯಾಯವನ್ನು ಮಾಡುತ್ತಿದ್ದಾರೆ. ಅವರು ಯಾವ ರೀತಿ ಹುದ್ದೆಗಳಿಗೆ ಜಾಹಿರಾತು ಹೊರಡಿಸುತ್ತಾರೆಂದರೆ, ೫ ವರ್ಷಗಳ ಅನುಭವ ಇರಬೇಕು ಎಂಬುದಾಗಿ ಹೇಳುತ್ತಾರೆ. ಆ ಅಭ್ಯರ್ಥಿ ಹತ್ತಿರವೇ ಇರುತ್ತಾರೆ. ಒಂದು ವೇಳೆ ಹರಿಜನ–ಗಿರಿಜನ ಹಾಗೂ ಹಿಂದುಳಿದ ವರ್ಗಕ್ಕೆ ಸೇರಿದ ಅಭ್ಯರ್ಥಿ ಅರ್ಹನಾಗಿದ್ದರೂ ಅವರನ್ನು ಆಯ್ಕೆ ಮಾಡುವುದಿಲ್ಲ. ಈ ರೀತಿ ಮಾಡಿ ಈ ಒಂದು ಜನಾಂಗಕ್ಕೆ ಯಾವ ರೀತಿ ಪ್ರಾತಿನಿಧ್ಯವನ್ನು ಕೊಡಬೇಕೋ ಅದನ್ನು ತಪ್ಪಿಸುವಂಥಾದ್ದು ವ್ಯವಸ್ಥಿತವಾದ ರೀತಿಯಲ್ಲಿ ಕಾರ್ಪೊರೇಷನ್‌ಗಳು, ಸೊಸೈಟಿಗಳು ಕೆಲಸ ಮಾಡುತ್ತಿವೆ. ಆದ್ದರಿಂದ ನೇಮಕಾತಿಯಲ್ಲಿ ಒಂದು ಸ್ಟೇಟ್ ಪಾಲಿಸಿಯನ್ನು ಮಾಡಿ, ಹರಿಜನ–ಗಿರಿಜನ ಹಾಗೂ ಹಿಂದುಳಿದ ವರ್ಗದವರಿಗೆ ನೇಮಕಾತಿಯಲ್ಲಿ ಪ್ರಾತಿನಿಧ್ಯವನ್ನು ಕೊಡುವಂತಹ ವ್ಯವಸ್ಥೆ ಮಾಡಬೇಕು. ಮೂರನೆಯದಾಗಿ, ಗುಲ್ಬರ್ಗದಲ್ಲಿ ಸಹಕಾರಿ ಸ್ಪಿನ್ನಿಂಗ್ ಮಿಲ್ಲನ್ನು ಮಾಡಬೇಕೆಂದು ಹಿಂದಿನಿಂದಲೂ ಬೇಡಿಕೆ ಇದೆ. ಅದರ ಬಗ್ಗೆ ಅಲ್ಲಿಯ ವಿಭಾಗಾಧಿಕಾರಿಗಳನ್ನು ಕನ್ವೀನರ್‌ರನ್ನಾಗಿ ಮಾಡಿ ಇದಕ್ಕೆ ಬೇಕಾಗಿರ ತಕ್ಕಂತಹ ಕೆಲವು ಷೇರು ಹಣವನ್ನು ವಸೂಲು ಮಾಡುವುದಕ್ಕೂ ಕೂಡ ಪ್ರಯತ್ನ ನಡೆದಿದೆ. ಅದರ ಬಗ್ಗೆ ತಾವು ಏನು ನಿರ್ಣಯ ಕೈಗೊಂಡಿದ್ದೀರೆಂಬುದನ್ನು ದಯಮಾಡಿ ಹೇಳಬೇಕು.

ಶ್ರೀ ಆರ್. ಎಲ್. ಜಾಲಪ್ಪ.— ಋಣ ಪರಿಹಾರ ಕಾಯಿದೆ ನನ್ನ ಇಲಾಖೆಗೆ ಅದು ಹೇಗೆ ಬಂತೋ ನನಗೆ ಗೊತ್ತಿಲ್ಲ. ಮಾನ್ಯ ಸದಸ್ಯರು ಹೇಳಿರುವುದನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ. ಕಾರಣ, ಅದರ ಬಗ್ಗೆ ಜಾಸ್ತಿ ಗಮನ ಕೊಟ್ಟಿಲ್ಲ. ದಯಮಾಡಿ ಅವರು ಕ್ಷಮಿಸಬೇಕು. ನನ್ನನ್ನು ಈ ಮೊದಲೇ ವಾರ್ನಿಂಗ್ ಮಾಡಿದ್ದರು. ಇನ್ನು ಮೇಲೆ ಅದರ ಬಗ್ಗೆ ಹೆಚ್ಚು ಗಮನ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಒಂದು ವರ್ಷದ ಹಿಂದೆಯೇ ಈ ಪ್ರಶ್ನೆಯನ್ನು ಕೇಳಿದ್ದೆ. ಶ್ರೀಮಾನ್ ದೇವರಾಜ್ ಅರಸ್‌ರವರು ಇದರ ಬಗ್ಗೆ ಬಹಳ ಅಧ್ಯಯನ ಮಾಡಿ, ಬಡವರನ್ನು ಶ್ರೀಮಂತರ ದವಡೆಯಿಂದ ತಪ್ಪಿಸಬೇಕೆಂಬ ಉದ್ದೇಶದಿಂದ ಈ ಕಾನೂನನ್ನು ಅಂದು ಅವರು ಜಾರಿಗೆ ತಂದರು. ಇದರ ಬಗ್ಗೆ ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಸಲಹೆಯನ್ನು ಪಡೆದುಕೊಂಡು ಇದನ್ನು ಜಾರಿಗೆ ತಂದರು. ಇವತ್ತು ಶ್ರೀಮಾನ್ ಜಾಲಪ್ಪನವರು ಇದ್ದಾಗಲೂ ಆ ಕಾನೂನು ಚಾಲನೆಯಾಗಲಿಲ್ಲ ಅಂದರೆ ನಾವು ಇನ್ನ್ಯಾರನ್ನು ಕೇಳುವುದು ?

ಶ್ರೀ ಆರ್. ಎಲ್. ಜಾಲಪ್ಪ.— ನಾನು ಒಪ್ಪಿಕೊಂಡಿದ್ದೇನೆ. ಇದು ನನ್ನ ಇಲಾಖೆಗೆ ಬರುತ್ತದೆ ಎಂದು ನನಗೆ ಗೊತ್ತಿರಲಿಲ್ಲ. ೪—೫ ವರ್ಷಗಳಿಂದ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಈ ಬಗ್ಗೆ ಹಿಂದೆ ಪ್ರಶ್ನೆಯನ್ನು ಕೇಳಿದಾಗ ಇದು ನಿಮಗೇ ಬರುತ್ತದೆಂದು ಹೇಳಿದ್ದೇನೆ.

ಶ್ರೀ ಆರ್. ಎಲ್. ಜಾಲಪ್ಪ.— ಎರಡನೆಯದಾಗಿ ನೇಮಕಾತಿಯ ಬಗ್ಗೆ ಹೇಳಿದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇದನ್ನು ಏನು ಮಾಡುತ್ತೀರಿ ಅದನ್ನು ಮೊದಲು ಹೇಳಿ.

ಶ್ರೀ ಆರ್. ಎಲ್. ಜಾಲಪ್ಪ.— ನಮ್ಮ ಅಧಿಕಾರಿಗಳನ್ನು ಕರೆದು ಚರ್ಚೆ ಮಾಡಿ, ಏನು ಅವಶ್ಯಕವಾಗಿ ಮಾಡಬೇಕೋ ಆ ಕೆಲಸವನ್ನು ಕೂಡಲೇ ಕೈಗೊಳ್ಳುತ್ತೇನೆ. ಮತ್ತೆ ನೇಮಕಾತಿಯ ಬಗ್ಗೆ ನಮ್ಮ ಸರ್ಕಾರ ಬಂದಮೇಲೆ ಚಾಚೂ ತಪ್ಪದೆ ಈ ನೀತಿಯನ್ನು ಅನುಸರಿಸಿಕೊಂಡು ಬರುತ್ತಿದ್ದೇವೆ. ಇದೇ ಸದನದಲ್ಲಿ ಜಿಲ್ಲಾ ಬ್ಯಾಂಕಿನಲ್ಲಿ ಆಡಳಿತ ಮಂಡಲಿಯವರು ಈ ರೀತಿ ಮಾಡುತ್ತಿದ್ದಾರೆಂದು ಶ್ರೀಮಾನ್ ಖರ್ಗೆಯವರು ಗಲಾಟೆಯನ್ನೇ ಮಾಡಿದರು. ೧೦೦ ಜನರನ್ನು ಸಂದರ್ಶನ ಮಾಡಿ ಅದರಲ್ಲಿ ಒಬ್ಬ ಹರಿಜನ—ಗಿರಿಜನರನ್ನೂ ೪ನೇ ದರ್ಜೆಯ ನೌಕರಿಗೆ ತೆಗೆದುಕೊಂಡಿಲ್ಲ. ಅದೂ ಇರಲಿ,

ಇದ್ದಂತಹವರನ್ನು ತೆಗೆದುಹಾಕಿ ಅವರ ಸ್ಥಾನದಲ್ಲಿ ಬೇರೆಯವರನ್ನು ನೇಮಕ ಮಾಡಿಕೊಂಡಿದ್ದರು. ಈಗ ಆ ವ್ಯವಸ್ಥೆಯನ್ನು ತಪ್ಪಿಸಿ, ಕಡ್ಡಾಯವಾಗಿ ರೋಸ್ಟರ್ ಸಿಸ್ಟಂ ಏನಿದೆ ಅದನ್ನು ಪಾಲಿಸಬೇಕೆಂಬ ಸೂಚನೆಯನ್ನು ಕೊಟ್ಟಿದ್ದೇವೆ. ಮೊನ್ನೆ ನಮ್ಮ ಇಲಾಖೆಯಲ್ಲಿ ಆಡಿಟರ್‌ಸ್‌ನ್ನು ನೇಮಕ ಮಾಡುವಾಗ ರೋಸ್ಟರ್ ಸಿಸ್ಟಂಅನ್ನು ಅನುಸರಿಸಿಕೊಂಡು ನೇಮಕಾತಿಯನ್ನು ಮಾಡಿದ್ದೇವೆ. ಮತ್ತೆ ಅವರು ಸ್ಪಿನ್ನಿಂಗ್ ಮಿಲ್ ಬಗ್ಗೆ ಹೇಳಿದರು. ಅದರ ಬಗ್ಗೆ ನನ್ನಲ್ಲಿ ಮಾಹಿತಿ ಇಲ್ಲ. ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ. ಜಿ. ಬಸವನಗೌಡ.— ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸಹಕಾರಿ ಸಂಘಗಳ ಮೂಲಕ ತೆಗೆದುಕೊಂಡಿರತಕ್ಕಂತಹ ಸಾಲದ ಮೇಲೆ ಕೆಲವು ರಿಯಾಯಿತಿಯನ್ನು ಮಾನ್ಯ ಸಚಿವರು ಘೋಷಣೆ ಮಾಡಿದ್ದಾರೆ, ಸಂತೋಷ. ರಾಜ್ಯದಲ್ಲಿ ಬಂದಿರುವಂತಹ ಬರಗಾಲದಲ್ಲಿ ಸಣ್ಣ ರೈತರು—ದೊಡ್ಡ ರೈತರು ಎಂಬ ತಾರತಮ್ಯ ಮಾಡುವುದು ಬೇಡ. ದೊಡ್ಡ ರೈತರು ಏನು ಟ್ರ್ಯಾಕ್ಟರನ್ನು ಇಟ್ಟುಕೊಂಡಿದ್ದಾರೆ, ಮಳೆ–ಸರಿಯಾಗಿ ಆಗಿದ್ದರೆ, ಅವರನ್ನು ದೊಡ್ಡ ರೈತರು ಎಂಬುದಾಗಿ ಕರೆಯಬಹುದಾಗಿತ್ತು. ಆದರೆ ಇವತ್ತು ಅವರೆಲ್ಲರೂ ಸಣ್ಣ ರೈತರೇ ಆಗಿದ್ದಾರೆ. ಇದಕ್ಕೆ ನಬಾರ್ಡ್‌ನವರು ಅಡ್ಡ ಬರುತ್ತಾರೆಂದು ಮಾನ್ಯ ಮಂತ್ರಿಗಳು ಹೇಳಬಹುದು. ಮಾನ್ಯ ಮುಖ್ಯಮಂತ್ರಿಗಳು ಹಾಗೂ ತಾವು ಅವರ ಹತ್ತಿರ ಚರ್ಚೆ ಮಾಡಿ, ದೊಡ್ಡ ರೈತರಿಗೆ ಈ ಒಂದು ರಿಯಾಯಿತಿಯನ್ನು ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ನಿನ್ನೆ ಮಧ್ಯಾಹ್ನವೇ ಮಾನ್ಯ ಸದಸ್ಯರು ಲಾಬಿಯಲ್ಲಿ ನನ್ನನ್ನು ಭೇಟಿಯಾಗಿ ಈ ಬಗ್ಗೆ ಪ್ರಸ್ತಾಪ ಮಾಡಿದರು. ಅಲ್ಲೇ ಆ ರೀತಿ ರಿಯಾಯಿತಿಯನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದೇನೆ. ಟ್ರ್ಯಾಕ್ಟರ್ ಮೇಲೆ ಕಮರ್ಷಿಯಲ್ ಬ್ಯಾಂಕಿನಲ್ಲಿ ಸಾಲವನ್ನು ತೆಗೆದುಕೊಂಡರೆ ೧೬½ ಪರ್ಸೆಂಟ್ ಬಡ್ಡಿ ಹಾಕುತ್ತಾರೆ. ನಾವು ಟ್ರ್ಯಾಕ್ಟರ್ ಮೇಲೆ ಕೊಡುವಂತಹ ಸಾಲಕ್ಕೆ ಹಾಕುವಂತ ಬಡ್ಡಿ ೫ ಪರ್ಸೆಂಟ್. ಅದು ಬಹಳ ರೀಸನಬಲ್. ಆದ್ದರಿಂದ ನಾನು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಅವರು ಸಮಯಕ್ಕೆ ಸರಿಯಾಗಿ ತೆಗೆದುಕೊಂಡಂತಹ ಸಾಲವನ್ನು ವಾಪಸ್ಸು ಕಟ್ಟುವ ಹಾಗೆ ಸಂಬಂಧಪಟ್ಟವರಿಗೆ ಸರಿಯಾಗಿ ಅಡ್ವೈಸ್ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ರಾಮನಾಥ ರೈ.—ಬಂಟ್ವಾಳ ತಾಲ್ಲೂಕು ಹುಕ್ಕೇರಿಯಲ್ಲಿರುವ ರೀತಿಯಲ್ಲಿ ವಿದ್ಯುಚ್ಛಕ್ತಿ ಸಹಕಾರ ಸಂಘವನ್ನು ಸ್ಥಾಪನೆ ಮಾಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡು ಅದಕ್ಕಾಗಿ ಒಬ್ಬರು ಚೀಫ್ ಪ್ರಮೋಟರ್‌ನ್ನೂ ಕೂಡ ನೇಮಕ ಮಾಡಿದ್ದಾರೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಆರ್. ಎಲ್. ಜಾಲಪ್ಪ.—ನಾನು ಉತ್ತರಿಸುವಾಗ ೯ ಸಹಕಾರ ಸಂಘಗಳಲ್ಲಿ ಈ ರೀತಿ ಆಗಿದೆ ಎಂದು ಹೇಳಿದೆ. ಹುಕ್ಕೇರಿ ಸಹಕಾರ ಸಂಘ ಒಂದು ಮಾತ್ರ ಕೆಲಸ ಮಾಡುತ್ತಿದೆ. ಉಳಿದವುಗಳಲ್ಲಿ ವಿದ್ಯುಚ್ಛಕ್ತಿ ಮತ್ತು ನಮ್ಮ ಇಲಾಖೆಯವರಿಗೆ ಹೊಂದಾಣಿಕೆ ಆದಂತೆ ಕಾಣಲಿಲ್ಲ, ಇದರಿಂದ ತೊಂದರೆಯಾಗಿದೆ. ನಾನು ಅವರನ್ನು ಕರೆಸಿ ಮಾತನಾಡುತ್ತೇನೆಂದು ಹೇಳಿದ್ದೇನೆ, ಇನ್ನು ೩-೪ ದಿನಗಳಲ್ಲಿ ಅಧ್ಯಕ್ಷರು ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ಹೇಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್,—ಸಹಕಾರ ಇಲಾಖೆಯವರು ಹೊಂದಾಣಿಕೆಯಾಗುವುದಿಲ್ಲ, ಅವರು ಒಳಗೂ ಇರುವುದಿಲ್ಲ, ಹೊರಗೂ ಇರುವುದಿಲ್ಲ, ಆದ್ದರಿಂದ ತಾವು ಧೈರ್ಯ ಮಾಡಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ಆರ್. ಎಲ್. ಜಾಲಪ್ಪ,—ಕೆಲವು ಸಹಕಾರ ಸಂಸ್ಥೆಗಳಿಗೆ ಮ್ಯಾನೇಜಿಂಗ್ ಡೈರೆಕ್ಟರನ್ನು ಹಾಕಿದ್ದೇವೆ. ಅವರಿಗೆ ಸಂಬಳ ಸಿಗುತ್ತಿಲ್ಲ:

ಶ್ರೀ ಎಂ, ಮಲ್ಲಪ್ಪ.— ರಾಜ್ಯದಲ್ಲಿರತಕ್ಕ ಹಲವಾರು ಸಹಕಾರ ಸಂಸ್ಥೆಗಳಲ್ಲಿ ಹಣ ದುರುಪಯೋಗ ಪ್ರಕರಣಗಳಲ್ಲಿ ಅಧಿಕಾರಿಗಳನ್ನು ಸಸ್ಪೆಂಡ್‌ನಲ್ಲಿಟ್ಟು ೧೦-೨೦ ವರ್ಷಗಳಾದರೂ ತನಿಖೆಯಲ್ಲಿದೆ ಎಂದು ಹೇಳುತ್ತಿದ್ದೇವೆ. ಇದರಿಂದ ಅವರಿಗೆ ದುರುಪಯೋಗ ಮಾಡಿಕೊಳ್ಳುವುದಕ್ಕೆ ಹೆಚ್ಚಿನ ಪ್ರೋತ್ಸಾಹ ಸಿಕ್ಕಿದಂತಾಗುತ್ತದೆ. ಸಹಕಾರ ಇಲಾಖೆಯಲ್ಲಿ ದುರುಪಯೋಗವಾಗುವುದನ್ನು

ತಡೆಗಟ್ಟುವ ದೃಷ್ಟಿಯಿಂದ ವಿಶೇಷ ನ್ಯಾಯಾಲಯಾದನ್ನು ಪ್ರಾರಂಭಿಸುವುದಕ್ಕೆ ಸರ್ಕಾರ ಇಷ್ಟ ಪಡುತ್ತದೆಯೆ ?

ಶ್ರೀ ಆರ್. ಎಲ್. ಜಾಲಪ್ಪ.—ಯಾವ ನ್ಯಾಯಾಲಯವಾದರೂ ಅಷ್ಟೆ. ಆದರೆ ನ್ಯಾಯಾಲಯದ ಬಗ್ಗೆ ನಾವು ಇಲ್ಲಿ ಮಾತನಾಡಬಾರದು. ಒಂದೊಂದು ಸಾರಿ ಹೇಗೆ ವಿಷವೃತ್ತದಿಂದ ಈಚೆಗೆ ಬರುವುದು ಎಂದು ಗೊತ್ತಾಗುವುದಿಲ್ಲ. ಸಸ್ಪೆಂಡ್ ಮಾಡಿದ ಮೇಲೆ ೬ ತಿಂಗಳಲ್ಲ ೬ ವರ್ಷವಾದರೂ ವಿಚಾರಣೆ ಆಗುವುದಿಲ್ಲ. ಅವರಿಗೆ ಬೇಕಾದ ವ್ಯಕ್ತಿಗಳಾಗಿದ್ದರೆ ೭–೮ ವರ್ಷಗಳೇ ಆಗುತ್ತದೆ. ಆಡಳಿತದಲ್ಲಿ ಬಿಗಿ ತಪ್ಪಿ ಹೋಗುತ್ತದೆ. ಇದಕ್ಕೆ ಏನಾದರೂ ಒಂದು ವ್ಯವಸ್ಥೆ ಮಾಡಬೇಕೆಂದು ಈ ವಿಚಾರವನ್ನು ಮುಖ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಂ. ಎಸ್. ಪಾಟೀಲ್.—ಕರ್ನಾಟಕ ರಾಜ್ಯದಲ್ಲಿರತಕ್ಕ ಸಕ್ಕರೆ ಕಾರ್ಖಾನೆಗಳ ಆಡಳಿತ ಮಂಡಳಿಯಲ್ಲಿ ಮ್ಯಾನೇಜಿಂಗ್ ಡೈರೆಕ್ಟರಾಗಿ ಕೆಲಸ ಮಾಡತಕ್ಕವರು ತಮ್ಮ ಇಲಾಖೆಯಾವರಿದ್ದಾರೆಂದು ತಿಳಿದು ಬಂದಿದೆ. ಕೆಲವು ಮ್ಯಾನೇಜಿಂಗ್ ಡೈರೆಕ್ಟರುಗಳಿಂದ ಕಾರ್ಖಾನೆಗಳು ಲುಕ್ಸಾನಾಗುತ್ತಿರುತ್ತವೆ. ನಾನು ಖಾಸಗಿ ಕಾರ್ಖಾನೆಗಳಲ್ಲಿ ಮ್ಯಾನೇಜಿಂಗ್ ಡೈರೆಕ್ಟರುಗಳೇ ಇರುವುದಿಲ್ಲ. ಆದ್ದರಿಂದ ಮ್ಯಾನೇಜಿಂಗ್ ಡೈರೆಕ್ಟರ್ ಹುದ್ದೆಯನ್ನು ಟೆಕ್ನಿಕಲ್ ಆಗಿ ಮಾಡಿ ಅದರಲ್ಲಿ ಅನುಭವ ಇರುವವರನ್ನೇ ನೇಮಕ ಮಾಡಲಿಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಎರಡನೆಯದಾಗಿ, ಮಾರ್ಕೆಟ್ ಕಮಿಟಿಗಳಲ್ಲಿರತಕ್ಕ ದಲ್ಲಾಳಿಗಳನ್ನು ತೆಗೆದು ಹಾಕುತ್ತೇವೆಂದು ಹೇಳಿರುವುದು ಪತ್ರಿಕೆಗಳಲ್ಲಿ ಬಂದಿದೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಮೂರನೆಯದಾಗಿ, ಅಪೆಕ್ಸ್ ಬ್ಯಾಂಕಿನಿಂದ ಹಿಡಿದು ಗ್ರಾಮ ಸೇವಾ ಸಹಕಾರ ಸಂಘದವರೆಗೆ ಒನ್ ಟೈರ್ ಸಿಸ್ಟಂ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಗ್ರಾಮ ಸೇವಾ ಸಹಕಾರ ಸಂಘದ ಸಾಲವನ್ನು ಮನ್ನಾ ಮಾಡಿದಿರಿ, ಮಾಡಿದ ಮೇಲೆ ಅಲ್ಲಿ ಸಾಲದ ರೆಕಾರ್ಡ್‌ನಲ್ಲಿ ಹೆಸರುಗಳು ಏನಿವೆ ಆ ಹೆಸರಿನಲ್ಲಿರತಕ್ಕ ಸಾಲ ಮತ್ತು ಸಾಲ ಪಡೆದ ವ್ಯಕ್ತಿ ಹೆಸರುಗಳು. ಸೆಕ್ರೆಟರಿಯವರ ಲೋಪದೋಷಗಳಿಂದ ಬದಲಾವಣೆಯಾಗಿ ಬೇರೆಯವರ ಹೆಸರಿನಲ್ಲಿ ಸಾಲ ತೆಗೆದುಕೊಂಡು ಅದನ್ನು ಮನ್ನಾ ಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಆರ್. ಎಲ್. ಜಾಲಪ್ಪ —ಸಕ್ಕರೆ ಕಾರ್ಖಾನೆಗಳಲ್ಲಿರತಕ್ಕ ಮ್ಯಾನೇಜಿಂಗ್ ಡೈರೆಕ್ಟರುಗಳು ಎಲ್ಲಾ ನಮ್ಮ ಇಲಾಖೆಯವರು ಅಲ್ಲ. ಕೆಲವು ಕಡೆ ಇದ್ದಾರೆ, ಮತ್ತೆ ಕೆಲವು ಕಡೆ ಡೆವಲಪ್‌ಮೆಂಟ್ ಅಧಿಕಾರಿಗಳು ಇದ್ದಾರೆ, ಅಲ್ಲಿ ಟೆಕ್ನಿಕಲ್ ಪೀಪಲ್ ಅನ್ನು ಏತಕ್ಕೆ ಹಾಕಬಾರದೆಂದು ಹೇಳಿದ್ದಾರೆ, ಸಕ್ಕರೆ ಚೆನ್ನಾಗಿ ತಿನ್ನುವವರನ್ನು ಸಕ್ಕರೆ ಕಾರ್ಖಾನೆಗೆ, ಬಟ್ಟೆ ಚೆನ್ನಾಗಿ ಹಾಕಿಕೊಳ್ಳುವವರನ್ನು ಸ್ಪಿನ್ನಿಂಗ್ ಮಿಲ್ಲಿಗೆ ಹಾಕಿಕೊಳ್ಳುವಂತೆ ಯಾರು ಆ ಕೆಲಸವನ್ನು ಚೆನ್ನಾಗಿ ಮಾಡುತ್ತಾರೆ ಅಂಥವರನ್ನು ಆರಿಸಿಕೊಂಡು ಅವರಿಗೆ ಸಕ್ಕರೆ ಕಾರ್ಖಾನೆಯ ಬಗ್ಗೆ ಚೆನ್ನಾಗಿ ತರಬೇತಿ ನೀಡಿ ಒಂದು ಸಕ್ಕರೆ ಕಾರ್ಖಾನೆಯಿಂದ ಇನ್ನೊಂದು ಸಕ್ಕರೆ ಕಾರ್ಖಾನೆಗೆ ಹಾಕಬೇಕೆಂದು ಯೋಚಿಸುತ್ತಿದ್ದೇವೆ. ಬೇರೆ ರಾಜ್ಯದಲ್ಲಿ ಯಾವ ರೀತಿ ವ್ಯವಸ್ಥೆ ಇದೆ ಎಂಬುದನ್ನು ನೋಡಿಕೊಂಡು ಬರಲು ಅಧಿಕಾರಿಗಳನ್ನು ಕಳುಹಿಸುವುದರ ಜೊತೆಗೆ ನಾನು ಕೂಡ ಹೋಗಿ ನೋಡಿಕೊಂಡು ಬಂದು ನಮ್ಮಲ್ಲಿ ಸೂಕ್ತವಾದ ವ್ಯವಸ್ಥೆ ಮಾಡಬೇಕೆಂದು ಮಾಡುತ್ತಿದ್ದೇವೆ. ಎಪಿಎಂಸಿಯಲ್ಲಿ ಕಮೀಷನ್ ಏಜೆಂಟ್ ತೆಗೆಯುತ್ತೇವೆಂದು ಹೇಳಲಿಲ್ಲ. ನಾನು ಹೇಳಿದ್ದು ರೈತರಿಂದ ಏನು ಕಮೀಷನ್ ತೆಗೆದುಕೊಳ್ಳುತ್ತಿದ್ದಾರೆ. ಅದನ್ನು ಪರ್ಚೇಸರಿಂದ ತೆಗೆದುಕೊಳ್ಳುವ ವ್ಯವಸ್ಥೆಯನ್ನು ಏತಕ್ಕೆ ಮಾಡಬಾರದೆಂದು ಹೇಳಿದ್ದೇನೆಯೇ ಹೊರತು ಕಮೀಷನ್ ಏಜೆಂಟನ್ನು ತೆಗೆಯುತ್ತೇವೆಂದು ಹೇಳಲಿಲ್ಲ. ಮತ್ತೆ ಕಾರ್ಯದರ್ಶಿಯ ಲೋಪದೋಷದ ಬಗ್ಗೆ ಹೇಳಿದ್ದಾರೆ. ಆ ರೀತಿ ಅಲ್ಲೊಂದು ಇಲ್ಲೊಂದು ಆಗಿರಬಹುದು. ಅದನ್ನೆಲ್ಲಾ ಆಡಳಿತ ಮಂಡಳಿಯವರು ನೋಡಿಕೊಳ್ಳದೆ ಸರ್ಕಾರ ನೋಡಿಕೊಳ್ಳಬೇಕೆಂದರೆ ನಮ್ಮ ರಾಜ್ಯದಲ್ಲಿ ೪೮೮೦ ಪ್ರೈಮರಿ ಅಗ್ರಿಕಲ್ಚರಲ್ ಸೊಸೈಟಿಗಳು ಇವೆ. ಅವನ್ನೆಲ್ಲ ನಾವು ಕಾಯುವುದಕ್ಕಾಗುವುದಿಲ್ಲ. ಆಡಳಿತ ಮಂಡಳಿಯವರು ಹುಷಾರಾಗಿ ನೋಡಿಕೊಳ್ಳಬೇಕು. ಅಂಥದ್ದೇನಾದರೂ ನಿರ್ದಿಷ್ಟವಾದ ಪ್ರಕರಣಗಳಿದ್ದು ಸದಸ್ಯರು ಸರ್ಕಾರದ ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುತ್ತೇವೆ, ಒನ್ ಟೈರ್ ಸಿಸ್ಟಂ ಅನ್ನು ಏತಕ್ಕೆ ಮಾಡಬಾರದೆಂದು ಕೇಳಿದರು. ಒನ್ ಟೈರ್‌ನಲ್ಲಿ ಗಾಡಿ ಓಡಿಸುವುದಕ್ಕೆ ಆಗುವುದಿಲ್ಲ, ನಬಾರ್ಡ್‌ನಿಂದ ಪ್ರೈಮರಿ ಸೊಸೈಟಿಗಳಿಗೆ ಸಾಲ ಕೊಡುವುದಕ್ಕೆ ಸಾಧ್ಯವಿದೆ. ಆದರೆ ೪೮೦೦ ಸೊಸೈಟಿಗಳಿಗೂ ಸಾಲ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ ಕೊಟ್ಟಿರತಕ್ಕದ್ದೇ ಜಾಸ್ತಿ ಇದೆ. ಮಾರ್ಜಿನಲ್ ಪ್ರಾಫಿಟ್ ಅನ್ನು ಕಡಿಮೆ ಮಾಡಲಾಗಿದ್ದು ಅಪೆಕ್ಸ್ ಬ್ಯಾಂಕಿನವರಿಗೆ ಅರ್ಧ ಪರ್ಸೆಂಟ್ ಇದೆ. ಅಗ್ರಿಕಲ್ಚರಲ್

ಲೋನ್‌ನಲ್ಲಿ ಅಪೆಕ್ಸ್ ಬ್ಯಾಂಕಿನವರಿಗೆ ಮೂರು ಕಾಸೂ ಸಿಗುವುದಿಲ್ಲ, ಅವರು ಸ್ವಂತ ಹಣವನ್ನು ಜಿಲ್ಲಾ ಬ್ಯಾಂಕಿನಲ್ಲಿ ತೊಡಗಿಸುತ್ತಿದ್ದಾರೆ. ಜಿಲ್ಲಾ ಬ್ಯಾಂಕಿನ ಮಾರ್ಜಿನಲ್ ಪ್ರಾಫಿಟ್ ಅನ್ನು ಕಡಿಮೆ ಮಾಡಲಾಗಿವೆ. ಇದರಿಂದ ಯಾವುದೇ ತೊಂದರೆಯಾಗುವುದಿಲ್ಲ.

ಶ್ರೀ ಹೆಚ್. ಬಿ. ದೇವೀರಪ್ಪ.—೪೦ ಪರ್ಸೆಂಟ್ ಸಾಲ ವಸೂಲಾಗಿರತಕ್ಕ ಬ್ಯಾಂಕುಗಳಿಗೆ ಮಾತ್ರ ಮತ್ತೆ ಸಾಲ ಸೌಲಭ್ಯ ಕೊಡಲು ಸೂಚಿಸಲಾಗಿದೆ ಎಂದು ಮಂತ್ರಿಗಳು ಹೇಳುತ್ತಿದ್ದರು, ೪೦ ಪರ್ಸೆಂಟ್ ವಸೂಲಾಗದೆ ಇರತಕ್ಕ ಸಂಘಗಳಿಗೆ ಏನು ಮಾಡುವುದು ಎಂಬುದನ್ನು ಯೋಚಿಸಬೇಕು, ನಮ್ಮ ಮಾಲೂರು ತಾಲ್ಲೂಕಿನಲ್ಲಿ ಹೆಚ್ಚಿಗೆ ಬೋರ್‌ವೆಲ್ ಹಾಕುವುದಕ್ಕೆ ಅವಕಾಶ ಇದೆ, ಸಾಲವನ್ನೇ ನಂಬಿ ಜೀವನ ನಡೆಸುವ ಜನರು ಇರುವಾಗ ಅವರಿಗೆ ಸಾಲ ಕೊಡದಿದ್ದರೆ ಕಷ್ಟವಾಗುತ್ತದೆ. ಸ್ಟೇಟ್ ಲ್ಯಾಂಡ್ ಡೆವಲಪ್‌ಮೆಂಡ್ ಬ್ಯಾಂಕಿನಲ್ಲಿ ಕೇಳಿದಾಗ ೪೦ ಪರ್ಸೆಂಟ್ ಸಾಲ ವಸೂಲಾಗಿಲ್ಲವಾದ್ದರಿಂದ ಮತ್ತೆ ಸಾಲ ಕೊಡುವುದಿಲ್ಲವೆಂದು ಹೇಳಿದರು. ಸಾಲ ವಸೂಲಾಗದೆ ಇರುವುದಕ್ಕೆ ಅಧಿಕಾರಿಗಳು ಕಾರಣರು. ಅಲ್ಲಿ ಅಡ್ಮಿನಿಸ್ಟ್ರೇಟರನ್ನು ಅಪಾಯಿಂಟ್ ಮಾಡಿ ೮ ವರ್ಷವಾಯಿತು, ಅವರು ದುಡ್ಡನ್ನು ತಿಂದು ಹಾಕಿದ್ದಾರೆ, ಯಾವ ವಸೂಲಿಯನ್ನು ಮಾಡಿಲ್ಲ. ಬಂದ ದುಡ್ಡನ್ನು ಸಂಬಳಕ್ಕೆ ಮತ್ತಿತರ ಖರ್ಚುಗಳಿಗೆ ಹಾಕಿಕೊಂಡು ೪೦ ಪರ್ಸೆಂಟ್ ವಸೂಲಾತಿಯ ಲೆಕ್ಕವನ್ನು ಕೊಟ್ಟಿಲ್ಲ. ಇದನ್ನು ವಸೂಲು ಮಾಡುವುದಕ್ಕೆ ನಿಮಗೆ ಆಗುತ್ತಿಲ್ಲ. ರೈತರ ಹತ್ತಿರ ಹೋದರೂ ವಸೂಲು ಮಾಡುವುದಕ್ಕಾಗುವುದಿಲ್ಲ. ಇಂಥ ಸಂದರ್ಭದಲ್ಲಾದರೂ ಸಾಲ ಕೊಡಿ, ಇಲ್ಲದಿದ್ದರೆ ರೈತರಿಗೆ ತೊಂದರೆಯಾಗುತ್ತದೆ, ದಯವಿಟ್ಟು ನಮ್ಮ ತಾಲ್ಲೂಕಿನ ಈ ದಿಸೆಯಲ್ಲಿ ರಿಯಾಯಿತಿ ತೋರಿ ಬೋರ್ ತೆಗೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ನಾವೇನೂ ಹಣವನ್ನು ಪ್ರಿಂಟ್ ಮಾಡುವುದಿಲ್ಲ. ಡಿಬೆಂಚರ್ಸ್ ಮೂಲಕ ಪಿಎಲ್‌ಡಿಬಿ. ಎಸ್‌ಎಲ್‌ಡಿಬಿ.ಗಳಿಂದ ಸಾಲ ಎತ್ತಿ ನಬಾರ್ಡ್‌ರ ಪರ್ಮಿಷನ್ ತೆಗೆದುಕೊಂಡು ಶೇಕಡ ೮೦–೯೦ ಪರ್ಸೆಂಟ್ ಕೊಡುತ್ತಿದ್ದೇವೆ. ಅದಕ್ಕೆ ಸರ್ಕಾರದ ಕಾಂಟ್ರಿಬ್ಯೂಷನ್ ೪೦ ಪರ್ಸೆಂಟ್ ಅವರು ಕಂಡಿಷನ್ ಹಾಕಿರುವುದು ಸರಿ ಅನ್ನಿಸುತ್ತದೆ. ನಾನು ಒಂದು ಮಾತನ್ನು ಸಂಕಟದಿಂದ ಹೇಳುತ್ತೇನೆ. ಇರುವ ಸಂಸ್ಥೆಗಳನ್ನು ಹಾಳು ಮಾಡಿ ಪುನಃ ಹಣ ಸಿಗಲಿಲ್ಲವೆಂದರೆ ಎಲ್ಲಿಂದ ಸಿಗುತ್ತದೆ? ಮಾನ್ಯ ಸದಸ್ಯರು ಬಹಳ ಗಟ್ಟಿಗರು. ಅವರು ೪೦ ಪರ್ಸೆಂಟ್ ಸಾಲ ವಸೂಲಾಗುವ ವ್ಯವಸ್ಥೆ ಮಾಡಿದರೆ ನೀವು ನಿರೀಕ್ಷಿಸಿದಷ್ಟು ಮತ್ತೆ ಸಾಲ ಲಭ್ಯವಾಗುತ್ತದೆ. ಅದನ್ನು ಬಿಟ್ಟು ಬೇರೆ ಯಾವುದೇ ವ್ಯವಸ್ಥೆಯಲ್ಲಿ ಹಣ ಒದಗಿಸುವುದಕ್ಕೆ ನಿಶ್ಯಕ್ತನಾಗಿದ್ದೇನೆಂದು ಹೇಳುವುದಕ್ಕೆ ವಿಷಾದಿಸುತ್ತೇನೆ.

ಶ್ರೀ ಜಿ. ಎಂ, ಕಾನಡೆ.—ನಮ್ಮ ಸಿರಸಿಯನ್ನು ಬರಗಾಲ ಪ್ರದೇಶವೆಂದು ಸಾರಿದ್ದಾರೆ. ಅಲ್ಲಿ ಕೆಲವು ರೈತರು ಸಾಲ ತೆಗೆದುಕೊಂಡಿದ್ದಾರೆ. ಆ ಸಾಲವನ್ನು ಮನ್ನಾ ಮಾಡಿ ಅಥವಾ ದೀರ್ಘಾವಧಿ ಸಾಲವನ್ನಾಗಿ ಮಾಡಿ ಹೊಸ ಸಾಲ ಕೊಡುತ್ತೀರಾ ? ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ ರೈತರಿಗೆ ವಂಚನೆ ಆಗುತ್ತಿದೆ. ಇದಕ್ಕೆ ಒಂದು ಉದಾಹರಣೆ ಹೇಳುವುದಾದರೆ ನಮ್ಮಲ್ಲಿ ಹಂದಿಬೈಲು ಎಂಬ ಊರು ಇದೆ. ಆ ಊರಿನ ಮಡಿವಾಳ ಎಂಬ ರೈತನಿಗೆ ೨೭-೧-೧೯೮೪ರಲ್ಲಿ ಎತ್ತು ಖರೀದಿಗೋಸ್ಕರ ೫ ಸಾವಿರ ರೂಪಾಯಿ ಸಾಲ ಕೊಟ್ಟರು. ಅದರಲ್ಲಿ ೮೦೦ ರೂಪಾಯಿಗಳನ್ನು ಮೊದಲೇ ಇನ್‌ಶ್ಯೂರೆನ್ಸ್‌ಗೆ ಎಂದು ಬ್ಯಾಂಕಿನಲ್ಲಿ ಕಟ್ ಮಾಡಿಕೊಂಡು ಕೊಟ್ಟಿದ್ದರು. ಈಗ್ಗೆ ಒಂದು ತಿಂಗಳ ಹಿಂದೆ ಆತ ಕೊಂಡ ಎತ್ತು ಸತ್ತು ಹೋಯಿತು. ಆಗ ಆತ ಬ್ಯಾಂಕಿಗೆ ಹೋಗಿ ನನ್ನ ಇನ್‌ಶ್ಯೂರೆನ್ಸ್ ಇದೆ ದುಡ್ಡು ಕೊಡಿ ಎಂದಾಗ ನೀನು ಇನ್‌ಶ್ಯೂರೆನ್ಸ್ ಕಟ್ಟಿಲ್ಲ, ಸುಳ್ಳು ಹೇಳುತ್ತಿದ್ದೀಯ ಎಂದು ಬೈದು ಹೊರಗಡೆ ಹಾಕಿದರು. ನಂತರ ತಪಾಸಣೆ ಅಧಿಕಾರಿ ತಪಾಸಣೆ ಮಾಡಿದಾಗ ಇನ್‌ಶ್ಯೂರೆನ್ಸ್ ಹಣವನ್ನು ಆ ಬ್ಯಾಂಕಿನ ಕಾರ್ಯದರ್ಶಿ ತಿಂದಿದ್ದಾನೆಂದು ಗೊತ್ತಾಯಿತು, ಅದು ಪತ್ರಿಕೆಯಲ್ಲಿ ಕೂಡ ಬಂತು. ಅದೇ ರೀತಿ ಅನೇಕ ರೈತರು ತೆಗೆದುಕೊಂಡ ಎತ್ತುಗಳು ಸಾಯುವ ಸ್ಥಿತಿಯಲ್ಲಿವೆ. ಇಂಥ ಸಂದರ್ಭದಲ್ಲಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡು ರೈತರಿಗೆ ರಕ್ಷಣೆ ಕೊಡುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.—ಕ್ಷಾಮ ಪ್ರದೇಶದಲ್ಲಿ ಎಲ್ಲ ಕಡೆ ಸಾಲವನ್ನು ಪರಿವರ್ತನೆ ಮಾಡುತ್ತಿದ್ದೇವೆ. ಆ ಬಗ್ಗೆ ಈಗಾಗಲೇ ನಾವು ಹೇಳಿದ್ದೇವೆ ಮತ್ತು ಸೂಚನೆಗಳನ್ನು ಕೂಡ ಸಂಬಂಧಪಟ್ಟವರಿಗೆ ಕೊಟ್ಟಿದ್ದೇವೆ. ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತನೆ ಮಾಡುತ್ತೇವೆ. ಸಣ್ಣ ರೈತರಿಗೆ ರಕ್ಷಣೆ ಕೊಡುತ್ತೀರಾ ಅಥವಾ ಶಿಕ್ಷೆ ಕೊಡುತ್ತೀರಾ

ಎಂದು. ಅವರಿಗೆ ರಕ್ಷಣೆ ಕೊಡಿ ಎಂದರೆ ರಕ್ಷಣೆ ಕೊಡುತ್ತೇವೆ, ಶಿಕ್ಷೆ ಕೊಡಿ ಎಂದರೆ ಶಿಕ್ಷೆ ಕೊಡುತ್ತೇವೆ. ಅವರ ಹತ್ತಿರ ಇರತಕ್ಕ ಮಾಹಿತಿಯನ್ನು ನನ್ನ ಕಡೆ ಕಳುಹಿಸಿಕೊಡಲಿ, ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಎಂ. ಮುನಿಯಪ್ಪ.—ಕೆಲವು ವರ್ಷಗಳ ಹಿಂದೆ ರಾಜ್ಯದಲ್ಲಿ ಹರಿಜನ ಗಿರಿಜನ ಗೃಹ ನಿರ್ಮಾಣ ಸಹಕಾರ ಸಂಘಗಳನ್ನು ಸರ್ಕಾರ ಮಾಡಿ ತಾಲ್ಲೂಕು ಬೋರ್ಡ್‌ನ ಅಧ್ಯಕ್ಷರನ್ನು ಎಕ್ಸ್‌ಅಫಿಷಿಯೋ ಪ್ರೆಸಿಡೆಂಟ್ ಮಾಡಿ ಮನೆ ಕಟ್ಟಲಿಕ್ಕೆ ಒಂದೂವರೆ ಸಾವಿರ ರೂಪಾಯಿ ಸಾಲ ಕೊಟ್ಟಿದ್ದಾರೆ. ಆದರೆ ಅರ್ಧಂಬರ್ಧ ಮನೆಗಳು ನಿಂತು ಹೋಗಿವೆ, ಪೂರ್ಣ ಆಗಿಲ್ಲ. ಸರ್ಕಾರಕ್ಕೂ ಕೂಡ ಅನೇಕ ಮನವಿಗಳು ಬಂದಿವೆ. ನನ್ನ ಕ್ಷೇತ್ರದಲ್ಲೂ ಅನೇಕ ಮನೆಗಳು ನಿಂತು ಹೋಗಿವೆ. ಈ ಮನೆಗಳನ್ನು ಪೂರೈಸುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೇ, ಇಲ್ಲಿ ೨೨,೬೪೯ ಮನೆಗಳಿಗೆ ಈ ರೀತಿಯಾದ ಸಾಲವನ್ನು ಕೊಟ್ಟಿದ್ದೇವೆ. ಅದರಲ್ಲಿ ಕಂಪ್ಲೀಟ್ ಆಗಿರುವುದು ೧೬,೩೪೯. ಈಗ ರೂಫಿಂಗ್ ಮಟ್ಟಕ್ಕೆ ಬಂದಿರುವುದು ೩೦೫೦. ಮನೆಗಳು ಫೌಂಡೇಷನ್ ಮಟ್ಟದಲ್ಲಿರುವುದು ೨೬೪೫. ಪ್ರಾರಂಭ ಮಾಡದೇ ಇರುವುದು ೬೧೬. ಇದಕ್ಕಾಗಿ ನಾವು ಒಟ್ಟು ಹಣವನ್ನು ಕೊಟ್ಟಿದ್ದುದು ೪,೪೧,೩೭,೩೧೫ ರೂಪಾಯಿಗಳು. ಅದರಲ್ಲಿ ವಸೂಲಾಗಿರುವುದು ೯,೬೫,೯೨೩ ರೂಪಾಯಿಗಳು. ಈ ಮನೆಗಳಿಗೆ ಪುನ: ಕಂಪ್ಲೀಟ್ ಮಾಡಲು ಸಾಲ ಕೊಡುವುದಕ್ಕೆ ಬರುವುದಿಲ್ಲ. ಆದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಇದನ್ನು ತರಬೇಕೆಂದಿದ್ದೇನೆ. ಈ ಮನೆಗಳಿಗೆ ಕೊಟ್ಟಿರುವ ಸಾಲವನ್ನು ರೈಟ್ ಆಫ್ ಮಾಡಿ ಎನ್‌ಆರ್‌ಇಪಿ ಯಲ್ಲಿ ಇದನ್ನು ಅಭಿವೃದ್ಧಿ ಮಾಡಲಿಕ್ಕೆ ಅವರ ಗಮನಕ್ಕೆ ತರವುದಕ್ಕೆ ಇಚ್ಛೆಪಡುತ್ತೇನೆ. ಇದರ ಬಗ್ಗೆ ಮಂತ್ರಿಮಂಡಲ ಯಾವ ರೀತಿ ತೀರ್ಮಾನ ತೆಗೆದುಕೊಳ್ಳುತ್ತದೆಯೋ ಗೊತ್ತಿಲ್ಲ, ಮತ್ತೆ ಹಣವನ್ನು ಕೊಟ್ಟು ಈ ಮನೆಗಳನ್ನು ಕಂಪ್ಲೀಟ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಕ್ರಾನಿಕ್ ಕೇಸ್‌ಗಳನ್ನು ರಿವೈಸ್ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಆರ್. ರಾಮಯ್ಯ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ರಾಜ್ಯದಲ್ಲಿ ತಲೆದೋರಿರತಕ್ಕಂಥ ಬರಗಾಲದಲ್ಲಿ ರೈತರುಗಳು ತೆಗೆದುಕೊಂಡ ಸಾಲವನ್ನು ಮರುಪಾವತಿ ಮಾಡದೇ ಇರತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿದೆ. ಮುಂಗಾರು ಮಳೆ ಬರುವ ವೇಳೆಯಲ್ಲಿ ತೆಗೆದುಕೊಂಡಿರುವ ಸಾಲವನ್ನು ಕನ್‌ವರ್ಷನ್ ಮಾಡಿ ಮತ್ತೆ ಅವರಿಗೆ ಬಾರೋಯಿಂಗ್ ಕೆಪಾಸಿಟಿ ಬರತಕ್ಕಂಥ ರೀತಿಯಲ್ಲಿ ಸರ್ಕಾರ ವ್ಯವಸ್ಥೆ ಮಾಡುತ್ತದೆಯೋ ಎನ್ನತಕ್ಕಂಥದ್ದನ್ನು ಮಾನ್ಯ ಸಚಿವರಿಂದ ತಿಳಿಯುವುದಕ್ಕೆ ಬಯಸುತ್ತೇನೆ. ತದನಂತರ ಈ ಸಹಕಾರಿ ಸಂಘಗಳಿಂದ ದುರುಪಯೋಗದ ಬಗ್ಗೆ ಒಂದು ವಿಶೇಷವಾದ ಕಾನೂನನ್ನು ತರಬೇಕು. ಅದರಲ್ಲಿ ಸಾಕಷ್ಟು ಹಣ ದುರುಪಯೋಗವಾಗಿದೆ ಎಂದು ಸಚಿವರಿಗೆ ಮನವರಿಕೆಯಾಗಿದೆ. ಈಗಿರತಕ್ಕಂಥ ಒಂದು ಕಾನೂನು ಬಹಳ ನಿಸತ್ವವಾದುದು ಎಂದು ನನಗನ್ನಿಸುತ್ತದೆ. ಈ ಹಂತದಲ್ಲಿ ಕಾಲಾವಕಾಶವನ್ನು ಹೆಚ್ಚು ಮಾಡುತ್ತಿದ್ದಾರೆ. ಆದ್ದರಿಂದ ಇದರ ಬಗ್ಗೆ ಒಂದು ಕಾನೂನನ್ನು ತಕ್ಷಣ ಹೊರತರಬೇಕು. ತದನಂತರ ಪಿಎಲ್‌ಡಿ ಬ್ಯಾಂಕ್‌ಗಳಲ್ಲಿ ಸಮಿತಿಯವರೇ ನೇಮಿಸಿದ ಕಾರ್ಯದರ್ಶಿಗಳು ಕೆಲಸ ಮಾಡುತ್ತಿದ್ದಾರೆ. ಅವರಿಗೆ ಬೇಕಾದವರಿಗೆ ಮಾತ್ರ ಏಕಮುಖವಾದಂಥ ಸಾಲವನ್ನು ಕೊಡತಕ್ಕಂಥ ಪ್ರವೃತ್ತಿ ನಡೆಯುತ್ತಿದೆ. ಇದನ್ನು ಈ ಕೂಡಲೇ ತಡೆಗಟ್ಟಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ,

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೆ ಎಲ್ಲೆಲ್ಲಿ ಮಳೆ ಇಲ್ಲದೇ ಬೆಳೆ ಹಾಳಾಗಿದೆ, ಇಂಥ ಕಡೆ ಕನ್‌ವರ್ಷನ್ ಮಾಡುತ್ತೇವೆ ಎಂದು ಮೂರನೇ ಸಾರಿ ಹೇಳುತ್ತಿದ್ದೇನೆ. ಎರಡನೆಯದು, ಅವರಿಗೆ ಪುನಃ ಸಾಲವನ್ನು ಕೊಡುತ್ತೇನೆ ಎಂದು ಹೇಳಿದ್ದೇನೆ. ಇನ್ನು ದುರುಪಯೋಗದ ಬಗ್ಗೆ ಅಲ್ಲಿ ಕಾನೂನನ್ನು ಬದಲಾವಣೆ ಮಾಡಬೇಕು ಎಂದು ಸೂಚನೆ ಕೊಟ್ಟಿದ್ದಾರೆ. ಈಗಿರುವ ಕಾನೂನಿನ ಅಡಿಯಲ್ಲಿ ಈ ಕೂಡಲೇ ಡಿಸ್‌ಮಿಸ್ ಮಾಡುವುದಕ್ಕೆ ಬರುವುದಿಲ್ಲ. ಎನ್‌ಕ್ವೈರಿ ಮಾಡುವುದಕ್ಕೆ ತಿಂಗಳುಗಟ್ಟಲೇ, ವರ್ಷಗಟ್ಟಲೆ ಬೇಕಾಗುತ್ತವೆ, ಆದ್ದರಿಂದ ಕಾನೂನನ್ನು ಬದಲಾವಣೆ ಮಾಡಲು ಸಾಧ್ಯ ಇದೆಯೋ ಎಂದು ಯೋಚಿಸುತ್ತೇನೆ. ಇನ್ನು ಮೂರನೆಯದಾಗಿ, ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ಕಾರ್ಯದರ್ಶಿಗಳ ಬಗ್ಗೆ ಗಮನದಲ್ಲಿಟ್ಟುಕೊಂಡು ಅವರು ಹೇಳಿದ್ದಾರೆ. ಈಗಾಗಲೇ ಅಲ್ಲಿ ಬೇರೆಯವರನ್ನು ಅಂದರೆ ಒಬ

ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರನ್ನು ಹಾಕಿದ್ದೇವೆ. ಎಲ್ಲೆಲ್ಲಿ ಸಮಿತಿಯವರು ತಾವೇ ಕಾರ್ಯದರ್ಶಿಗಳನ್ನು ನೇಮಕ ಮಾಡಿಕೊಂಡಿದ್ದಾರೆ. ಆ ಕಾರ್ಯದರ್ಶಿಗಳನ್ನು ಬದಲಾವಣೆ ಮಾಡುವ ಬಗ್ಗೆ ಒಂದು ಕಾಮನ್ ಕೇಡರ್ ಅಥಾರಿಟಿ ಇದೆ. ಆದರ ಬಗ್ಗೆ ಡಬಲ್ ಬೆಂಚ್‌ನಲ್ಲಿ ತೀರ್ಮಾನವನ್ನು ಕೊಟ್ಟಿರುತ್ತಾರೆ. ಸಿಸಿಎ ಬಗ್ಗೆ ಹೇಳಿದ್ದಾರೆ, ಅದನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಜಿ. ಮಾದೇಗೌಡ.—ಅಧ್ಯಕ್ಷರೇ, ಸಹಕಾರಿ ಸಕ್ಕರೆ ಕಾರ್ಖಾನೆಗಳ ಬಗ್ಗೆ ಮಾನ್ಯ ಮಂತ್ರಿಗಳು ಈಗಾಗಲೇ ತೀರ್ಮಾನ ಮಾಡಿದ್ದಾರೆ. ಕೆಲವು ಫ್ಯಾಕ್ಟರಿಗಳನ್ನು ಮಾರಾಟ ಮಾಡಬೇಕೆಂಬ ಮಾತನ್ನು ಅವರು ಸೂಚ್ಯವಾಗಿ ಹೇಳಿದ್ದಾರೆ. ಅದಕ್ಕೆ ಕೊಟ್ಟಿರುವ ಕಾರಣವೇನೆಂದರೆ, ಅವರಲ್ಲಿ ಕಬ್ಬು ಇಲ್ಲ, ನೀರು ಇಲ್ಲ. ಈ ಉದ್ದೇಶದಿಂದ ನಷ್ಟವಾಗುತ್ತದೆ. ಆದ್ದರಿಂದ ಮಾರಾಟ ಮಾಡಬೇಕು ಎಂಬ ತೀರ್ಮಾನಕ್ಕೆ ಬಂದಿದ್ದೇವೆ ಎಂದು ಹೇಳಿದ್ದಾರೆ. ಅಧ್ಯಕ್ಷರೇ, ತಮಗೆ ಗೊತ್ತಿದೆ, ಸಹಕಾರಿ ಸಂಸ್ಥೆಗಳು ಸ್ವಯಂ ಆಡಳಿತ ಸಂಸ್ಥೆಯಾಗಿ ನಡೆಸತಕ್ಕಂಥ ಒಂದು ಸಂಸ್ಥೆ. ಜನರೇ ನಡೆಸತಕ್ಕಂಥ ಒಂದು ಸಂಸ್ಥೆ ಎಂದು ತಮಗೆ ಗೊತ್ತಿದೆ. ಆದರೆ ಕೆಲವು ಹುಟ್ಟಿದಾರಭ್ಯ ಇವತ್ತಿನವರೆಗೂ ಕೂಡ ಸ್ವಯಂ ಆಡಳಿತವನ್ನು ಜನಗಳ ಪ್ರತಿನಿಧಿಗಳಿಂದ ನಡೆಸಿಕೊಂಡು ಬರತಕ್ಕಂತಹ ಸಂಸ್ಥೆಗಳು ಆಗಿಲ್ಲ. ಕಾರಣವೇನೆಂದರೆ ಇವತ್ತು ಕೆಲವು ಸರ್ಕಾರಿ ಅಧಿಕಾರಿಗಳನ್ನು ಇಂತಹ ಸಂಸ್ಥೆಗಳಿಗೆ ಹಾಕಿ ಅವರಿಗೆ ಆಸಕ್ತಿ ಇಲ್ಲದೇ ಇರುವುದರಿಂದ ಇವುಗಳು ನಷ್ಟವಾಗುತ್ತಿವೆ. ನನಗೆ ತಿಳಿದ ಮಟ್ಟಿಗೆ ಸಕ್ಕರೆ ಕಾರ್ಖಾನೆಗಳು ನೀರು, ಕಬ್ಬು ಇದ್ದು ನಷ್ಟವಾಗಿರತಕ್ಕಂಥಾದ್ದು ಅಲ್ಲ. ಜನ ಇಲ್ಲದೇ ಇರುವುದರಿಂದ ನಷ್ಟವಾಗಿದೆ. ಮಾನ್ಯ ವೆಂಕಟರಾಮಯ್ಯನವರು ಹೇಳಿದರು. ಯಾರಾದರೂ ಬಂದರೆ ಅವರಿಗೆ ವಹಿಸಿಕೊಡುತ್ತೇವೆ ಎಂದು ರೈತರ ಚಳುವಳಿ ನಡೆದಾಗಲೂ ಅದೇ ರೀತಿ ಹೇಳಿದರು. ಮಾನ್ಯ ಮಂತ್ರಿಗಳೂ ಹೇಳಿದರು. ನಡೆಸಿ ಕೊಡುತ್ತೇವೆ ಎಂದು ಹೇಳಿದ್ದಾರೆ. ಅವರು ಕೊಡಲಿಲ್ಲ, ಇವರು ನಡೆಸಲಿಲ್ಲ. ಕೆಲವು ಶಾಸಕರು ಕೆಲವು ಸಕ್ಕರೆ ಕಾರ್ಖಾನೆಗಳನ್ನು ನಡೆಸುವುದಕ್ಕೆ ತಯಾರಾಗಿದ್ದರೆ ಮಾನ್ಯ ಮಂತ್ರಿಗಳು ಮುಂಚಿತವಾಗಿ ಆಯಾಯ ಭಾಗದ ಸದಸ್ಯರುಗಳನ್ನು ಕರೆದು ಚರ್ಚೆ ಮಾಡುವುದಕ್ಕೆ ತಯಾರಾಗಿರಬೇಕು. ಇವುಗಳನ್ನು ಮಾರುವುದಕ್ಕೆ ಮುಂಚಿತವಾಗಿ ಆಯಾಯ ಭಾಗದ ಸದಸ್ಯರನ್ನು ಕರೆದು ಚರ್ಚೆ ಮಾಡಿ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು ಒಳ್ಳೆಯದು. ಇಲ್ಲದೇ ಹೋದರೆ ದೇಶದಲ್ಲಿ ಸಂಸ್ಥೆಯನ್ನು ಕಟ್ಟಿ ಬೆಳೆಸುವುದಕ್ಕೆ ಪ್ರಯತ್ನವನ್ನು ಮಾಡಿದ್ದಾರೆ ಅದಕ್ಕೆ ಧಕ್ಕೆಯಾಗುತ್ತದೆ. ಆದ್ದರಿಂದ ಇದನ್ನು ಮಾರುವುದಕ್ಕೆ ಮುಂಚಿತವಾಗಿ ಆಳವಾಗಿ ಯೋಚನೆ ಮಾಡಿ ಆಯಾಯ ಭಾಗದ ಜನರನ್ನು ಮತ್ತು ಮಂಡಲಿಯ ಅಭಿಪ್ರಾಯವನ್ನು ತೆಗೆದುಕೊಳ್ಳದೆ ಮಾರುವುದಕ್ಕೆ ಸರ್ಕಾರಕ್ಕೆ ಯಾವ ವಿಧವಾದ ಅಧಿಕಾರವೂ ಇಲ್ಲ ಎಂದು ಮೊದಲು ಯೋಚನೆ ಮಾಡಬೇಕು. ಅದನ್ನು ಬಿಟ್ಟು ಅಧಿಕಾರಿಗಳಿಂದ ವರದಿಯನ್ನು ತರಿಸಿಕೊಂಡು ಮಂಡಲಿಯ ಅಭಿಪ್ರಾಯವನ್ನು ತೆಗೆದುಕೊಳ್ಳದೇ ಮಾರುವುದಕ್ಕೆ ಪ್ರಯತ್ನ ಮಾಡಿದರೆ ತೀವ್ರವಾದ ಪರಿಸ್ಥಿತಿಯನ್ನು ಸರ್ಕಾರ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಕೆಯನ್ನು ಕೊಟ್ಟು, ಆಯಾಯ ಭಾಗದ ಶಾಸಕರ ಅಭಿಪ್ರಾಯವನ್ನು ತೆಗೆದುಕೊಂಡು ಮುಂದಿನ ಕ್ರಮ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಅದಕ್ಕೆ ಉತ್ತರ ಕೊಡಬೇಕಾದಂಥ ಅವಶ್ಯಕತೆ ಇಲ್ಲ. ಅವರು ಹೇಳಿದ ಹಾಗೆ ಎಲ್ಲಾ ಹಣ ಅವರದೇ ಆಗಿದ್ದರೆ ನಾವು ಇಂಟರ್‌ಫಿಯರ್ ಆಗುವುದು ಅನಾವಶ್ಯಕ. ಅದರ ಅವಶ್ಯಕತೆ ಇಲ್ಲ. ಅವರೇ ಹಣ ಹಾಕಿ ಮಾಡಿಕೊಂಡಿದ್ದರೆ ನನಗೆ ತೊಂದರೆಯೇ ಇರುತ್ತಿರಲಿಲ್ಲ. ದುರದೃಷ್ಟವಶಾತ್, ಪ್ರತಿಯೊಂದು ಕಾರ್ಖಾನೆಗೂ ಗ್ಯಾರಂಟಿಯಾಗಿ ನಿಂತಿದ್ದೇವೆ. ಕೊಳ್ಳೇಗಾಲದಲ್ಲಿ ೧೦.೬೫ ಕೋಟಿ ರೂಪಾಯಿ ಲಾಸ್ ಆಗಿದೆ. ಗೌರಿಬಿದನೂರಿನಲ್ಲಿ ೬½ ಕೋಟಿ ನಷ್ಟವಾಗಿದೆ. ಮೂರು ಕಾಸು ಬಿಡದ ಹಾಗೆ ವಸೂಲು ಮಾಡುತ್ತಾರೆ.

ಶ್ರೀ ಜಿ. ಮಾದೇಗೌಡ.—ಇದಕ್ಕೆ ಯಾರು ಕಾರಣರು ?

ಶ್ರೀ ಆರ್. ಎಲ್. ಜಾಲಪ್ಪ.—ಅದಕ್ಕೆ ಕಾರಣರು ತಾವು. ಎಲ್ಲಾ ಮುಗಿಸಿ ಹೋಗಿದ್ದೀರಿ. ಅದನ್ನು ನಾನು ತಲೆಯ ಮೇಲೆ ಹೊತ್ತು ತಿರುಗಬೇಕಾಗಿದೆ.

ಶ್ರೀ ಜಿ. ಮಾದೇಗೌಡ.—ನಾವು ನಡೆಸಿಕೊಂಡು ಬಂದಿದ್ದೇವು. ನಿಮ್ಮ ರೀತಿ ಮಾರಾಟ ಮಾಡುವುದಕ್ಕೆ ಹೋಗಿಲ್ಲ. ಲಾಭವೋ, ನಷ್ಟವೋ ನಾವು ನಡೆಸಿಕೊಂಡು ಹೋಗುತ್ತಿದ್ದೆವು.

ಶ್ರೀ ಆರ್. ಎಲ್. ಜಾಲಪ್ಪ.—ನಾವು ೩ವತ್ತು ಏನು ಗ್ಯಾರಂಟಿ ನಿಂತಿದ್ದೇವೆ; ಆ ಹಣವನ್ನು ವಾಪಸ್ಸು ಕೊಟ್ಟರೆ ಯಾವ ಸಹಕಾರ ಸಂಘಗಳನ್ನು ನಡೆಸುವುದಕ್ಕೂ ನಮ್ಮ ಅಭ್ಯಂತರ ಇಲ್ಲ. ಕೊಡುವುದಾದರೆ ಸಂತೋಷ. ಯಾವಾಗ ಕೊಡುತ್ತಾರೋ ಹೇಳಲಿ, ನಡೆಸಲಿ. ನಾವು ಇಂಟರ್‌ಫಿಯರ್ ಆಗುವುದಿಲ್ಲ. ಪೂರ್ಣವಾಗಿ ಅವರ ಕೈಯಲ್ಲಿಯೇ ಕೊಡುವುದಕ್ಕೆ ತಯಾರಾಗಿದ್ದೇವೆ. ಬೆಳಗಾಂ, ಗುಲ್ಬರ್ಗ, ಧಾರವಾಡ, ಬಿಜಾಪುರ ಜಿಲ್ಲೆಯ ಕೆಲವು ಭಾಗದಲ್ಲಿ ಬೇಕಾದಷ್ಟು ಕಬ್ಬು ಇದೆ ಎಂದು ನನ್ನ ಸ್ನೇಹಿತರು ಹೇಳಿದರು. ಬೀದರ್‌ನಲ್ಲಿ ಕಾರಂಜ ಪ್ರಾಜೆಕ್ಟ್ ಬರುತ್ತಿದೆ. ಅಲ್ಲಿಯೂ ಕಬ್ಬು ಇದೆ. ಅದು ಮಹಾರಾಷ್ಟ್ರಕ್ಕೆ ಹೋಗುತ್ತಿದೆ. ಅವರಿಗೆ ಹಣವನ್ನು ಒದಗಿಸಬೇಕು. ನಮಗೆ ಹಣವನ್ನು ಯಾರು ಕೊಡುತ್ತಾರೆ. ಅವರು ನೀವು ಡಿಫಾಲ್ಟರ್ ಆಗಿದ್ದೀರಿ, ಹಣ ಕೊಡುವುದಿಲ್ಲ ಎಂದು ಹೇಳುತ್ತಿದ್ದಾರೆ. ಇಂತಹ ಸಂದಿಗ್ಧ ಸಮಯದಲ್ಲಿ ನಾನು ಏನು ಮಾಡಬೇಕು ? ತಾವೇ ಹೇಳಿ. ಸುಮ್ಮನೆ ಆಂದೋಳನ ನಡೆಸುತ್ತೇವೆ. ಪ್ರಾಣ ಬಿಡುತ್ತೇವೆ ಎಂದು ಹೇಳಿದರೆ ನಾನು ಏನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಜಿ. ಮಾದೇಗೌಡ.—ಅಧ್ಯಕ್ಷರೆ,......

ಅಧ್ಯಕ್ಷರು.—ತಮಗೆ ಸಾಕಷ್ಟು ಅವಕಾಶ ಕೊಟ್ಟಿದ್ದೇನೆ. ತಾವು ಕೂಡ್ರಿ.

ಶ್ರೀ ಜಿ. ಮಾದೇಗೌಡ.—ತಮಗೆ ತೃಪ್ತಿಯಾಗುವಂಥ ಉತ್ತರವನ್ನು ಕೊಡಬೇಕು.

ಶ್ರೀ ಬಿ. ಸ್ವಾಮಿರಾವ್.—ಕರ್ನಾಟಕದಲ್ಲಿ ಭೂ-ಸಂಧಾರಣಾ ಕಾನೂನಿನನ್ವಯ ಭೂಮಿ ಪಡೆದಿರತಕ್ಕ ಸಣ್ಣ ರೈತರಿಗೆ ಪುಕ್ಕಟೆಯಾಗಿ ಖಾತೆ ಮಾಡಿಕೊಡುತ್ತೇವೆ ಎಂದು ಜಾಲಪ್ಪನವರು ಆಶ್ವಾಸನೆ ಕೊಟ್ಟಿದ್ದರು. ಮಂತ್ರಿ ಮಂಡಲದಲ್ಲೂ ಇದರ ಬಗ್ಗೆ ಚರ್ಚೆಯಾಗಿತ್ತು. ಅವರು ಕಂತು ಕಟ್ಟುವುದು ಬೇಕಾಗಿಲ್ಲ, ಪುಕ್ಕಟೆಯಾಗಿ ಖಾತೆ ಮಾಡಿಕೊಡುತ್ತೇವೆ ಎಂದು ತಾವೇ ಹೇಳಿದಿರಿ. ಕೆಲವರು ಭೂ-ಬ್ಯಾಂಕ್‌ನಿಂದ ಸಾಲ ಪಡೆದು ಸರ್ಕಾರಕ್ಕೆ ಕಟ್ಟಿದ್ದರು. ಈಗ ಅಂಥ ರೈತರಿಗೆ ಸಾಲ ಕೊಡಬೇಕೆಂದು ಕಡ್ಡಾಯವಾಗಿ ಜಫ್ತಿ ಮಾಡಿ ವಸೂಲು ಮಾಡುತ್ತಿದ್ದಾರೆ. ಅದರ ಬಗ್ಗೆ ತಾವು ಏನು ಹೇಳುತ್ತೀರಿ?

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೇ, ಮಾನ್ಯ ಸದಸ್ಯರು ನಾನು ಉತ್ತರ ಹೇಳುವಾಗ ಬಂದಿರಲಿಲ್ಲ ಎಂದು ಕಾಣುತ್ತದೆ, ಅರ್ಧ ಗಂಟೆ, ಒಂದು ಗಂಟೆ ನಿಧಾನವಾಗಿ ಬಂದು ಪ್ರಶ್ನೆ ಕೇಳಿದರೆ ಕಷ್ಟವಾಗುತ್ತದೆ. ಮಾನ್ಯ ವೆಂಕಟರಾಮಯ್ಯನವರ ಪ್ರಶ್ನೆಗೆ ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಅದೇ ವಿಚಾರವನ್ನು ಮತ್ತೆ ಇವರು ಕೇಳುತ್ತಿದ್ದಾರೆ.

ಶ್ರೀಮತಿ ಸುಮ ವಸಂತ.—ಬೆಂಗಳೂರಿನಲ್ಲಿ ಕೂರ್ಗ್ ಆರೆಂಜ್ ಗ್ರೋಯರ್ಸ್ ಕೋ-ಆಪರೇಟೀವ್ ಸೊಸೈಟಿ ಎಂದು ಇದೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಆರ್. ಎಲ್. ಜಾಲಪ್ಪ.—ಆ ಸೊಸೈಟಿ ಬೆಂಗಳೂರಿನಲ್ಲಿ ಅಲ್ಲ ಇರುವುದು. ಬೆಂಗಳೂರಿನಲ್ಲಿ ಅವರದೊಂದು ಕಟ್ಟಡ ಇದೆ. ಗೋಣಿಕೊಪ್ಪದಲ್ಲಿ ಕೂರ್ಗ್ ಆರೆಂಜ್ ಗ್ರೋಯರ್ಸ್ ಅಂಡ್ ಪ್ರೋಸೆಸಿಂಗ್ ಕೋ-ಆಪರೇಟೀವ್ ಸೊಸೈಟಿ ಎಂದಿದೆ. ೮ ವರ್ಷಗಳಿಂದ ಅದು ಕೆಲಸ ಮಾಡದೆ ನಿಂತಿದೆ. ಅದನ್ನು ನಡೆಸಬೇಕೆಂದು ಪ್ರಯತ್ನ ಪಟ್ಟರೂ ಅದಾಗದೆ ಕಡೆಗೆ ಕರ್ನಾಟಕ ಕನ್‌ಸ್ಯೂಮರ್ಸ್ ಫೆಡರೇಷನ್ನಿನವರು ನಡೆಸಬೇಕೆಂದು ಪ್ರಯತ್ನ ಮಾಡಿದ್ದರು. ಅವರೂ ಒಪ್ಪಲಿಲ್ಲ. ನಾನು ಖುದ್ದಾಗಿ ಹೋಗಿ ಅದನ್ನು ನೋಡಿದ್ದೇನೆ. ಡೆನ್ಮಾರ್ಕ್‌ದಿಂದ ತರಿಸಿದ ಇಂಪೋರ್ಟೆಡ್ ಮೆಷಿನರಿ ಅಲ್ಲಿದೆ. ಏತಕ್ಕೆ ಹಾಗಾಗಿದೆ ಎಂದು ವಿಚಾರಿಸಿದಾಗ ರಾ-ಮೆಟೀರಿಯಲ್‌ನ್ನು ಬೆಂಗಳೂರು ಮುಂತಾದ ಕಡೆ ಕಳುಹಿಸಿ ಕೊಡುತ್ತಾರೆ, ಏಕೆಂದರೆ ಇನ್‌ಕಂ-ಟ್ಯಾಕ್ಸ್ ಪ್ರಾಬ್ಲಂ ಇದೆ ಎಂದು ಹೇಳಿದರು. ಈ ರೀತಿ ಕಾರಣಾಂತರದಿಂದ ವಿಧಿ ಇಲ್ಲದೆ ಬೇರೆಯವರಿಗೆ ಕೊಡುವುದಕ್ಕೆ ಟೆಂಡರ್ ಕರೆದೆವು. ಆಗಲೂ ಯಾರೂ ಬರಲಿಲ್ಲ. ಅದಕ್ಕೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನವರು ೧೧ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಜಿಲ್ಲಾ ಬ್ಯಾಂಕಿನವರು ೯ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಸರ್ಕಾರದಿಂದ ೧೧ ಲಕ್ಷ ರೂಪಾಯಿ ಇದೆ. ಎನ್.ಸಿ.ಡಿ.ಸಿ. ಹಣ ಇದೆ. ೮೦ ಲಕ್ಷ ರೂಪಾಯಿ ನಷ್ಟವಾಗಿದೆ. ನಾವು ಅಧಿಕಾರಕ್ಕೆ ಬರುವುದಕ್ಕಿಂತ ಮೊದಲೇ ಈ ಅವತಾರ ಎಲ್ಲಾ ಮುಗಿದು ಹೋಗಿತ್ತು. ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನವರು

ತಮ್ಮ ಹಣ ಹೋಗಿಬಿಡುತ್ತದೆ ಎಂದು ೪೬ ಲಕ್ಷ ರೂಪಾಯಿಗಳಿಗೆ ಕೊಂಡು ಕೊಳ್ಳುವುದಕ್ಕೆ ಒಬ್ಬರನ್ನು ಕರೆದುಕೊಂಡು ಬಂದಿದ್ದಾರೆ. "ದಯಮಾಡಿ ಬಡ್ಡಿ ಬಿಟ್ಟು ಅಸಲು ತೆಗೆದುಕೊಳ್ಳಿ" ಎಂದು ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನವರಿಗೆ ಹೇಳಿ ಒಪ್ಪಿಸಿದ್ದೇನೆ. ಜಿಲ್ಲಾ ಬ್ಯಾಂಕಿನವರಿಗೂ ಬಡ್ಡಿ ಬಿಡಿ ಎಂದು ಹೇಳಿದ್ದೇನೆ. ಅಲ್ಲಿನ ನೌಕರರಿಗೆ ೩–೩½ ಲಕ್ಷ ಸಂಬಳ ಕೊಡುವುದು ಬಾಕಿ ಇದೆ. ಕೆಲಸವಿಲ್ಲದೇ ೮ ವರ್ಷದಿಂದ ಸಂಬಳ ಕೊಡಬೇಕು, ೪೬ ಲಕ್ಷ ಅದಕ್ಕೆಲ್ಲಾ ಸರಿ ಹೋಗುತ್ತದೆ. ಬೆಂಗಳೂರಿನಲ್ಲಿರುವ ವ್ಯಾಲ್ಯುಬಲ್ ಕಟ್ಟಡವನ್ನು ಲಿಕ್ವಿಡೇಷನ್‌ನಲ್ಲಿ ಸಿಕ್ಕಿಸಲಿಲ್ಲ. ಅದನ್ನು ಉಳಿಸೋಣ ಎಂದು ಸೇರಿಸದೆ ನಿಲ್ಲಿಸಿದೆವು. ಎ.ಪಿ.ಎಂ.ಸಿ ಯವರಿಗೆ ಮೊನ್ನೆ ಕಟ್ಟಡ ಒಂದು ಬೇಕಾಗಿತ್ತು. ಹಣ್ಣು ತರಕಾರಿ ರೆಗ್ಯುಲೇಟ್ ಮಾಡುವುದಕ್ಕೆ ಕಟ್ಟಡ ಬೇಕಾಗಿತ್ತು. ಆದ್ದರಿಂದ ಎ.ಪಿ.ಎಂ.ಸಿ.ಯವರನ್ನು ಕರೆದು ತಿಂಗಳಿಗೆ ೧೦ ಸಾವಿರ ರೂಪಾಯಿ ಬಾಡಿಗೆ, ಒಂದು ಲಕ್ಷ ರೂಪಾಯಿ ಅಡ್ವಾನ್ಸ್ ಎಂದು ಮಾತನಾಡಿ ಅವರಿಗೆ ಕೊಡಿಸಿದ್ದೇನೆ. ಈಗ ನೌಕರರು ಅಲ್ಲಿ ಬಂದಿದ್ದಾರೆ. ಅಲ್ಲಿ ವ್ಯಾಪಾರ ಮಾಡಿಕೊಳ್ಳುತ್ತಿದ್ದೇವು, ಅದರಲ್ಲಿ ವರ್ಷಕ್ಕೆ ೮೮ ಸಾವಿರ ರೂಪಾಯಿ ಬರುತ್ತದೆ ಎಂದು ಲೆಕ್ಕ ತೋರಿಸಿದ್ದಾರೆ. ಅವರು ಹೇಳಿರುವುದು ಸರಿಯಲ್ಲ. ಮೋಸ ಅದು. ಮೊದಲು ಅವರನ್ನು ಇನ್ನೊಬ್ಬರನ್ನು ಹಿಡಿದುಕೊಂಡು ನಮಗೇ ಕೊಡಿ ಎಂದು ಹೇಳುತ್ತಾರೆ. ಪ್ರತಿ ತಿಂಗಳು ಬಾಡಿಗೆ ಬರುವಂತೆ ಎ.ಪಿ.ಎಂ.ಸಿ.ಯವರಿಗೆ ಕೊಡಿಸಿದ್ದೇನೆ. ಇದರಲ್ಲಿ ಅವರ ತಕರಾರು ಏನೋ ಗೊತ್ತಿಲ್ಲ. ತಿಂಗಳಿಗೆ ೨೦೦ ರೂಪಾಯಿಯೂ ದುಡಿಯುತ್ತಿರಲಿಲ್ಲ. ಅಂಥದ್ದರಲ್ಲಿ ೧೦ ಸಾವಿರ ರೂಪಾಯಿಗಳನ್ನು ಕೊಡಿಸುತ್ತಿದ್ದೇನೆ. ಆದ್ದರಿಂದ ಯಾವುದೇ ತೊಂದರೆ ಅವರಿಗಾಗುವುದಿಲ್ಲ ಎಂದು ಭರವಸೆ ಕೊಡುತ್ತೇನೆ.

ಶ್ರೀ ಬಿ. ಎ. ಉಪ್ಪಿನ.––ಅಧ್ಯಕ್ಷರೇ........

ಅಧ್ಯಕ್ಷರು.––ಕೂಡ್ರಿ,

ಶ್ರೀ ಬಿ. ಎ. ಉಪ್ಪಿನ.––ನನ್ನದು ಕ್ರಿಯಾಲೋಪ ಇದೆ.

ಅಧ್ಯಕ್ಷರು.––ಕೂಡ್ರಿ. ಈಗ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಉತ್ತರ ಕೊಡುತ್ತಾರೆ. ಸಹಕಾರ ಮಂತ್ರಿಗಳ ಉತ್ತರ, ವಿವರಣೆ ಮುಕ್ತಾಯವಾಯಿತು. ಗ್ರಾಮೀಣಾಭಿವೃದ್ಧಿ ಮಂ ್ರಗಳ ಉತ್ತರ ಆದನಂತರ ಉಳಿದವರಿಗೆ ಅವಕಾಶ ಕೊಡುತ್ತೇನೆ.

ಶ್ರೀ ಬಿ. ಎ. ಉಪ್ಪಿನ.––ನನ್ನ ಕ್ರಿಯಾಲೋಪ ಇದೆ.

ಅಧ್ಯಕ್ಷರು.––ಉತ್ತರ ಕೇಳಿ.

ಶ್ರೀ ಬಿ. ಎ. ಉಪ್ಪಿನ.––ನನ್ನ ಕ್ರಿಯಾಲೋಪ ಇದೆ. ಕೇಳಿ.

ಅಧ್ಯಕ್ಷರು.––ಉತ್ತರ ಕೇಳಿ. ರಾಜವರ್ಧನ್ ಅವರೇ, ಸ್ವಲ್ಪ ನೋಡಿ.

ಶ್ರೀ ಬಿ. ಎ. ಉಪ್ಪಿನ.––ನನ್ನ ಕ್ರಿಯಾಲೋಪಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು.––ಈ ತರಹ ಮಾತನಾಡಬಾರದು ನೀವು. ಉಪಯೋಗ ಮಾಡುವುದಕ್ಕೆ ನನಗೂ ಅಸ್ತ್ರ ಇದೆ.

ಶ್ರೀ ಬಿ. ಎ. ಉಪ್ಪಿನ.–ಮಾರುಕಟ್ಟೆ ಮೇಲೆ ನಾನು ಪ್ರಶ್ನೆ ಕೇಳಬೇಕು. ನನಗೆ ಅವಕಾಶ ಇಲ್ಲದಿದ್ದರೆ ಏತಕ್ಕೆ ಬರಬೇಕು?

ಅಧ್ಯಕ್ಷರು.––ನಾನು ಗ್ರಾಮೀಣಾಭಿವೃದ್ಧಿ ಮಂತ್ರಿಗಳನ್ನು ಕರೆದಿದ್ದೇನೆ. ಅವರ ಉತ್ತರ ಕೇಳಿ. ನಂತರ ಅವಕಾಶ ಕೊಡುತ್ತೇನೆ. ಯಾರು ಯಾರಿಗೆ ಅವಕಾಶ ಸಿಗಲಿಲ್ಲವೋ ಅವರಿಗೆ ಅವಕಾಶ ಕೊಡುತ್ತೇನೆ.

ಶ್ರೀ ಕೆ. ಬಿ. ಶಾಣಪ್ಪ.––ಇದುವರೆಗೂ ನಮಗೆ ಅವಕಾಶ ಸಿಗಲಿಲ್ಲ.

ಅಧ್ಯಕ್ಷರು.––ಕೃಷ್ಣನ್ ಅವರು ಕೇಳಿದ್ದಾರೆ. ಎಲ್ಲರಿಗೂ ಅವಕಾಶ ಕೊಡಬೇಕೆಂದು ನಿಯಮ ಇಲ್ಲ. ನನಗೂ ರೂಲ್ಸ್ ರೆಗ್ಯುಲೇಷನ್ಸ್ ಗೊತ್ತಿದೆ. ಕುಳಿತುಕೊಳ್ಳಿ. ಈಗ ಸಹಕಾರ ಇಲಾಖೆ ಮೇಲಿನ ಚರ್ಚೆ ಉತ್ತರ ಮುಕ್ತಾಯ ಮಾಡಿದ್ದೇನೆ. ಗ್ರಾಮೀಣಾಭಿವೃದ್ಧಿ ಮಂತ್ರಿಗಳನ್ನು ಕರೆದಿದ್ದೇನೆ. ಅವರು ಉತ್ತರ ಹೇಳಲಿ. ಆಮೇಲೆ ಬೇಕಾದರೆ ಅವಕಾಶ ಕೊಡುತ್ತೇನೆ.

ಶ್ರೀ ಕೆ.ಬಿ. ಶಾಣಪ್ಪ.—ನಮ್ಮಂಥವರು ನಿಮಗೆ ಕಾಣುವುದಿಲ್ಲ.

ಶ್ರೀ ಬಿ ಎ. ಉಪ್ಪಿನ.—ನನ್ನ ಕ್ರಿಯಾಲೋಪಕ್ಕೆ ಉತ್ತರ ಕೊಡಬೇಕು. ನಾನು ಬೇರೆಯವರು ಮಾತನಾಡುವುದಕ್ಕೆ ಬಿಡುವುದಿಲ್ಲ. ನನ್ನ ಕ್ರಿಯಾಲೋಪ ಕೇಳಿ.

ಶ್ರೀ ರಾಜವರ್ಧನ್.—ಅವರು ಪಾಯಿಂಟ್ ಆಫ್ ಆರ್ಡರ್ ಕೇಳುತ್ತಾರೆ.

ಅಧ್ಯಕ್ಷರು.—ನೀವು ಹೋಗಿ ಹೇಳಿ.

ಶ್ರೀ ಬಿ. ಎ. ಉಪ್ಪಿನ.—ನಾನು ಹೇಳುವುದನ್ನು ಕೇಳಿ. ಪಾಯಿಂಟ್ ಆಫ್ ಆರ್ಡರ್ ಎತ್ತುವುದಕ್ಕೆ ಅಧಿಕಾರ ಇಲ್ಲವೇ? ನನ್ನ ಪಾಯಿಂಟ್ ಆಫ್ ಆರ್ಡರ್ ಕೇಳಿ. ಆಮೇಲೆ ರೂಲಿಂಗ್ ಕೊಡಿ.

ಅಧ್ಯಕ್ಷರು.—ಈಗ ಪಾಯಿಂಟೂ ಇಲ್ಲ, ಆರ್ಡರೂ ಇಲ್ಲ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಿ. ಎ. ಉಪ್ಪಿನ.—ಆಗುವುದಿಲ್ಲ. ನಮಗೆ ಪಾಯಿಂಟ್ ಆಫ್ ಆರ್ಡರ್ ಎತ್ತುವುದಕ್ಕೆ ಅಧಿಕಾರ ಇದೆಯೋ ಇಲ್ಲವೇ ಕೇಳುತ್ತೇನೆ. ನಾನು ಹೇಳಿದ್ದು ಸರಿಯಿಲ್ಲದಿದ್ದರೆ ತೆಗೆದು ಹಾಕಿ. ೧೦ನೇ ಸಲ ನಾನು ಕೇಳುತ್ತಿದ್ದೇನೆ. ಅವಕಾಶ ಕೊಡದಿದ್ದರೆ ರಾಜೀನಾಮೆ ಕೊಟ್ಟು ಹೋಗುತ್ತೇನೆ. ಮಾತನಾಡುವುದಕ್ಕೆ ಬಂದಿಲ್ಲವೇ ನಾವು? ಮಲಗಿಕೊಳ್ಳುವುದಕ್ಕೆ ಬರಬೇಕಾ? ನನ್ನ ಪಾಯಿಂಟ್ ಆಫ್ ಆರ್ಡರ್‌ಗೆ ಅವಕಾಶ ಕೊಡಿ.

ಅಧ್ಯಕ್ಷರು.—ಕೊಡಿ.

ಶ್ರೀ ಬಿ. ಎ. ಉಪ್ಪಿನ.—ಕೇಳಿ ಮೊದಲು.

ಅಧ್ಯಕ್ಷರು.—ಹೊಸದಾಗಿ ಬಂದಿರುವುದರಿಂದ ಅವರಿಗೆ ರೂಲ್ಸ್.ರೆಗ್ಯುಲೇಷನ್ಸ್ ಗೊತ್ತಿರುವುದಿಲ್ಲ.

ಶ್ರೀ ಬಿ. ಎ. ಉಪ್ಪಿನ.—ಪಾಯಿಂಟ್ ಆಫ್ ಆರ್ಡರ್ ಕೇಳಿ. ಸರಿಯಿಲ್ಲದಿದ್ದರೆ ತೆಗೆದು ಹಾಕಿ.

ಅಧ್ಯಕ್ಷರು.—ಏನು ಪಾಯಿಂಟ್ ಆಫ್ ಆರ್ಡರ್ ನಿಮ್ಮದು, ಕೊಡಿ.

ಶ್ರೀ ಬಿ. ಎ. ಉಪ್ಪಿನ.—ಪಾಯಿಂಟ್ ಆಫ್ ಆರ್ಡರ್ ಕೇಳಿ. ಒಂದು ನಿಮಿಷ ಕೇಳಿ. ನನ್ನ ಹಕ್ಕಿನ ಚ್ಯುತಿ ಆಗಿದೆ.

ಶ್ರೀ ಎಂ. ಎಸ್. ಪಾಟೀಲ್.—ಪಾಯಿಂಟ್ ಆಫ್ ಆರ್ಡರ್ ಅಂತೆ ಕೇಳಿ.

ಶ್ರೀ ಬಿ. ಎ. ಉಪ್ಪಿನ.—ಪಾಯಿಂಟ್ ಆಫ್ ಆರ್ಡರ್ ಇಲ್ಲದೇ ಇದ್ದರೆ ತಳ್ಳಿಹಾಕಲಿ.

ಅಧ್ಯಕ್ಷರು.—ಕೇಳಿ.

ಶ್ರೀ ಬಿ. ಎ. ಉಪ್ಪಿನ.—ನನ್ನ ಪಾಯಿಂಟ್ ಆಫ್ ಆರ್ಡರ್ ಏನು ಎಂದು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ತಾವು ದಯವಿಟ್ಟು ಶಾಂತ ರೀತಿಯಿಂದ ನನ್ನ ಮನವಿಯನ್ನು ಕೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಹೋದಸಲ ನಾನು ಹೊಸದಾಗಿ ಆರಿಸಿಬಂದಾಗ, ಅನೇಕ ಸಲ ನಿಮ್ಮನ್ನು ನಾವು ಮಾತನಾಡುವುದಕ್ಕೆ ಅವಕಾಶವನ್ನು ಕೇಳಿದೆವು. ಅಲ್ಲದೆ ನಮ್ಮವರು ಎನ್ನುವ ಅಭಿಮಾನದಿಂದ ತಮ್ಮ ಛೇಂಬರ್‌ಗೆ ಬಂದು ಕಾಣುವಂತೆ ನಮ್ಮನ್ನು ವಿನಂತಿ ಮಾಡಿಕೊಂಡಿರಿ. ಆಮೇಲೆ ಅಲ್ಲಿ ನಮ್ಮ ಬಗ್ಗೆ ಮಾತನಾಡುತ್ತಾ, ನೀವು ಹೊಸಬರು ಇದ್ದೀರಿ, ಒಂದು ವರ್ಷ ಕಾರ್ಯಕಲಾಪಗಳ ಬಗ್ಗೆ ಕುಳಿತು ಕೇಳಿ, ನೀವು ಮಾತನಾಡುವುದಕ್ಕೆ ಹೋಗಬೇಡಿ ಎಂದು ನಮಗೆ ಉಪದೇಶವನ್ನು ಮಾಡಿದಿರಿ. ತಾವು ಹೇಳಿದ ಮಾತನ್ನು ಕೇಳಿಕೊಂಡು ಹೋದವರ್ಷ ನೀವು ಬಾಯಿಮುಚ್ಚಿಕೊಂಡು ಕುಳಿತಿದ್ದೆವು. ಈ ವರ್ಷ ಸದನ ಪ್ರಾರಂಭವಾದಮೇಲೆ ಬರಗಾಲದ ವಿಷಯದ ಮೇಲೆ ಚರ್ಚೆ ಮಾಡಬೇಕೆಂದು ನಿಮ್ಮನ್ನು ಕೇಳಿದೆವು. ಆಗ ನೀವು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿ ಎಂದು ಹೇಳಿದಿರಿ. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಬಂದಾಗ ಕೇಳಿದ್ದಕ್ಕೆ ಆಯವ್ಯಯದ ಮೇಲೆ ಚರ್ಚೆ ಮಾಡಿ ಎಂದು ಹೇಳಿದಿರಿ. ಆ ನಂತರ ಆಯವ್ಯಯದ ಮೇಲೆ ಚರ್ಚೆ ಬಂದಾಗ ಬೇಡಿಕೆ ಮೇಲೆ ಚರ್ಚೆ ಬಂದಾಗ ಮಾತನಾಡಿ ಎಂದು ಹೇಳಿದಿರಿ. ಈಗ ನಾವು ಬೇಡಿಕೆ ಮೇಲೆ ಚರ್ಚೆಗೆ ಕ್ಲಾರಿಫಿಕೇಷನ್ಸ್‌ಗೆ ಅವಕಾಶವನ್ನು ಕೇಳಿದರೆ ತಾವು

ಅವಕಾಶವನ್ನು ಕೊಡುತ್ತಾ ಇಲ್ಲ. ಉದಾಹರಣಾರ್ಥವಾಗಿ ಹೇಳಬೇಕೆಂದರೆ ಮತ್ತು ಬಡ್ಜೆಟ್ ಮೇಲೆ ಮಾತನಾಡಲು ವಿರೋಧಪಕ್ಷದವರಿಗೆ ೩ ನಿಮಿಷ ಅವಕಾಶವನ್ನು ಕೊಟ್ಟಿರಿ. ಇವತ್ತು ಬಡ್ಜೆಟ್ ಮೇಲೆ ವಿರೋಧಪಕ್ಷದ ಎಲ್ಲಾ ಸದಸ್ಯರೂ ಮಾತನಾಡಿ ಸಮಯ ಉಪಯೋಗಿಸಿಕೊಂಡಿದ್ದರಿಂದ ನಮ್ಮ ಪಕ್ಷದ ಸದಸ್ಯರಿಗೆ ಅವಕಾಶ ಇಲ್ಲದಹಾಗೆ ಆಯಿತು. ಈ ಮೂಲಕ ನಾವುಗಳು ಮಾತನಾಡ ತಕ್ಕಂತಹ ಹಕ್ಕನ್ನು ತಾವು ಕಿತ್ತುಕೊಂಡ ಹಾಗೆ ಆಯಿತು. ಅನಾವಶ್ಯಕವಾಗಿ ಔದಾರ್ಯ ರೀತಿಯಲ್ಲಿ ವಿರೋಧ ಪಕ್ಷದವರ ಮೇಲೆ ನೀವು ನಡೆದುಕೊಂಡದ್ದರಿಂದ ನಮಗೆ ಸಿಕ್ಕಬೇಕಾದ ಅವಕಾಶ ಸಿಕ್ಕಲಿಲ್ಲ. ಇವತ್ತು ಗ್ರಾಮೀಣ ಅಭಿವೃದ್ಧಿ ಇಲಾಖೆಯ ಬೇಡಿಕೆ ಬಹಳ ಮುಖ್ಯವಾದುದು. ನಮ್ಮ ದೇಶ ಗ್ರಾಮಗಳಿಂದ ಕೂಡಿದಂತಹ ರಾಜ್ಯ. ಗ್ರಾಮೀಣ ಅಭಿವೃದ್ಧಿಯ ಬಗ್ಗೆ ಸದನದಲ್ಲಿ......

ಶ್ರೀ ಎಸ್. ಬಂಗಾರಪ್ಪ.—ಇದರಲ್ಲಿ ಪಾಯಿಂಟ್ ಆಫ್ ಆರ್ಡರ್ ಇದೆಯೇ?

(ಗೊಂದಲ)

ಶ್ರೀ ಬಿ. ಎ. ಉಪ್ಪಿನ.—ಪ್ರಜಾಪ್ರಭುತ್ವವಾದಿ ವಿಷಯದ ಮೇಲೆ ನಮ್ಮ......

(ಗೊಂದಲ)

ಅಧ್ಯಕ್ಷರು.—ತಾವೆಲ್ಲರೂ ಕೂಡ್ರಿ. ತಾವು ಈಗ ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ,

ಶ್ರೀ ಬಿ. ಎ. ಉಪ್ಪಿನ.—ನಾನು ಮಾರುಕಟ್ಟೆ ವಿಷಯದ ಮೇಲೆ ಮಾತನಾಡಲೇಬೇಕು. ನನಗೆ ಈ ಬಗ್ಗೆ ಅವಕಾಶವನ್ನು ಕೊಡಲೇಬೇಕು. ನನ್ನ ಸಲಹೆಯನ್ನು......

ಅಧ್ಯಕ್ಷರು.—Dont'record. ಮುಂದೆ ತಾವು ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಅಧ್ಯಕ್ಷರು.—ನನಗೂ ಸ್ವಲ್ಪ ಜವಾಬ್ದಾರಿ ಇದೆ ಉಪ್ಪಿನ್ ಅವರೇ. ಪಕ್ಷಪಾತವನ್ನು ನಾನು ಮಾಡಬೇಕಿಲ್ಲ. ಈ ಕಡೆ ಕುಳಿತಿರುವರು, ಆ ಕಡೆ ಕುಳಿತಿರುವರು ಎಲ್ಲರೂ ನನಗೆ ಒಂದೇ. ನಾನೇನೂ ಅತ್ತೂ ಕರೆದು ಈ ಜಾಗಕ್ಕೆ ಬಂದಿಲ್ಲ. ನನಗೆ ಎಲ್ಲರೂ ಒಂದೇ. ನೀವು ರಾಜ್ಯಪಾಲರ ಭಾಷಣದ ಮೇಲೆ ೧೪ ನಿಮಿಷ ಮಾತನಾಡಲು ನಾನು ಅವಕಾಶ ಕೊಟ್ಟಿದ್ದೇನೆ. ಕೆಲವೊಂದು ಸಾರಿ ನಿಮ್ಮ ಹೆಸರನ್ನು ಕರೆದಾಗ ನೀವು ಗೈರುಹಾಜರಾಗಿದ್ದಿರಿ. ನಾವು ಇಲ್ಲಿ ಇರುವ ಎಲ್ಲ ೨೨೪ ಜನರಿಗೂ ಅವಕಾಶವನ್ನು ಕೊಡುವುದಕ್ಕಾಗುವುದಿಲ್ಲ. ಈಗ ೩ ಸೀಟ್‌ಗಳು ವೇಕೆಂಟ್ ಇವೆ. ಈಗಾಗಲೇ ಎರಡೂವರೆ ಗಂಟೆಗಳ ಕಾಲ ಚರ್ಚೆ ಆಗಿದೆ. ನೀವು ಸಿಟ್ಟಿನ ಭರದಲ್ಲಿ......

ಶ್ರೀ ಬಿ. ಎ. ಉಪ್ಪಿನ.—ನಾವು ನಮ್ಮ ಕ್ಷೇತ್ರದಲ್ಲಿ ನಮ್ಮ ಜನರಿಗೆ ಉತ್ತರವನ್ನು ಹೇಳಬೇಕಾಗುತ್ತದೆ. ಇಲ್ಲದಿದ್ದರೆ ನೀವೇನು ಸಭೆಯಲ್ಲಿ ನಿದ್ರಿಸುತ್ತಿದ್ದಿರಾ ಎಂದು ಹೇಳುತ್ತಾರೆ.

ಅಧ್ಯಕ್ಷರು. —ತಾವು ಕುಳಿತುಕೊಳ್ಳಿ ಸ್ವಾಮಿ.

ಶ್ರೀ ಬಿ. ಎ, ಉಪ್ಪಿನ.—ನಾನು ಈ ಬಗ್ಗೆ ಪ್ರತಿಭಟಿಸಿ ಹೊರಗೆ ಹೋಗುತ್ತೇನೆ.

(ಈ ಸಮಯದಲ್ಲಿ ಆಡಳಿತ ಪಕ್ಷದ ನಾಲ್ಕೈದು ಜನ ಶಾಸಕರು ಅವರು ಹೊರಗೆ ಹೋಗದಂತೆ ಅವರನ್ನು ಸಮಾಧಾನಪಡಿಸುತ್ತಿದ್ದರು)

ಅಧ್ಯಕ್ಷರು.—ಎಲ್ಲರಿಗೂ ನಾನು ಅವಕಾಶವನ್ನು ಕೊಟ್ಟರೆ ಒಂದು ಬೇಡಿಕೆ ಮೇಲೆ ೨ ದಿವಸ ಚರ್ಚೆ ಆಗಬೇಕಾಗುತ್ತದೆ. ನನ್ನ ಬಗ್ಗೆ ಮಾನ್ಯ ಸದಸ್ಯರು ಏನು ಹೇಳಿದರೂ ನನಗೆ ಸಿಟ್ಟು ಬರುವುದಿಲ್ಲ. ಅವರು ಹೊಸಬರು, ತಿಳುವಳಿಕೆ ಇಲ್ಲದೇ ಏನೇನು ಮಾತನಾಡಿದರೂ ನಾನು ಸಿಟ್ಟು ಮಾಡಿಕೊಳ್ಳುವುದಿಲ್ಲ. ನಾನು ಯಾರ ಬಗ್ಗೆಯೂ ಪಕ್ಷಪಾತವನ್ನು ಮಾಡುವುದಿಲ್ಲ. ನಿಮ್ಮ ಬಗ್ಗೆಯೂ ಗೌರವ ಇದೆ ಹಾಗೂ ಈ ಮನೆಯ ಎರಡೂ ಕಡೆಯ ಸದಸ್ಯರ ಬಗ್ಗೆಯೂ ನನಗೆ ಗೌರವ ಇದೆ. ಎರಡೂ ಕಡೆಯ ಮಾನ್ಯ ಸದಸ್ಯರುಗಳಿಗೆ ನಾನು ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೇನೆ. ಈಗ ಪಂಚಾಯತ್ ರಾಜ್ಯ ಮಂತ್ರಿಗಳಿಗೆ ಉತ್ತರ ಕೊಡಬೇಕೆಂದು ಹೇಳಿದ್ದೇನೆ. ಈಗ ಮಾನ್ಯ ಪಂಚಾಯತ್ ರಾಜ್ ಮಂತ್ರಿಗಳು ಉತ್ತರವನ್ನು ಕೊಡಲಿ.

ಶ್ರೀ ಬಿ. ಎ. ಉಪ್ಪಿನ. ಅಧ್ಯಕ್ಷರೇ, ನಾನೂ ಕೂಡಾ......

ಅಧ್ಯಕ್ಷರು.—ಈ ಸ್ಥಾನದಲ್ಲಿ ಕುಳಿತಿರುವ ನನಗೆ ಕೆಲವು ಅಸ್ತ್ರಗಳನ್ನು ತಾವು ಕೊಟ್ಟಿದ್ದೀರಿ. ನಾನು ಈ ಸಭೆಯ ಅಧ್ಯಕ್ಷ. ಈ ಸಭೆಯಲ್ಲಿ ಯಾರಾದರೂ ಹದ್ದುಮೀರಿ ನಡೆದರೆ, ಉದ್ಧಟತನ ಮಾಡಿದರೆ ಅವರನ್ನು ಹೊರಗೆ ಕಳುಹಿಸುವ ಅವಕಾಶ ನಮಗೆ ಇದೆ.

ಶ್ರೀ ಬಿ. ಎ. ಉಪ್ಪಿನ.—ನಾನು ಈಗ ಸಭಾತ್ಯಾಗ ಮಾಡುತ್ತೇನೆ.

ಅಧ್ಯಕ್ಷರು.—ಇವರಿಗೆ ತಿಳುವಳಿಕೆ ಬಹಳ ಕಡಿಮೆ ಇದೆ. ಏನು ಮಾಡುವುದು? ಯಾವಗಲ್ ಅವರೇ ತಾವು ತಮ್ಮ ಉತ್ತರವನ್ನು ಪ್ರಾರಂಭ ಮಾಡಿ.

ಶ್ರೀ ಬಿ. ಆರ್. ಯಾವಗಲ್.—ಅಧ್ಯಕ್ಷರೇ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್.........

ಅಧ್ಯಕ್ಷರು.—ರಾಜವರ್ಧನ್ ಅವರೇ, ಅವರನ್ನು ಸ್ವಲ್ಪ ಹೊರಗಡೆ ಕರೆದುಕೊಂಡು ಹೋಗಿ ಹೇಳಿ.

ಶ್ರೀ ಬಿ. ಆರ್. ಯಾವಗಲ್.—೮ ಜನ ಸನ್ಮಾನ್ಯ ಸದಸ್ಯರು ಬೇಡಿಕೆ ಬಗ್ಗೆ ಮಾತನಾಡಿದ್ದಾರೆ. ಪ್ರಥಮದಲ್ಲಿ ಎಲ್ಲರಿಗೂ.........

SRI M. MALLIKARJUNA KHARGE.—I raise a point of order.

SRI U. BHOOPATHY.—Legislature standards have to be maintained.

ಅಧ್ಯಕ್ಷರು.—ಅವರಿಗೆ ಬ್ಲಡ್ ಪ್ರಶರ್ ಇರಬಹುದು. ಸಮಾಧಾನ ಮಾಡಿಕೊಳ್ಳಲಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಹಾಗಾದರೆ ಅವರನ್ನು ದವಾಖಾನೆಗೆ ಕರೆದು ಕೊಂಡು ಹೋಗಲಿ.

(ಗೊಂದಲ)

ಅಧ್ಯಕ್ಷರು.—ಯಾರು ಏನೇ ಹೇಳಲಿ ಸ್ಪೀಕರ್ ಆದವರು ಸಮಾಧಾನದಿಂದ ಇರಬೇಕಾಗುತ್ತದೆ.

(ಈ ಸಮಯದಲ್ಲಿ ಶ್ರೀ ಬಿ. ಎ. ಉಪ್ಪಿನ ಅವರು ಹಾಗೂ ಇನ್ನಿತರ ಕೆಲವು ಸದಸ್ಯರು ಸಭೆಯಿಂದ ಹೊರಗಡೆ ಹೋದರು)

ಶ್ರೀ ರಾಮನಾಥ್ ರೈ.—ಸಭಾಧ್ಯಕ್ಷರಿಗೆ ಅವಮಾನ ಮಾಡಿ ಅವರು ಹೋಗುತ್ತಿದ್ದಾರೆ.

ಶ್ರೀ ಆರ್. ವಿ. ದೇಶಪಾಂಡೆ.—ಇಲ್ಲ, ಅವರು ಚಾ ಕುಡಿಯುವುದಕ್ಕೆ ಹೋಗುತ್ತಿದ್ದಾರೆ.

ಅಧ್ಯಕ್ಷರು.—ಈಗ ಮಾನ್ಯ ಯಾವಗಲ್ ಅವರು ತಮ್ಮ ಉತ್ತರವನ್ನು ಕೊಡಲಿ.

ಶ್ರೀ ಬಿ. ಆರ್ ಯಾವಗಲ್ (ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ರಾಜ್ಯ ಮಂತ್ರಿಗಳು).—ಸಭಾಧ್ಯಕ್ಷರೇ, ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ಯ ಇಲಾಖೆಯ ಬೇಡಿಕೆಯ ಮೇಲೆ ಸುಮಾರು ೮ ಜನ ಶಾಸಕರು ಮಾತನಾಡಿದ್ದಾರೆ. ಅವರೆಲ್ಲರಿಗೂ ನಾನು ಪ್ರಥಮದಲ್ಲಿ ಅಭಿನಂದಿಸುತ್ತೇನೆ. ಈ ಗ್ರಾಮೀಣ ಅಭಿವೃದ್ಧಿ ಇಲಾಖೆ ಒಂದು ವಿಶಿಷ್ಟ ಇಲಾಖೆ. ನಮ್ಮ ಇಲಾಖೆ ರಾಜ್ಯ ಮತ್ತು ದೇಶ ಮಟ್ಟದಲ್ಲಿ ಹೆಚ್ಚು ಕಾಲ ಜನರ ಜೀವನದ ಬಗ್ಗೆ ಮತ್ತು ಅವರ ಅಭಿವೃದ್ಧಿ ಬಗ್ಗೆ, ಅವರ ಏಳಿಗೆಯ ಬಗ್ಗೆ ಚಿಂತನೆ ಮಾಡುವಂತಹ ಮತ್ತು ಅವರ ಅಭಿವೃದ್ಧಿಯ ಎಲ್ಲಾ ಕಾರ್ಯಕ್ರಮಗಳನ್ನೂ ಅನುಷ್ಠಾನ ಗೊಳಿಸುವ ಬಗ್ಗೆ ಎಲ್ಲಾ ಶಕ್ತಿಯನ್ನು ವಿನಿಯೋಗ ಮಾಡತಕ್ಕ ಇಲಾಖೆ ಇದು ಆಗಿದೆ. ಈ ಇಲಾಖೆಯಲ್ಲಿ ಗ್ರಾಮಾಂತರ ಜನತೆಯ ಹಲವು ಹತ್ತು ಕಾರ್ಯಕ್ರಮಗಳನ್ನು ಅಳವಡಿಸಿಕೊಂಡು ಬಂದು ಬೇರೆ ಬೇರೆ ರೀತಿಯ ಬೇರೆ ವರ್ಗದ ಜನರಿಗೆ, ಅವರ ಸರ್ವಾಂಗೀಣ ಅಭಿವೃದ್ಧಿಗೆ ಪ್ರಯತ್ನಪಟ್ಟು ಆ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿರುವ ವಿಷಯ ನಿಮಗೆ ಗೊತ್ತೇ ಇದೆ. ಅಶಿಕ್ಷಿತರು ಮತ್ತು ಹಿಂದುಳಿದ ವರ್ಗದವರು ಹಾಗೂ ದುರ್ಬಲ ವರ್ಗದವರ ಬಗ್ಗೆ ಕೆಲಸ ಮಾಡಬೇಕಾದಂತಹ ಸಂದರ್ಭದಲ್ಲಿ, ಅವರ ಒಂದು ಜೀವನದ ಕ್ಲಿಷ್ಟತೆ ಹಾಗೂ ಅವರ ವಿದ್ಯಾ ಮಟ್ಟವನ್ನು ನೋಡಿಕೊಂಡು ಈ ಬಗ್ಗೆ ಪರಿಣಾಮಕಾರಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸ ಮಾಡಬೇಕಾಗಿರುವ ವಿಶೇಷ ಜವಾಬ್ದಾರಿಯನ್ನು ಹೊತ್ತು ನಡೆಯುತ್ತಿರುವ ಇಲಾಖೆ ಇದು ಆಗಿದೆ ಎನ್ನುವ ವಿಷಯವನ್ನು ನಾನು ತಮ್ಮ ಮುಖಾಂತರ ಸಭೆಯ ಎದುರುಗಡೆ ಇಡುತ್ತಿದ್ದೇನೆ.

ಮಾನ್ಯ ಅಧ್ಯಕ್ಷರೆ, ತಮಗೂ ಗೊತ್ತಿದೆ. ಕಳೆದ ಅನೇಕ ವರ್ಷಗಳಿಂದ ಗ್ರಾಮೀಣ ಅಭಿವೃದ್ಧಿ ಎಷ್ಟು ಪ್ರಮಾಣದಲ್ಲಿ ಆಗಬೇಕಾಗಿತ್ತೋ ಅಥವಾ ಯಾವ ಮಟ್ಟದಲ್ಲಿ ಕಾರ್ಯಕ್ರಮಗಳು ನಡೆಯ ಬೇಕಾಗಿತ್ತೋ, ಯಾವ ಪ್ರಮಾಣದಲ್ಲಿ ಹಳ್ಳಿಗಾಡಿನ ಜನರ ಜೀವನಸೌಕರ್ಯ ಹೆಚ್ಚಬೇಕಾಗಿತ್ತೋ ಅದು, ಆ ಪ್ರಮಾಣದಲ್ಲಿ ಆಗಿಲ್ಲ ಎಂಬುದು ಒಂದು ವರ್ಗದ ಭಾವನೆಯಾದರೆ, ಇತ್ತೀಚೆಗೆ ಆ ಭಾಗಗಳಲ್ಲಿ ಅತ್ಯಂತ ತೀವ್ರಗತಿಯಿಂದ ಕಾರ್ಯಚಟುವಟಿಕೆಗಳು ನಡೆಯುತ್ತಿವೆ ಎಂಬುದು ಇನ್ನೊಂದು ವರ್ಗದ ಭಾವನೆ ಮತ್ತು ಸರ್ಕಾರದ ಅಭಿಪ್ರಾಯ ಕೂಡ. ಇದು ತಮಗೂ ಗೊತ್ತಿದೆ. ಕಳೆದ ೩ ವರ್ಷಗಳಲ್ಲಿ ಈ ಇಲಾಖೆಯಲ್ಲಿ ಅತಿ ದೊಡ್ಡ ಪ್ರಮಾಣದಲ್ಲಿ ಮತ್ತು ಪ್ರಾಮಾಣಿಕವಾಗಿ ಅಭಿವೃದ್ಧಿ ಕಾರ್ಯಗಳು ನಡೆದಿವೆ. ಹಲವಾರು ಭಾಗಗಳಲ್ಲಿ ತನ್ನದೇ ಆದಂಥ ಗುರಿಯನ್ನು ಈ ಇಲಾಖೆ ಏನು ಇಟ್ಟುಕೊಂಡಿತ್ತು ಅದನ್ನು ಇಂದು ಮುಟ್ಟಿದೆ ಎಂದು ಹೇಳಿದರೆ ಅದು ತಪ್ಪಾಗಲಿಕ್ಕಿಲ್ಲ. ಉದಾಹರಣೆಗೆ ಹೇಳುವುದಾದರೆ ಕುಡಿಯುವ ನೀರನ್ನೊದಗಿಸುವ ಕಾರ್ಯಕ್ರಮದಲ್ಲಿ ನಮ್ಮ ಕರ್ನಾಟಕ ರಾಜ್ಯ ಇಡೀ ರಾಷ್ಟ್ರದಲ್ಲಿ ಕಳೆದ ೩ ವರ್ಷಗಳಿಂದಲೂ ಪ್ರಥಮ ಸ್ಥಾನವನ್ನು ಪಡೆದಿದೆ. ಇದರ ಜೊತೆಗೆ ಬೇರೆ ಬೇರೆ ಕಾರ್ಯಕ್ರಮಗಳಾದ ಎನ್.ಆರ್.ಇ.ಪಿ. ಇರಬಹುದು, ಐ.ಆರ್.ಡಿ.ಪಿ. ಇರಬಹುದು, ಅಥವಾ ಬೇರೆ ಕಾರ್ಯಕ್ರಮಗಳಿರಬಹುದು ಯಾವುದೇ ವಿಷಯದಲ್ಲೂ ನಮ್ಮ ರಾಜ್ಯ ಬೇರೆ ರಾಜ್ಯಗಳಿಗೆ ಹಿಂದೆ ಬೀಳದೆ ಉತ್ತಮ ಕೆಲಸವನ್ನು ಸಾಧಿಸುತ್ತಾ ಬಂದಿದೆ, ಎಲ್ಲ ವಿಭಾಗಗಳಲ್ಲೂ ಕ್ರಾಂತಿಕಾರಕ ಅಭಿವೃದ್ಧಿ ಕಾರ್ಯ ಚಟುವಟಿಕೆಗಳು ಪ್ರಗತಿಪಥದಲ್ಲಿ ನಡೆಯುವ ಸಲುವಾಗಿ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯನ್ನು ಜಾರಿಗೆತರಬೇಕೆಂದು ಏನು ಯೋಚನೆ ಮಾಡುತ್ತಿದ್ದೇವೆ ಇದೂ ಕೂಡ ರಾಷ್ಟ್ರದಲ್ಲಿ ತನ್ನದೇ ಆದಂಥ ರೀತಿಯನ್ನು ಅನುಸರಿಸುತ್ತಿದೆ. ಈ ದಿಸೆಯಲ್ಲಿ ನಮ್ಮ ಇಲಾಖೆ ಇಡೀ ರಾಷ್ಟ್ರದಲ್ಲೇ ಒಂದು ದೊಡ್ಡ ಹಿರಿಮೆಯನ್ನು ಹೊಂದಿದೆ ಎಂದು ಹೇಳಬಯಸುತ್ತೇನೆ. ಆದರೆ ಇಷ್ಟೆಲ್ಲಾ ಮಾಡಿದರೂ ಕೂಡ ಇದು ಏನೇನೂ ಸಾಲದೆಂದು ನಮಗೂ ಗೊತ್ತಿದೆ. ಈ ಇಲಾಖೆ ಇನ್ನೂ ದೊಡ್ಡ ಪ್ರಮಾಣದಲ್ಲಿ ಬೆಳೆಯ ಬೇಕೆಂಬ ವಿಚಾರದಲ್ಲಿ ಚಿಂತನೆ ನಡೆಯುತ್ತಿದೆ. ಮಾಡತಕ್ಕ ಕಾರ್ಯಕ್ರಮಗಳನ್ನು ಕೂಡ ಗುಣಮಟ್ಟದಲ್ಲಿ ಉತ್ತಮವಾಗಿರುವಂತೆ ಮಾಡಬೇಕಾಗಿದೆ. ಗ್ರಾಮೀಣ ಜನರ ಸಂಘಟನೆ ಮಾಡುವುದು, ಆ ಜನರನ್ನು ಕಲ್ಯಾಣ ಮಾರ್ಗದಲ್ಲಿ ಕೊಂಡೊಯ್ಯುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ನಮ್ಮ ಕರ್ತವ್ಯವನ್ನು ನಿರ್ವಹಣೆ ಮಾಡುವಾಗ ಕೇಂದ್ರಸರ್ಕಾರದ ನೀತಿಯನ್ನು ಅನುಸರಿಸಿ ಕೆಲಸಮಾಡಬೇಕಾದ್ದರಿಂದ ನಮಗೂ ಒಂದು ಇತಿಮಿತಿಯುಂಟು. ಆದರೂ ಕೂಡ ಆ ಇತಿಮಿತಿಯಲ್ಲೇ ಇದ್ದುಕೊಂಡು ನಮ್ಮ ಗ್ರಾಮೀಣ ಅಭಿವೃದ್ಧಿಕಾರ್ಯ ಸರ್ವಾಂಗೀಣವಾಗಿ ಬೆಳೆಯುತ್ತಿದೆ ಎನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ. ಈ ಮಾತನ್ನು ನಾನು ಉತ್ಪ್ರೇಕ್ಷೆ ಮಾಡಿ ಹೇಳುತ್ತಿಲ್ಲ. ಈ ಇಲಾಖೆಯ ಬೇಡಿಕೆಯ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ ಅನೇಕ ಜನ ಮಾನ್ಯ ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡಿದ್ದಾರೆ. ಕೆಲವರು ಮೆಚ್ಚುಗೆಯನ್ನು ಸೂಚಿಸಿದ್ದರೆ, ಕೆಲವರು ಟೀಕೆಯನ್ನು ಮಾಡಿದ್ದಾರೆ; ಮತ್ತೆ ಕೆಲವರು ಉತ್ತಮ ಸಲಹೆಗಳನ್ನು ನೀಡಿದ್ದಾರೆ. ಅವರ ಟೀಕೆ ಟಿಪ್ಪಣಿಗಳು, ಸಲಹಾ ಸೂಚನೆಗಳು ಯಾವರೀತಿ ಇದ್ದವು ಎಂಬುದನ್ನು ಹೇಳಬಯಸುತ್ತೇನೆ.

ಪ್ರಥಮದಲ್ಲಿ ಮಾನ್ಯ ಸದಸ್ಯರಾದ ಕೆ. ಹೆಚ್. ಪಾಟೀಲ್‌ರವರು ಸಮಗ್ರ ಗ್ರಾಮೀಣಅಭಿವೃದ್ಧಿಗೆ ಹಳ್ಳಿಯಲ್ಲಿ ಯಾವರೀತಿ ವ್ಯವಸ್ಥೆಯಾಗಬೇಕು, ಅದರಲ್ಲಿ ಯಾವ ಯಾವ ಘಟ್ಟಕ್ಕೆ ಯಾರಾರನ್ನು ನೇಮಿಸಬೇಕೆಂಬ ಬಗ್ಗೆ ಅವರು ಸೂಚನೆ ಕೊಟ್ಟರು. ಅವರು ಒಂದು ಲೇಖನವನ್ನು ಉದಾಹರಣೆಯಾಗಿ ತೆಗೆದುಕೊಂಡು ಹೇಳಿದರು. ಮಾನ್ಯ ಸದಸ್ಯರು ಹೇಳಿದ ಈ ಸೂಚನೆಯನ್ನು ನಾವು ಈಗಾಗಲೇ ಕಾರ್ಯಗತ ಮಾಡಿದ್ದೇವೆ. ಖಾಸಗೀ ವ್ಯಕ್ತಿಗಳನ್ನು ಸಮಿತಿಗಳಲ್ಲಿ ಹಾಕಿ ಸಮಗ್ರ ಗ್ರಾಮೀಣ ಅಭಿವೃದ್ಧಿಯಾಗುವಂತೆ ನಾವು ಮಾಡಿದ್ದೇವೆ. ಯಾವುದೇ ಯೋಜನೆಗೆ ಸಂಬಂಧಪಟ್ಟಂತೆ ಆಗಲಿ ಖಾಸಗೀ ವ್ಯಕ್ತಿಗಳು ಆ ಸಮಿತಿಯವರ ಜೊತೆಯಲ್ಲಿ ಹೊಂದಾಣಿಕೆಯಿಂದ ಕೆಲಸಮಾಡಿಕೊಂಡು ಹೋಗುತ್ತಿದ್ದಾರೆಂಬ ಮಾತನ್ನು ಮಾನ್ಯ ಸದಸ್ಯರಾದ ಪಾಟೀಲ್‌ರವರಿಗೆ ತಿಳಿಸುತ್ತಿದ್ದೇನೆ. ಗ್ರಾಮ ಮಟ್ಟದ ವ್ಯವಸ್ಥೆಯಲ್ಲಿ, ಜಿಲ್ಲಾ ಮಟ್ಟದ ವ್ಯವಸ್ಥೆಯಲ್ಲಿ ಅಥವಾ ತಾಲ್ಲೂಕು ಮಟ್ಟದ ವ್ಯವಸ್ಥೆಯಲ್ಲಿ ಶಾಸನಸಭಾ ಸದಸ್ಯರನ್ನು ಒಳಗೊಂಡಂತೆ ಆ ಬ್ಲಾಕ್‌ನಲ್ಲಿರತಕ್ಕ ಎಲೆಕ್ಟೆಡ್ ಬಾಡಿಯ ಜೊತೆ ಮಾನಿಟರ್ ಕೆಲಸಮಾಡುತ್ತಾರೆಂದು ತಿಳಿಸಬಯಸುತ್ತೇನೆ.

ಇನ್ನು ಮಾನ್ಯ ಸದಸ್ಯರಾದ ರಾಯರೆಡ್ಡಿಯವರು ಮಾತನಾಡುತ್ತಾ, ಮಾನ್ಯ ನಜೀರ್‌ಸಾಬ್‌ರವರು ಈ ಇಲಾಖೆಯ ಬಗ್ಗೆ ಹೆಚ್ಚಿನ ಆಸ್ಥೆಯನ್ನು ವಹಿಸುತ್ತಿಲ್ಲ ಎಂದು ಸಾಮಾನ್ಯ ಟೀಕೆಯನ್ನು ಮಾಡಿದರು.

ಆದರೆ ಅದರ ಉದ್ದೇಶ ಅದಲ್ಲ. ಅವರು ಯಾವ ಮಟ್ಟದಲ್ಲಿ ನಿರೀಕ್ಷಣೆಯನ್ನು ಮಾಡಿದ್ದಾರೋ ಆ ಮಟ್ಟದಲ್ಲಿ ಇಲ್ಲದಿರಬಹುದು. ಆದರೆ ಕಳೆದ ೩ ವರ್ಷದಲ್ಲಿ ಆಗಿರತಕ್ಕ ಅಭಿವೃದ್ಧಿಯನ್ನು ಅಥವಾ ಬದಲಾವಣೆಯನ್ನು ನೋಡಿದರೆ ಮಾನ್ಯ ಸದಸ್ಯರ ಭಾವನೆ ಏನಿದೆ ಅದು ಸರಿಯಲ್ಲ ಎನ್ನುವ ಮಾತನ್ನು ಹೇಳಬಯಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ೩ ವರ್ಷಗಳ ಹಿಂದೆ ಹಳ್ಳಿಗಾಡಿನಲ್ಲಿ ಏನು ಪರಿಸ್ಥಿತಿ ಇತ್ತು, ಇತ್ತೀಚೆಗೆ ಈ ಇಬ್ಬರು ಮಹನೀಯರು ಹಳ್ಳಿಗಾಡಿನ ಮಂತ್ರಿಗಳಾದಮೇಲೆ ಏನು ಪರಿಸ್ಥಿತಿ ಬದಲಾವಣೆ ಉಂಟಾಗಿದೆ, ಎಷ್ಟು ಜನ ಫಲಾನುಭವಿಗಳಾಗಿದ್ದಾರೆ ಎನ್ನುವುದರ ಬಗ್ಗೆ ಅವರು ವಿವರವನ್ನು ಕೊಡಬೇಕು.

ಶ್ರೀ ಬಿ. ಆರ್. ಯಾವಗಲ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದ್ದರಿಂದ ನಾನು ಹೇಳಬೇಕಾಗಿದೆ. ಅವರು ಯಾವ ಪ್ರಶ್ನೆ ಕೇಳಿದರೂ ಉತ್ತರವನ್ನು ಹೇಳುತ್ತೇನೆ, ಮತ್ತು ಯಾವ ಗ್ರಾಮದ ಬಗ್ಗೆ ಕೇಳಿದರೂ ಹೇಳುತ್ತೇನೆ. ಇಲ್ಲಿ ಪ್ರಮುಖವಾದ ವಿಷಯ ಎಂದರೆ, ಈ ಇಲಾಖೆಗೆ ಬೇಕಾದಂಥ ಅಧಿಕಾರಿಗಳಿಲ್ಲ (ಬಿ.ಡಿ.ಒ.) ಎಂದು ಹೇಳಿದ್ದಾರೆ. ಬೇರೆ ಬೇರೆ ಇಲಾಖೆಯಿಂದ ಎರವಲು ಪಡೆದ ಅಧಿಕಾರಿಗಳನ್ನು, ಮತ್ತು ನಿವೃತ್ತಿ ಹತ್ತಿರ ಬರುತ್ತಿರುವ ಅಧಿಕಾರಿಗಳನ್ನು ಬಿ.ಡಿ.ಒ. ಸ್ಥಾನಕ್ಕೆ ನೇರವಾಗಿ ನೇಮಕಾತಿ ಮಾಡಿದರೆ ಆಡಳಿತ ನಡೆಸುವುದು ಕಷ್ಟವಾಗುತ್ತದೆಂದು ಹೇಳಿದರು. ಆ ಮಾತನ್ನು ನಿಜ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ೧೯೭೨ನೇ ಇಸವಿಯಿಂದಲೂ ಬಿ.ಡಿ.ಒ.ಗಳ ನೇಮಕಾತಿ ನಿಂತುಹೋಗಿದೆ. ಅಲ್ಲಿಂದ ಇಲ್ಲಿಯವರೆಗೆ ನೇರವಾದ ನೇಮಕಾತಿ ಇದುವರೆಗೂ ಆಗಿಲ್ಲ. ಬೇರೆ ಬೇರೆ ಇಲಾಖೆಗಳ ಅಧಿಕಾರಿಗಳನ್ನು ಎರವಲು ತಂದು ಅವರಿಗೆ ತರಬೇತಿಯನ್ನು ಕೊಟ್ಟು ಗ್ರಾಮೀಣ ಅಭಿವೃದ್ಧಿಯ ವಿಚಾರದಲ್ಲಿ ಅವರಿಗೆ ನಂಬಿಕೆ, ಆಸಕ್ತಿ ಇದೆಯೇ ಇಲ್ಲವೇ ಎಂಬುದನ್ನು ತಿಳಿದುಕೊಳ್ಳದೆ ಕೆಲಸಮಾಡುವುದಕ್ಕೆ ಅವರನ್ನು ನೇಮಿಸಿದ್ದರಿಂದ ಈರೀತಿ ಕೆಲವು ಅಭಿವೃದ್ಧಿ ಕಾರ್ಯಗಳಿಗೆ ಧಕ್ಕೆ ಬಂದಿರಬಹುದು. ಇನ್ನು ಮುಂದೆ ನಾವು ಈ ಪರಿಸ್ಥಿತಿಯನ್ನು ಬದಲಾಯಿಸಬೇಕಾದರೆ ೫೦ ಪರ್ಸೆಂಟ್ ನೇರ ನೇಮಕಾತಿಯನ್ನು ಮಾಡಿ ಉಳಿದ ೫೦ ಪರ್ಸೆಂಟ್‌ನ್ನು ಬೇರೆ ಬೇರೆ ಇಲಾಖೆಗಳಿಂದ ಚೆನ್ನಾಗಿ, ದಕ್ಷತೆಯಿಂದ ಕೆಲಸಮಾಡತಕ್ಕವರ ಯೋಗ್ಯತೆಯನ್ನು ನೋಡಿಕೊಂಡು ಅವರಿಗೇ ತರಬೇತಿಯನ್ನು ಕೊಟ್ಟು ನೇಮಕ ಮಾಡಿಕೊಳ್ಳುವ ವ್ಯವಸ್ಥೆಯನ್ನು ಮಾಡಿದ್ದೇವೆ. ಈ ದಿಸೆಯಲ್ಲಿ ನಾವು ಈಗಾಗಲೇ ಕಾರ್ಯೋನ್ಮುಖರಾಗಿದ್ದೇವೆ ಎಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಮಾನ್ಯ ಅಧ್ಯಕ್ಷರೇ ಇದಲ್ಲದೆ ಹಲವಾರು ವರ್ಷಗಳಿಂದ ಮಾನ್ಯ ಸದಸ್ಯರು ಹೇಳಿದಹಾಗೆ ಅವರಿಗೆ ಪ್ರಮೋಷನ್ ಸಿಕ್ಕಿಲ್ಲವೆಂದು ಹೇಳಿದ್ದಾರೆ. ಅವರಿಗೆ ಪ್ರಮೋಷನ್ ಕೊಡುವಂಥ ವ್ಯವಸ್ಥೆಯನ್ನೂ ಕೂಡ ಮಾಡಬೇಕೆಂದು ಹೇಳಿದ್ದಾರೆ. ತಮಗೆ ಗೊತ್ತಿದೆ. ಅವರು ಹಲವಾರು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಪ್ರಮೋಷನ್ ಕೊಟ್ಟು ಆಯಾ ಸ್ಥಳಗಳಲ್ಲಿಯೇ ಅವರನ್ನು ಹಾಕಿ ಅವರುಗಳಿಂದ ಗುಣಾತ್ಮಕವಾಗಿ ಕೆಲಸವನ್ನು ತೆಗೆದುಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ, ಮತ್ತು ಇದರಿಂದ ಗ್ರಾಮ ಅಭಿವೃದ್ಧಿ ಕೆಲಸವೂ ಕೂಡ ಸರಾಗವಾಗಿ ಆಗಲಿಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ.

ಮತ್ತೆ ಮಾನ್ಯ ಸದಸ್ಯರು ಈ ನಿರ್ದೇಶನಾಲಯದ ಬಗ್ಗೆ ಹೇಳಿದ್ದಾರೆ. ತಮಗೆ ಗೊತ್ತಿದೆ, ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯತ್‌ಗಳನ್ನು ಅಸ್ತಿತ್ವಕ್ಕೆ ತರಲು ಎಲ್ಲ ರೀತಿಯ ಪೂರ್ವಭಾವಿ ಕೆಲಸಗಳನ್ನು ಈಗಾಗಲೇ ತೆಗೆದುಕೊಂಡು ಮುಗಿಸಿದ್ದೇವೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಈಗಾಗಲೇ ಹೇಳಿದ್ದಾರೆ. ಮುಖ್ಯವಾಗಿ ಚುನಾವಣೆಗಳು ನಡೆಯಬೇಕಾಗಿದೆ. ಆದ್ದರಿಂದ ಈ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದಾಗ, ಈ ರೀತಿಯ ಎಲ್ಲಾ ಅಭಿವೃದ್ಧಿ ಕೆಲಸಗಳನ್ನು ವ್ಯವಸ್ಥಿತವಾಗಿ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಅದನ್ನು ಪರಿಶೀಲನೆ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ,

ಇದೇ ಸಂದರ್ಭದಲ್ಲಿ ಹಲವಾರು ಮಾನ್ಯ ಸದಸ್ಯರು ಬಹಳ ಮುಖ್ಯವಾದ ಒಂದು ಸೂಚನೆಯನ್ನು ಕೊಟ್ಟಿದ್ದಾರೆ. ಇದು ಕೆಲಮಟ್ಟಿಗೆ ನಿಜವಾಗಿಯೂ ಇರುತ್ತದೆ. ಗ್ರಾಮ ಅಭಿವೃದ್ಧಿ ಇಲಾಖೆಯಲ್ಲಿ

ಇದು ವಿಶೇಷವಾಗಿ ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ಏನು ಇರುತ್ತವೆ ಅಲ್ಲಿ ಬೇಕಾದಂಥ ತಾಂತ್ರಿಕ ಸಿಬ್ಬಂದಿ ಅಂದರೆ ಇಂಜಿನೀಯರ್ಸ್ ಸಿಬ್ಬಂದಿ ಸಾಕಷ್ಟು ಮಂದಿ ಇಲ್ಲ. ಹಿಂದೆ ಯಾವುದೋ ಕಾಲದಲ್ಲಿ ಮಾಡಿದಂಥ ಜೂನಿಯರ್ ಇಂಜಿನಿಯರ್ಸ್ ಮತ್ತು ಅಸಿಸ್ಟೆಂಟ್ ಇಂಜಿನಿಯರ್ಸ್ ಇದ್ದಾರೆ. ನಮಗೇನಾದರೂ ಬೇಕಾದರೆ ಪಿಡಬ್ಲ್ಯುಡಿ. ಇಲಾಖೆಯಿಂದ ಎರವಲು ಪಡೆಯತಕ್ಕಂಥ ಪದ್ಧತಿ ಇತ್ತು. ಅವರಿಗೆ ಇರಬೇಕಾದಂಥ ತಾಂತ್ರಿಕ ನಿಯಂತ್ರಣ ಇಲ್ಲವೆಂದು ಹೇಳಿರುತ್ತಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮತ್ತು ಈ ಸಿಬ್ಬಂದಿ ವರ್ಗವನ್ನು ಹೆಚ್ಚು ಮಾಡಬೇಕೆಂದು ಕೂಡ ಹೇಳಿರುತ್ತಾರೆ. ಇದರಿಂದ ಗುಣಮಟ್ಟದ ಕೆಲಸವನ್ನು ನಿಯಂತ್ರಣ ಮಾಡಬಹುದು ಎನ್ನುವ ಭಾವನೆಯನ್ನು ಸೂಚಿಸಿದ್ದಾರೆ. ಈ ಸಂದರ್ಭದಲ್ಲಿ ಅವರು ಕೊಟ್ಟಿರತಕ್ಕಂಥ ಸೂಚನೆಯನ್ನು ಕೂಡ ನಾನು ಒಪ್ಪಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ಇಂಜಿನೀಯರ್ಸ್ ಸರ್ವೀಸ್ ಆಗಬೇಕಾಗಿರುತ್ತದೆ. ಆದ್ದರಿಂದ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳಿಗೆ ಅನೇಕ ವಿಧವಾದ ಬೇರೆ ಬೇರೆ ಇಲಾಖೆಗಳಿಂದ ತಾಂತ್ರಿಕ ಕೆಲಸಗಳು ಬರುತ್ತವೆ. ಅವುಗಳನ್ನು ಅನುಷ್ಠಾನಕ್ಕೆ ತರಲು ಈಗಿರುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಸಿಬ್ಬಂದಿ ಬೇಕಾಗುತ್ತದೆ, ಆಗ ರೂರಲ್ ಇಂಜಿನೀಯರ್ಸ್ ಸರ್ವೀಸ್ ಮಾಡುವಂಥ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬೇಕಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ.

ಮತ್ತೊಂದು ಸೂಚನೆಯನ್ನು ಮಾನ್ಯ ಸದಸ್ಯರು ಮಾಡಿರುತ್ತಾರೆ. ಹಲವಾರು ವಿಷಯಗಳ ಬಗ್ಗೆ ಮಾನ್ಯ ಸದಸ್ಯರು ಹೇಳಿರುತ್ತಾರೆ. ಪಂಪುಸೆಟ್ಟುಗಳ ಬಗ್ಗೆ, ಮತ್ತು ಶಾಲಾ ಕಟ್ಟಡಗಳ ಬಗ್ಗೆ ಹೇಳಿರುತ್ತಾರೆ. ಶಾಲಾ ಕಟ್ಟಡಗಳನ್ನು ಹೆಚ್ಚು ಹೆಚ್ಚು ನಿರ್ಮಾಣ ಮಾಡಬೇಕೆಂದು ಸೂಚನೆ ಕೊಟ್ಟಿರುತ್ತಾರೆ, ಶಾಲಾ ಕಟ್ಟಡಗಳಿಗೆ ಕೊಡುವಂತಹ ಹಣವನ್ನೂ ಜಾಸ್ತಿ ಕೊಡಬೇಕೆಂದು ಹೇಳಿರುತ್ತಾರೆ. ಮಾನ್ಯ ಅಧ್ಯಕ್ಷರೇ, ನಾವು ಈಗಾಗಲೇ ಸುಮಾರು ೨೦ ಸಾವಿರ ರೂಪಾಯಿಗಳನ್ನು ಒಂದು ಶಾಲಾ ಕೊಠಡಿಗೆ ಕೊಡುತ್ತಿದ್ದೇವೆ. ಅದರ ಉದ್ದೇಶ ಏನೆಂದರೆ ಗ್ರಾಮಾಂತರ ಜನರು ಕೂಡ ಈ ಸಹಾಯದ ಬಾಬುಗಳನ್ನು ಕಂಡುಕೊಂಡು ಶಾಲಾ ಕಟ್ಟಡಗಳಿಗೆ ಹಣವನ್ನು ಕೂಡಿಸತಕ್ಕಂಥ ವ್ಯವಸ್ಥೆಯನ್ನು ಮಾಡಿ ಸಾಮೂಹಿಕವಾಗಿ ಗ್ರಾಮೀಣ ಜನರು ಇದರಲ್ಲಿ ಭಾಗವಹಿಸಲು ಮುಂದೆ ಬರಲಿ ಎಂದು. ಆದ್ದರಿಂದಲೇ ಎನ್‌ಆರ್‌ಇಪಿ ಯಿಂದ ೬ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದುದರ ಬದಲು ಈಗ ೨೦ ಸಾವಿರ ರೂಪಾಯಿಗಳನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ಈಗಾಗಲೇ ಇಂಥ ಒಂದು ಕಾರ್ಯಕ್ರಮವನ್ನು ಕೈಗೊಂಡು ಹತ್ತು ಸಾವಿರಕ್ಕೂ ಹೆಚ್ಚಿನ ಪ್ರಮಾಣದಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟಿದ್ದೇವೆ. ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಹಳ್ಳಿಗಳಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟತಕ್ಕಂಥ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ನಿರ್ದೇಶನವನ್ನೂ ಕೂಡ ಕೊಟ್ಟಿದ್ದೇವೆ.

ಮತ್ತೆ ಮುಖ್ಯವಾಗಿ ಪಂಪ್‌ಸೆಟ್‌ಗಳ ವಿಷಯವಾಗಿ ಬಹಳವಾಗಿ ಹೇಳಿದ್ದಾರೆ. ನಿರ್ದಿಷ್ಟವಾದ ಆಪಾದನೆ ಮಾಡಿ ತಪ್ಪು ಯಾವುದಾದರೂ ನಡೆದಿರತಕ್ಕಂಥದ್ದು ಇದ್ದರೆ ಅದನ್ನು ನಮ್ಮ ಗಮನಕ್ಕೆ ತಂದುಕೊಟ್ಟರೆ ಅದನ್ನು ವ್ಯವಸ್ಥೆಗೊಳಿಸತಕ್ಕಂಥ ಕಾರ್ಯಕ್ರಮ ಕೈಗೊಳ್ಳುತ್ತೇವೆ. ಇದರಲ್ಲಿ ಎಸ್‌ಪಿಡಿ ಇಂದ ಏನು ಕೊಳ್ಳುತ್ತಿದ್ದೀವೋ ಅವರು ಅದರಲ್ಲಿ ಗುಣಮಟ್ಟವನ್ನು ಕಾಯ್ದುಕೊಂಡು ಆಯ್ಕೆ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡಿರುತ್ತಾರೆ. ಅಂಥ ಒಂದು ತಾಂತ್ರಿಕ ವ್ಯವಸ್ಥೆ ಸರಿ ಇಲ್ಲದಿದ್ದರೆ ಪಂಪ್‌ಸೆಟ್‌ಗಳನ್ನು ಬದಲಾವಣೆ ಮಾಡುವಂಥ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೂ ಸಾಧ್ಯವಿದೆ ಎಂದು ಹೇಳಿದ್ದಾರೆ. ಇದು ಒಂದು ಗಂಭೀರವಾದ ಸಮಸ್ಯೆಯಾಗಿದೆ. ರಾಜ್ಯದಲ್ಲಿ ಅನೇಕ ಹಳ್ಳಿಗಳಲ್ಲಿ ಅಂದರೆ ಎರಡು ಸಾವಿರಕ್ಕಿಂತಲೂ ಹೆಚ್ಚು ಹಳ್ಳಿಗಳನ್ನು ಒಳಗೊಂಡಂತಹ ಒಂದು ಸಮಸ್ಯೆಯನ್ನು ಪ್ರಸ್ತಾಪ ಮಾಡಿದ್ದಾರೆ. ಇದನ್ನು ತಡೆಗಟ್ಟುವುದಕ್ಕೆ ಎಲ್ಲ ಪ್ರಯತ್ನಗಳನ್ನು ಮಾಡುತ್ತೇನೆಂದು ಹೇಳುತ್ತೇನೆ. ಮತ್ತೆ ಕಪ್ಪು ಸವಳು ನೀರಿನ ಸಮಸ್ಯೆಯ ಬಗ್ಗೆ ಹೇಳಿದ್ದಾರೆ. ಈಗಾಗಲೇ ಎರಡು ವರ್ಷಗಳ ಸನ್ಮಾನ್ಯ ಸಚಿವರು ಈ ಬಗ್ಗೆ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಈ ಬಗ್ಗೆ ಅಮೂಲಾಗ್ರವಾದ ಒಂದು ಯೋಜನೆಯನ್ನು ತಯಾರಿಸಿ ಇದಕ್ಕೆ ಒಂದು ಬೈಲೇಟರ್ ಅಸಿಸ್ಟೆನ್ಸ್ ಸಹ ಕೊಡಬೇಕೆಂದು, ಒಂದು ಯೋಜನೆಯನ್ನು ಕಳುಹಿಸಿಕೊಟ್ಟಿದ್ದೇವೆ. ಇದಕ್ಕಾಗಿ ದೊಡ್ಡ ಪ್ರಮಾಣದ ಹಣವನ್ನು ಸಹಾಯವಾಗಿ ಕೊಡಬೇಕೆಂದು ಕೇಂದ್ರ ಸರ್ಕಾರವನ್ನು ಕೇಳಿದ್ದೇವೆ. ಅದು ಬಂದರೆ ಪ್ರತಿ ಗ್ರಾಮಕ್ಕೆ ಇದರಿಂದ ಸಹಾಯವನ್ನು ಮಾಡುವುದಕ್ಕಾಗುತ್ತದೆಂದು ಹೇಳುತ್ತೇನೆ. ಇದರ ಜೊತೆಗೆ ನಮ್ಮ ರಾಜ್ಯದಲ್ಲಿ ಗ್ರಾಮ ನೀರು ಪೂರೈಕೆ ಯೋಜನೆಗಾಗಿ ಬೇರೆ ಬೇರೆ ರೀತಿಯಾದ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ. ಪೈಪ್‌ಗಳನ್ನು ಹಾಕಿ ನೀರನ್ನು ಹಾಯಿಸಿ ನೀರು ಪೂರೈಕೆ ಕ್ರಮಗಳನ್ನು ಕೈಗೊಂಡಿರುವುದಲ್ಲದೆ

ಬೋರ್‌ವೆಲ್‌ಗಳನ್ನು ತೆಗೆಸಿ ನೀರನ್ನು ಕೊಡತಕ್ಕಂಥ ಕಾರ್ಯಕ್ರಮವನ್ನು ಸಹ ಕೈಗೊಂಡಿದ್ದೇವೆ. ಇನ್ನೂ ಹೆಚ್ಚು ಹೆಚ್ಚು ಈ ರೀತಿಯಾದಂತಹ ಯೋಜನೆಗಳನ್ನು ತೆಗೆದುಕೊಳ್ಳಬೇಕೆಂಬ ಯೋಜನೆ ಯನ್ನೂ ಕೂಡ ಮಾಡಿದ್ದೇವೆ. ಇದೆಲ್ಲ ಯಶಸ್ವಿಯಾದಲ್ಲಿ ಎಲ್ಲ ಕಡೆ ಈ ನೀರನ್ನು ಕುಡಿಯುವ ನೀರಾಗಿ ಪರಿವರ್ತನೆ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಪ್ರಾಯೋಗಿಕವಾಗಿ ಈಗಾಗಲೇ ಎರಡು ಘಟಕ ಗಳನ್ನು ಈ ದಿಶೆಯಲ್ಲಿ ಟೆಸ್ಟ್ ಮಾಡಿ ಕೆಲಸ ಪ್ರಾರಂಭಿಸಲು ಪ್ರಯತ್ನ ಮಾಡುತ್ತಿದ್ದೇವೆ. ಇದನ್ನು ಟೆಸ್ಟ್ ಮಾಡಿ ಇದು ಸರಿಯಾಗಿ ಕೆಲಸ ಮಾಡಿದರೆ ಇದನ್ನು ಪರಿವರ್ತನೆ ಮಾಡಿ ಒಳ್ಳೆಯ ನೀರು ಕೊಡ ತಕ್ಕಂಥ ವ್ಯವಸ್ಥೆಯನ್ನು ಮಾಡಬಹುದು. ನಂತರ ವ್ಯಾಪಕವಾಗಿ ಇವುಗಳನ್ನು ಹೆಚ್ಚಿಸತಕ್ಕಂಥ ಕೆಲಸ ಮಾಡಬೇಕೆಂಬುದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಮತ್ತೆ ಇನ್ನು ಎರಡು ಮೂರು ಸಮಸ್ಯೆಗಳ ಬಗ್ಗೆ ಹೇಳಿದ್ದಾರೆ. ಜಿಯಾಲಜಿಸ್ಟ್ ಕೊರತೆಯ ಬಗ್ಗೆ ಹೇಳಿದ್ದಾರೆ. ಈ ಕೊರತೆ ಇರತಕ್ಕಂಥಾದ್ದು ನಿಜವಿರುತ್ತದೆ ಈಗಾಗಲೇ ಪ್ರತಿಯೊಂದು ಸಬ್‌ಡಿವಿಜನ್‌ಗೂ ಒಬ್ಬ ಜಿಯಾಲಜಿಸ್ಟ್‌ನ್ನು ಗ್ರಾಮ ಅಭಿವೃದ್ಧಿ ಎಲ್ಲ ಸಂಸ್ಥೆಗಳಿಗೆ ನೇಮಕ ಮಾಡಿದ್ದೇವೆ. ಅದು ನೂರು ಬೋರ್‌ವೆಲ್‌ಗಳನ್ನು ಮಾಡುವುದಕ್ಕೆ ಇರಬಹುದು ಅಥವಾ ಇತರ ಕೆಲಸಗಳಿಗೆ ಇರಬಹುದು. ಇವೆಲ್ಲಾ ವ್ಯವಸ್ಥಿತವಾಗಿ ಕೆಲಸ ಮಾಡಲು ಅವರನ್ನು ನೇಮಕಾತಿ ಮಾಡಬೇಕೆಂದು ಈಗಾಗಲೇ ನಿರ್ದೇಶನವನ್ನು ಕೊಟ್ಟಿದೇವೆ ಇದು ಈಗಾಗಲೇ ಕಾರ್ಯಗತವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಅದೇ ರೀತಿ ರೈತರಿಗೆ ಉಪಯುಕ್ತವಾಗುವಂಥ ಒಂದು ಮುಖ್ಯವಾದ ಸೂಚನೆಯನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ಯಾವ ರೀತಿಯಲ್ಲಿ ಇಂಡಸ್ಟ್ರಿಯಲ್ ಶೆಡ್ಸ್‌ಗಳನ್ನು ಕಟ್ಟುತ್ತಿದ್ದಾರೆ. ಅದೇ ರೀತಿ ರೈತರಿಗೆ ಈ ಕಣಗಳು ಬೇಕಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ರೈತರು ರಸ್ತೆಗಳ ಮೇಲೆಯ ಅಥವಾ ಯಾವುದೇ ಊರಿನಲ್ಲೋ ಅಲ್ಲಿಯ ಸಚ್ಛತೆಯನ್ನು ಕೆಡಿಸಿ ಕಣಗಳನ್ನು ಮಾಡತಕ್ಕಂಥ ವ್ಯವಸ್ಥೆಯ ಬಗ್ಗೆ ಹೇಳಿದ್ದಾರೆ. ಇದನ್ನು ತಪ್ಪಿಸಲಿಕ್ಕೆ ಎಲ್ಲರಿಗೂ ಅನುಕೂಲವಾಗುವಂಥ ಒಂದು ಸಾಮೂಹಿಕ ಕಣಗಳನ್ನು ಮಾಡಬೇಕೆಂದು ಹೇಳಿದ್ದಾರೆ. ಇದು ಒಂದು ಒಳ್ಳೆಯ ಸಲಹೆ ಯಾಗಿರುತ್ತದೆ. ಬರುವ ವರ್ಷದಲ್ಲಿ ಹಳ್ಳಿಗಳಲ್ಲಿ ಸಾಮೂಹಿಕ ಕಣಗಳನ್ನು ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇನೆಂದು ಹೇಳುತ್ತೇನೆ.

ಇನ್ನು ಹೆಣ್ಣು ಮಕ್ಕಳ ಶೌಚಗೃಹಗಳ ಬಗ್ಗೆ ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕ ತೊಂದರೆ ಯನ್ನು ಮಾನ್ಯ ಸದಸ್ಯರು ವಿವರಿಸಿದ್ದಾರೆ. ಮುಂದಿನ ವರ್ಷ ಇದನ್ನು ಸಹ ಅಳವಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಇನ್ನು ಶ್ರೀಮಾನ್ ಭೂಪತಿಯವರು ನಮ್ಮ ಇಲಾಖೆಯ ಬಗ್ಗೆ ಹೇಳಿರುತ್ತಾರೆ. ಬೀದಿ ದೀಪಗಳು ಅನೇಕ ಕಡೆ ಇಲ್ಲವೆಂದು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೇ, ಒಂದು ಗ್ರಾಮ ಪಂಚಾಯಿತಿಗೆ ಬೀದಿ ದೀಪಗಳನ್ನು ಹಾಕತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಲಿಕ್ಕೆ ಅವರಿಗೇನೆ ಬಿಟ್ಟರೂ ಅದು ಅಷ್ಟು ವ್ಯವಸ್ಥಿತವಾಗಿ ಆಗಲಿಲ್ಲವೆಂದು ನೇರವಾಗಿ ಕೆ.ಇ.ಬಿ.ಯವರಿಗೆ ವಹಿಸಲಾಗಿದೆ. ಅವರು ಮೈಸೂರು ಲ್ಯಾಂಪ್ ವರ್ಕ್ಸ್ ಮುಖಾಂತರ ಬೀದಿ ದೀಪಗಳನ್ನು ಒದಗಿಸಿ ಹಾಕುವಂಥ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ. ತಮಗೆ ಗೊತ್ತಿದೆ ಸಾರ್ವಜನಿಕ ಸಂಸ್ಥೆಗಳು ನೇರವಾಗಿ ಅಸಿಸ್ಟೆಂಟ್ ಕಮಿಷನರ್ ಮುಖಾಂತರ ತಮ್ಮ ಬೇಡಿಕೆಯನ್ನು ಕೊಟ್ಟರೆ ಅದನ್ನು ವ್ಯವಸ್ಥೆ ಮಾಡುವಂಥ ನಿರ್ದೇಶನವಿರುತ್ತದೆ. ಆ ರೀತಿ ಆಗದಿದ್ದರೆ ಅವರು ಹೇಳಿದಂತೆ ಯಾವುದಾದರೂ ಸ್ಥಳದಲ್ಲಿ ಅನಾನುಕೂಲ ವಾಗಿದ್ದರೆ ಅದನ್ನು ಸರಿಪಡಿಸತಕ್ಕಂಥ ಕೆಲಸವನ್ನು ಮಾಡುವುದಾಗಿ ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ.

ಮತ್ತೆ ಮಾನ್ಯ ವೆಂಕಟರಾಮಯ್ಯನವರು ಮಾತನಾಡುತ್ತಾ, ಗ್ರಾಮಾಂತರ ಪ್ರದೇಶಗಳಲ್ಲಿ ಗ್ರಾಮಸಭೆಗಳೇ ನಡೆಯುವುದಿಲ್ಲ. ಫಲಾನುಭವಿಗಳು ಯಾರು ಎಂದು ಸರಿಯಾಗಿ ಗುರುತಿಸುತ್ತಿಲ್ಲ. ಅಲ್ಲಿರುವಂಥ ಸೆಕ್ರೆಟರಿಯವರೇ ಇದನ್ನು ಸರ್ಟಿಫೈ ಮಾಡಿಬಿಡುತ್ತಾರೆಂದು ಹೇಳಿದರು. ಸುಮಾರಾಗಿ ಒಂದು ಊರಿನಲ್ಲಿ ೬೦ ಜನರನ್ನು ಆಯ್ಕೆ ಮಾಡಬೇಕು. ನಮಗೆ ಹೋಗುವುದಕ್ಕೆ ಆಗುವುದಿಲ್ಲವೆಂದು ಹೇಳಿದರು. ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ನಾನು ಮಾನ್ಯ ಸದಸ್ಯರಿಗೆ ಹೇಳಲಿಕ್ಕೆ ಇಷ್ಟಪಡುವುದೇನೆಂದರೆ, ಸಧ್ಯದ ಪರಿಸ್ಥಿತಿಯಲ್ಲಿ ನಮ್ಮ ಸಾಧ್ಯತೆ ಇಷ್ಟೆ ಸುಮಾರು ಆರುನೂರು ಫಲಾನುಭವಿಗಳಿಗೆ ಒಂದು ವರ್ಷದಲ್ಲಿ ಕೊಡತಕ್ಕಂಥ ಸಂದರ್ಭದಲ್ಲಿ ಈ ಎರಡು ಲಕ್ಷವನ್ನು ಕೇಂದ್ರದವರು

ಕೊಟ್ಟಿದ್ದಾರೆ. ಇಷ್ಟು ಮಿತಿಯಲ್ಲಿ ಎಷ್ಟು ಜನಕ್ಕೆ ಕೊಡಲು ಸಾಧ್ಯ ? ಒಂದು ಊರಿನ ಜನ ೬೫ ಇರಬಹುದು, ಅದಕ್ಕಿಂತಲೂ ಕಡಿಮೆಯೂ ಇರಬಹುದು. ಆಮೇಲೆ, ಮಾನ್ಯ ಸದಸ್ಯರುಗಳು ಅಲ್ಲಿಗೆ ಹೋಗಬೇಕು. ಇದರಿಂದ ಏನಾದರೂ ಅವ್ಯವಹಾರಗಳು ನಡೆಯುವಂತಿದ್ದರೆ ಅದನ್ನು ತಪ್ಪಿಸಲಿಕ್ಕೆ ಸಾಧ್ಯವಾಗುತ್ತದೆ. ಇಂತಹ ಯಾವುದಾದರೂ ನಿರ್ದಿಷ್ಟ ಪ್ರಕರಣಗಳನ್ನು ನನ್ನ ಗಮನಕ್ಕೆ ತಂದರೆ ಕೂಡಲೇ ಅದರ ಬಗ್ಗೆ ಸೂಕ್ತಕ್ರಮ ತೆಗೆದುಕೊಳ್ಳಲಾಗುವುದು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದಲ್ಲದೆ ಅವರು ಪದೇಪದೇ ಹೇಳುತ್ತಿದ್ದರು, ಅದೇನೆಂದರೆ ಗ್ರಾಮಗಳಲ್ಲಿ ರಸ್ತೆಗಳಿಲ್ಲ, ನೀರು ಇಲ್ಲ, ಅದಿಲ್ಲ ಇದಿಲ್ಲ ಎಂದು. ಮಾನ್ಯ ಅಧ್ಯಕ್ಷರೇ. ನಾನು ಉತ್ತರ ಕರ್ನಾಟಕ ಭಾಗದಿಂದ ಬಂದವನು. ಈಗ ಕಳೆದ ಎರಡು-ಮೂರು ವರ್ಷಗಳಲ್ಲಿ ರಸ್ತೆ ನಿರ್ಮಾಣದ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ಈಗಾಗಲೇ ತೆಗೆದುಕೊಂಡಿದ್ದು, ಅಲ್ಲಿ ರಸ್ತೆಗಳು ಬೇಡ, ಮತ್ತೇನಾದರೂ ಮಾಡಬೇಕೆಂದು ವಿಚಾರ ಮಾಡುತ್ತಿದ್ದೇವೆ. ಅನೇಕ ವರ್ಷಗಳಿಂದ ಈ ರೀತಿಯ ಅಭಿವೃದ್ಧಿ ಕಾರ್ಯಗಳು ನಡೆದು ಅವುಗಳ ಪ್ರಯೋಜನ ಪಡೆದ ಈ ಭಾಗದಲ್ಲಿ ಅನೇಕ ಕಾರ್ಯಕ್ರಮಗಳಿಗಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿದ ಸಂದರ್ಭದಲ್ಲಿ ಮತ್ತೆ ಇಲ್ಲಿ ಏನೂ ಇಲ್ಲವೆಂದು ಹೇಳುವುದು ಸರಿಯಾದುದಲ್ಲ. ಮತ್ತೆ ನೀರು ಇಲ್ಲ ಎಂದು ಹೇಳಿದ್ದಾರೆ; ಈಗಾಗಲೇ ೯೨ ಸಾವಿರಕ್ಕಿಂತಲೂ ಹೆಚ್ಚು ಕೊಳವೆ ಬಾವಿಗಳನ್ನು ತೋಡಲಾಗಿದೆ. ಆಮೇಲೆ ಅವರು ಇನ್ನೊಂದು ವ್ಯಾಖ್ಯಾನ ಮಾಡಿದ್ದಾರೆ, ಏನೆಂದರೆ, ಕುಡಿಯುವ ನೀರಿನ ಪೂರೈಕೆ ಯೋಜನೆಗಳನ್ನು ಪ್ರಸ್ತಾಪಿಸಿ ಇದಕ್ಕೆ ಮಾಡಿದಂಥ ಕೆಲಸ ತಿರುಪತಿ ಎಂದು ಕೆಲಸ ಹೇಳಿದರು. ಇದು ನನಗೆ ಅಷ್ಟು ಸರಿಯಾಗಿ ಕಂಡಿಲ್ಲ. ಇದೊಂದು ಉಪಮೇಯ ಕೊಟ್ಟು ಇದು 'ತಿರುಪತಿ ಪ್ರೋಗ್ರಾಂ' ಎಂದು ಹೇಳಿದರು. ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತು. ಒಂದು ಜಿಲ್ಲೆಗೆ ಒಂದು ಡಿವಿಜನ್ ಇದೆ. ಹೆಚ್ಚಿನ ಸಿಬ್ಬಂದಿಯನ್ನು ಒದಗಿಸಬೇಕೆಂದು ನಮಗೆ ಇಚ್ಛೆ ಇದೆ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಮಾಡಿದಂಥ ಕೆಲಸಗಳ ಗಾತ್ರವನ್ನು ಮಾನ್ಯ ಸದಸ್ಯರು ದಯವಿಟ್ಟು ಕಲ್ಪನೆ ಮಾಡಿಕೊಳ್ಳಬೇಕು. ಈ ರಾಜ್ಯದಲ್ಲಿ ಹೋದವರ್ಷ ಸುಮಾರು ೧೭೦೦ಕ್ಕಿಂತಲೂ ಹೆಚ್ಚು ಮಿನಿ ವಾಟರ್ ಸ್ಕೀಂಗಳನ್ನು, ೭೦೦ಕ್ಕಿಂತಲೂ ಹೆಚ್ಚು ಕೊಳವೆ ಬಾವಿಗಳನ್ನು ಅಂದರೆ ಪೈಪ್ ವಾಟರ್ ಸ್ಕೀಂಗಳನ್ನು ಸಾವಿರಕ್ಕಿಂತಲೂ ಹೆಚ್ಚು ಕೊಳವೆ ಭಾವಿಗಳನ್ನು ತೋಡುವ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವ ಪ್ರಯತ್ನ ಮಾಡಿದ್ದೇವೆ. ಅದೂ ಅಲ್ಲದೆ, ಕೆಲವು ಹಳೆಯ ಕಾರ್ಯಕ್ರಮಗಳು ಏನು ಹಾಗೆಯೇ ಉಳಿದುಕೊಂಡು ಬಂದಿವೆ, ಅವುಗಳನ್ನೂ ಸಹಿತ ಪರಿಪೂರ್ಣ ಮಾಡಬೇಕೆಂದು ಮಾಡಿದ್ದೇವೆ. ಇದು ಮಾನ್ಯ ಸದಸ್ಯರ ಅನುಭವದಲ್ಲಿ ಬಂದಿರಲಿಕ್ಕೂ ಸಾಕು. ಈ ಕಾರ್ಯಕ್ರಮಗಳನ್ನು ಕೈಗೊಳ್ಳಲು ಯಾವ ಕಂಟ್ರಾಕ್ಟರ್‌ಗಳೂ ಬರುವುದಿಲ್ಲ. ತಮಗೆ ಸಾಕಷ್ಟು ಗಿಟ್ಟಲಿಲ್ಲವೆಂದು ಅವರು ಬರಲು ಹಿಂದುಮುಂದು ನೋಡುತ್ತಾರೆ. ಇಂತಹ ಸಂದರ್ಭಗಳಲ್ಲಿ ಇಲಾಖೆಯೇ ನೇರವಾಗಿ ಸಾಧನಸಲಕರಣೆಗಳನ್ನು ಹೊಂದಿಸಿಕೊಂಡು ಇದನ್ನು ಮಾಡಿಮುಗಿಸಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದೇನೆ. ಇದರಲ್ಲಿ ಸ್ವಲ್ಪ ವಿಳಂಬ ಆಗಿದ್ದರೂ ಸಹಿತ, ಪ್ರಾಮಾಣಿಕ ಪ್ರಯತ್ನವಂತೂ ಖಂಡಿತವಾಗಿಯೂ ನಡೆದಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಸದಸ್ಯರಾದ ಶ್ರೀ ವೆಂಕಟರಾಮಯ್ಯನವರು ಶ್ರೀ ರಾಮಸ್ವಾಮಿಯವರ ಒಂದು ಪುಸ್ತಕವನ್ನು ಉದಹರಿಸಿ ಈ ಐಆರ್‌ಡಿಪಿ ಕಾರ್ಯಕ್ರಮ ಅಧಿಕಾರಿಶಾಹಿಯಿಂದ ನಡೆಯುತ್ತಿದೆ ಎಂದು ಹೇಳಿದರು. ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತು, ಈ ವ್ಯವಸ್ಥೆಯಲ್ಲಿ ಇದಕ್ಕಿಂತಲೂ ಹೆಚ್ಚು ಸಾಧ್ಯ ಇಲ್ಲ. ಒಂದು ವ್ಯವಸ್ಥಿತವಾದ ರೀತಿಯಲ್ಲಿ ಇದನ್ನು ಅನುಷ್ಠಾನಕ್ಕೆ ತರಲು ಎಷ್ಟು ಬೇಕೋ ಅಷ್ಟು ಪ್ರಯತ್ನವನ್ನು ಮಾಡುತ್ತಿದ್ದೇವೆ. ಇದಕ್ಕಿಂತ ಹೆಚ್ಚು ಈಗಿರುವ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲವೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪನವರು ಈ ಸಂದರ್ಭದಲ್ಲಿ ಮಾತನಾಡುತ್ತಾ, ಈ ಕೊಳವೆ ಬಾವಿಗಳು ಏನಿವೆ, ಇವುಗಳನ್ನು ತೋಡತಕ್ಕಂಥ ಕಾರ್ಯಕ್ರಮಗಳಲ್ಲಿ ಬಹಳಮಟ್ಟಿಗೆ ಭ್ರಷ್ಟಾಚಾರ ಇದ್ದು, ಆಳ ಸರಿಯಾಗಿ ಇಡುವುದಿಲ್ಲ, ಸರಿಯಾಗಿ ಪೈಪುಗಳನ್ನು ಹಾಕುತ್ತಿಲ್ಲವೆಂದು ಹೇಳಿದ್ದಾರೆ. ಇಂಥ ಪ್ರಕರಣಗಳನ್ನು ಕಂಡುಹಿಡಿಯಲಿಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ ? ತಪ್ಪಿತಸ್ಥ ಅಧಿಕಾರಿಗಳನ್ನು ಶಿಕ್ಷೆಗೆ ಗುರಿಪಡಿಸಿದ್ದೀರಾ ಎಂದು ಅವರು ಕೇಳಿದರು. ಇದರ ಬಗ್ಗೆ ನಾವು ಸ್ಪಷ್ಟವಾದ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ನಾವು ಮಾಡಿದ್ದು ಸರಿಯೆನ್ನುವ ಭಾವನೆ ಬರಬಾರದು ಅಥವಾ ಇನ್ನೊಬ್ಬರು ಅನುಕೂಲ ಪಡೆಯುವ ಉದ್ದೇಶದಿಂದ ಮಾಡಿದ್ದಾರೆ ಎನ್ನುವ ಭಾವನೆ ಬರಬಾರದು ಎನ್ನುವ

ದೃಷ್ಟಿಯಿಂದ, ಇವೆರಡನ್ನೂ ಮೀರಿ ಅಫ್ರೊ ಎನ್ನುವ ಸಂಸ್ಥೆಗೆ ಇದನ್ನು ಒಪ್ಪಿಸಲಾಗಿದೆ. ಇದರ ಆಳ ಸರಿಯಾಗಿದೆಯೋ, ಬಾವಿಯನ್ನು ತೋಡುವ ಅವಶ್ಯಕತೆ ಇದೆಯೋ, ಇದು ಯಾವ್ಯಾವ ರೀತಿ ಇರಬೇಕೆಂದು ತೀರ್ಮಾನ ಮಾಡಿ ವರದಿಯನ್ನು ಒಪ್ಪಿಸಬೇಕೆಂದು ಅಫ್ರೊ ಸಂಸ್ಥೆಗೆ ಕೇಳಲಾಗಿದೆ. ಐದು ಪ್ರಮಾಣದಲ್ಲಿ ಪರಿಶೀಲನೆ ಮಾಡಿ ವರದಿಯನ್ನು ಸಲ್ಲಿಸಬೇಕು. ಮತ್ತು ಇದರಲ್ಲಿ ನ್ಯೂನತೆಗಳು ಕಂಡು ಬಂದರೆ ನಿಷ್ಪಕ್ಷಪಾತವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಈ ಸಂಸ್ಥೆಯು ವರದಿ ನಮಗೆ ಇನ್ನೂ ಬಂದಿಲ್ಲವೆಂದು ಈ ಸಂದರ್ಭದಲ್ಲಿ ತಮಗೆ ತಿಳಿಸಲು ಬಯಸುತ್ತೇನೆ. ಆದರೆ ನಮ್ಮ ಕಾರ್ಯಕ್ರಮ ಮಾತ್ರ ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಮಾನ್ಯ ಸದಸ್ಯರಾದ ಶ್ರೀಮಾನ್ ಯಡಿಯೂರಪ್ಪನವರು ಮತ್ತೊಂದು ಸೂಚನೆಯನ್ನು ಕೊಟ್ಟರು. ಜಿಲ್ಲಾಪರಿಷತ್, ಮಂಡಲ್ ಪಂಚಾಯತ್ ತರುವಂಥ ವ್ಯವಸ್ಥೆ ಬಗ್ಗೆ ಅವರು ತಮ್ಮ ಮೆಚ್ಚುಗೆಯನ್ನು ವ್ಯಕ್ತಮಾಡಿದರು, ಅವರ ಭಾವನೆಯನ್ನು ನಾನು ಸ್ವಾಗತ ಮಾಡುತ್ತೇನೆ. ಇದರ ಜೊತೆಯಲ್ಲಿ ಅವರು ಇನ್ನೊಂದು ಮಾತನ್ನು ಹೇಳಿದರು. ಅದೇನೆಂದರೆ, ಈ ಕಾರ್ಯಕ್ರಮಗಳನ್ನು ಈಡೇರಿಸುವುದಕ್ಕೆ ಹತ್ತಾರು ವರ್ಷಗಳ ಗುರಿಯನ್ನು ಏನು ಇಟ್ಟುಕೊಂಡಿದ್ದೀರಿ, ಇದರಿಂದ ಯೋಜಿತ ಫಲವನ್ನು ಕಾಣಲಿಕ್ಕೆ ಸಾಧ್ಯವಾಗುವುದಿಲ್ಲ. ಆದಷ್ಟು ಬೇಗ ಪೂರ್ತಿಗೊಳಿಸಲು ಇದನ್ನು ಅನುಷ್ಠಾನಕ್ಕೆ ತರುವ ಕೆಲಸ ಮಾಡಬೇಕೆಂದು ಅವರು ಹೇಳಿದ್ದಾರೆ. ಈ ದಿಕ್ಕಿನಲ್ಲಿ ನಾವು ಇದ್ದೇವೆ ಎಂದು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ರೀತಿಯ ಪರಿಸ್ಥಿತಿ ನಿರ್ಮಾಣ ಆಗುವುದಕ್ಕೆ ನಾವು ಬಿಡುವುದಿಲ್ಲ. ಶ್ರೀಮಾನ್ ಆಚಾರ್ ಅವರು ಮಾತನಾಡಿ ಗ್ರಾಮೀಣ ಅಭಿವೃದ್ಧಿ ಇಲಾಖೆ ಗ್ರಾಮೀಣ ಜನಜೀವನದ ಮೇಲೆ ಪರಿಣಾಮವನ್ನು ಬೀರುವಂಥಾದ್ದು, ಹೀಗಿರುವಾಗ ಈ ಇಲಾಖೆಯ ಅನೇಕ ಕಾರ್ಯಕ್ರಮಗಳು ಬಹಳ ಹಿಂದೆ ಬಿದ್ದಿವೆ. ಗ್ರಾಮೀಣ ಜನಜೀವನದ ಅಭಿವೃದ್ಧಿ ಮಾಡುತ್ತೇವೆ ಎಂದು ಯೋಜಿಸಿಕೊಂಡ ಕಾರ್ಯಕ್ರಮಗಳು ಬಹಳ ಹಿಂದೆ ಇವೆಯೆಂದು ಅವರು ಆಡಿಟರ್ ಜನರಲ್ ಅವರ ವರದಿಯನ್ನು ಉದಹರಿಸಿ ಹೇಳಿದರು. ನಮ್ಮ ಕಾರ್ಯಕ್ರಮಗಳನ್ನು ರಾಷ್ಟ್ರೀಯ ಮಟ್ಟದಲ್ಲಿ ಹೋಲಿಸಿದರೆ ಬಹಳ ಕಡಿಮೆ ಇದೆಯೆಂದು ಹೇಳಿದರು, ಮಾನ್ಯ ಸದಸ್ಯರಿಗೆ ನಾನು ತಿಳಿಸುವುದೇನೆಂದರೆ, ಅವರು ಏನು ವಿಷಯವನ್ನು ರೆಫರ್ ಮಾಡಿದ್ದಾರೆ, ಆ ಒಂದು ರಿಪೋರ್ಟ್ ಹಿಂದಿನ ಅಂಕಿಅಂಶಗಳನ್ನು ಆಧಾರವಾಗಿಟ್ಟುಕೊಂಡು ತಯಾರು ಮಾಡಿರತಕ್ಕಂಥಾದ್ದು. ಈಗ ಪ್ಲಾನಿಂಗ್ ಕಮೀಷನರ್ ಅವರ ವರದಿ ಇದೆ. ಇದನ್ನು ಅವರ ಗಮನಕ್ಕೆ ತರಲು ಬಯಸುತ್ತೇನೆ. ಇದು ಬಜೆಟ್ ಪುಸ್ತಕದಲ್ಲಿದೆ. ಅನೆಕ್ಸರ್ ೧ರಲ್ಲಿದೆ.

ಈ ಸಲದ ಬಡ್ಜೆಟ್ ಭಾಷಣದಲ್ಲಿ ಹೇಳಿರುವ ಪ್ರಕಾರ ಎನ್.ಆರ್.ಇ.ಪಿ. ಕುಡಿಯುವ ನೀರು, ಗ್ರಾಮೀಣವಿದ್ಯುದ್ದೀಕರಣ, ಪಂಪುಸೆಟ್ಟುಗಳಿಗೆ ವಿದ್ಯುತ್ ನೀಡಿಕೆ, ಮರಗಳನ್ನು ನೆಡುವುದು, ಬಯೋಗ್ಯಾಸ್ ಸ್ಥಾವರ ಮುಂತಾದ ಹತ್ತು ಕಾರ್ಯಕ್ರಮಗಳು ರಾಷ್ಟ್ರಮಟ್ಟದಲ್ಲಿ 'ಎ' ಗ್ರೇಡ್‌ನಲ್ಲಿವೆ. ಅದೇ ರೀತಿ ಆರ್.ಎಲ್.ಇ.ಜಿ.ಪಿ. ಹೆಚ್ಚುವರಿ ಭೂಮಿ ಹಂಚಿಕೆ, ಜೀತ ಕಾರ್ಮಿಕರಿಗೆ ಪುನರ್ವಸತಿ ಕಲ್ಪಿಸುವುದು, ಐ.ಆರ್.ಡಿ.ಪಿ. ಮುಂತಾದ ಕಾರ್ಯಕ್ರಮಗಳು ರಾಷ್ಟ್ರಮಟ್ಟದಲ್ಲಿ 'ಎ' ಗ್ರೇಡ್‌ನಲ್ಲಿ ಇಲ್ಲದಿರುವುದಕ್ಕೆ ಕೆಲವು ಕಾರಣಗಳಿವೆ, ಆರ್. ಎಲ್.ಇ.ಜಿ.ಪಿ. ಬಗ್ಗೆ ಹೇಳಬೇಕೆಂದರೆ, ಈ ಯೋಜನೆಯನ್ನು ಅನುಷ್ಠಾನದಲ್ಲಿ ತರುವಂತಹ ಅಧಿಕಾರ ನಮಗೆ ಇದ್ದರೂ ಸಹ ಇದನ್ನು ಅಪ್ರೂವ್ ಮಾಡುವಂತಹ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇದೆ. ಈ ಯೋಜನೆಯ ಅನುಮತಿಗೆ ಕೇಂದ್ರ ಸರ್ಕಾರದ ಸೀಲು ಬೀಳುವುದು ತಡವಾದ ಕಾರಣ, ನಾವು ಹೆಚ್ಚು ಹಣವನ್ನು ಈ ಯೋಜನೆಯ ಕೆಳಗೆ ಖರ್ಚು ಮಾಡುವುದಕ್ಕಾಗಲಿಲ್ಲ. ಆದ ಕಾರಣ ಅಪ್ರತ್ಯಕ್ಷವಾಗಿ ನಾವು ಇದಕ್ಕೆ ಜವಾಬ್ದಾರರಲ್ಲವೆಂದು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಬಯಸುತ್ತೇನೆ.

ಶ್ರೀ ಯು. ಭೂಪತಿ.— ಮಾನ್ಯ ಸಚಿವರು ಈ ಕಾರಣ ಕೊಟ್ಟು ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದ್ದಾರೆ. ರೂರಲ್ ಎಂಪ್ಲಾಯ್‌ಮೆಂಟ್ ಬಗ್ಗೆ ಹೆಚ್ಚಿನ ಸಾಧನೆ ಮಾಡಲು ಇವರ ಕೈಯಲ್ಲಿ ಆಗದಿದ್ದಾಗ, ಅದಕ್ಕೆ ಕೇಂದ್ರ ಸರ್ಕಾರವೇ ಕಾರಣ ಎಂದು ಹೇಳುವುದು ಸರಿಯೋ?

ಶ್ರೀ ಅಬ್ದುಲ್ ನಜೀರ್‌ಸಾಬ್.— ಯೋಜನಾ ಆಯೋಗದವರು ಈ ಇಪ್ಪತ್ತು ಅಂಶಗಳ ಕಾರ್ಯಕ್ರಮದ ಬಗ್ಗೆ ಪ್ರತಿ ರಾಜ್ಯದ ಪ್ರಗತಿಯ ಬಗ್ಗೆ ಸಮೀಕ್ಷೆ ನಡೆಸುತ್ತಾರೆ. ಅವರು ಪ್ರತಿ ಮೂರು ತಿಂಗಳಿಗೊಮ್ಮೆ ಸಮೀಕ್ಷೆ ನಡೆಸುತ್ತಾರೆ. ಈಗ ನಿಮಗೆ ಒದಗಿಸಿರುವ ಅಂಕಿಅಂಶಗಳು ಡಿಸೆಂಬರ್ ಕೊನೆಯವರೆಗೆ ನಡೆದಂಥ ಕಾರ್ಯಕ್ರಮಗಳ ಬಗ್ಗೆ. ನಾವು ಸತತವಾಗಿ

ಕಳೆದ ಮೂರು ವರ್ಷಗಳಿಂದ ಕುಡಿಯುವ ನೀರನ್ನು ರಾಜ್ಯದ ಎಲ್ಲ ಕಡೆ ಒದಗಿಸಿದ್ದರಿಂದ ಈ ಬಗ್ಗೆ ನಾವು ರಾಷ್ಟ್ರಮಟ್ಟದಲ್ಲಿ ಮೊದಲನೆಯ ಸ್ಥಾನದಲ್ಲಿದ್ದೇವೆ. ಈ ಕಾರಣದಿಂದ ೧೯೮೩-೮೪ರಲ್ಲಿ ೬೦ ಲಕ್ಷ ರೂಪಾಯಿಗಳ ಬೋನಸ್ ನಮಗೆ ಸಿಕ್ಕಿದೆ. ೧೯೮೪-೮೫ರಲ್ಲಿ ೩ ಕೋಟಿ ರೂಪಾಯಿಗಳ ಬೋನಸ್ ಸಿಕ್ಕಿದೆ. ೧೯೮೫-೮೬ರಲ್ಲಿ ೫ ಕೋಟಿ ರೂಪಾಯಿಗಳ ಬೋನಸ್ ಸಿಗುತ್ತದೆ. ಹೀಗೆ ನಾವು ಎನ್.ಆರ್.ಪಿ.ಯಲ್ಲಿ ಮೊದಲನೆಯ ಸ್ಥಾನದಲ್ಲಿದ್ದರೆ ಆರ್.ಎಲ್.ಇ.ಜಿ.ಪಿ.ಯಲ್ಲಿ ಎರಡನೇ ಸ್ಥಾನದಲ್ಲಿದ್ದೇವೆ, ಹಿಮಾಚಲ ಪ್ರದೇಶ ಸಹ ಎರಡನೇ ಸ್ಥಾನದಲ್ಲಿದೆ. ರಾಜಾಸ್ಥಾನ ಮೊದಲನೆಯ ಸ್ಥಾನದಲ್ಲಿದೆ. ಈ ಬಗ್ಗೆ ತಮಗೆ ಅಂಕಿಅಂಶಗಳನ್ನು ಬೇಕಾದರೆ ಒದಗಿಸುತ್ತೇನೆ. ಆರ್.ಎಲ್.ಇ.ಜಿ.ಪಿ.ಯಲ್ಲಿ ಡಿಸೆಂಬರ್‌ನಿಂದ ಮಾರ್ಚ್ ತಿಂಗಳವರೆಗೆ ನಾವು ಈಗಿರುವ ಸ್ಥಾನವನ್ನು ಕಾಯ್ದುಕೊಳ್ಳುತ್ತೇವೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನೆನ್ನೆ ದಿವಸ ನಾನು ಸಭೆಯಲ್ಲಿ ಇರದಿದ್ದ ಕಾರಣದಿಂದ ನಾನು ಈ ಬಗ್ಗೆ ಮಾತನಾಡುವುದಕ್ಕೆ ಸಾಧ್ಯವಾಗಲಿಲ್ಲ. ಈಗ ನೀವು ನಮಗೆ ಒದಗಿಸಿರುವ ಪರ್‌ಫಾರ್ಮೆನ್ಸ್ ಬಡ್ಜೆಟ್ ಮತ್ತು ಮುಖ್ಯಮಂತ್ರಿಗಳು ಮಂಡಿಸಿರುವ ಬಡ್ಜೆಟನ್ನು ನೋಡಿದಾಗ ಈ ೨೦ ಅಂಶಗಳ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಎಷ್ಟರಮಟ್ಟಿಗೆ ಕೆಳಗಿದ್ದೀರಿ ಎಂಬುದನ್ನು ನೋಡಬಹುದಾಗಿದೆ. ಕುಡಿಯುವ ನೀರನ್ನು ಒದಗಿಸುವುದು, ಎನ್.ಆರ್.ಇ.ಪಿ. ಗ್ರಾಮೀಣ ವಿದ್ಯುದ್ದೀಕರಣ, ಬಯೋಗ್ಯಾಸ್ ಸ್ಥಾವರ, ಮರಗಳನ್ನು ನೆಡುವುದು ಮುಂತಾದ ಕೆಲವು ಕಾರ್ಯಕ್ರಮಗಳಲ್ಲಿ ನೀವು ಮುಂದಿರಬಹುದು. ಆದರೆ ಜನರಿಗೆ ನೇರವಾಗಿ ಸಹಾಯ ಮಾಡುವಂತಹ ಕಾರ್ಯಕ್ರಮಗಳಾದ ಅಂತ್ಯೋದಯ ಯೋಜನೆ. ಡಿ.ಪಿ.ಎ.ಪಿ., ಜೀತ ಕಾರ್ಮಿಕರಿಗೆ ಪುನರ್ವಸತಿಯನ್ನು ಕಲ್ಪಿಸುವುದು, ಹೆಚ್ಚುವರಿ ಭೂಮಿಯನ್ನು ಬಡವರಿಗೆ ಹಂಚುವುದು ಮುಂತಾದವು-೧೦ ಕಾರ್ಯಕ್ರಮಗಳ ವಿಚಾರದಲ್ಲಿ ನಿಮ್ಮ ಗುರಿಯನ್ನು ಮುಟ್ಟದೆ ಬಹಳ ಹಿಂದುಳಿದಿದ್ದೀರಿ. ಈ ಅಂಶವನ್ನು ನಾವು ಎಕನಾಮಿಕ್ ಸರ್ವೆಯಿಂದ ಸಹ ತಿಳಿದುಕೊಳ್ಳಬಹುದಾಗಿದೆ. ಮುಖ್ಯಮಂತ್ರಿಗಳು ಸಹ ತಮ್ಮ ಬಡ್ಜೆಟ್‌ನಲ್ಲಿ ಇದನ್ನು ಒಪ್ಪಿಕೊಂಡಿದ್ದಾರೆ. ಜನತೆಗೆ ನೀವು ನೀರನ್ನು ಒದಗಿಸಿರಬಹುದು. ಎಲ್ಲಾ ಕಡೆ ಬೋರ್‌ವೆಲ್‌ಗಳನ್ನು ಹಾಕಿಸಿರಬಹುದು, ಈ ಕಾರ್ಯಕ್ರಮದ ಜೊತೆಗೆ ಇನ್ನುಳಿದ ೧೯ ಕಾರ್ಯಕ್ರಮಗಳು ಏನಿವೆ, ಅವುಗಳನ್ನು ಸರಿಯಾಗಿ ಕಾರ್ಯಗತ ಮಾಡದೆ ನಿರ್ಲಕ್ಷ್ಯ ತೋರಿಸಲು ಕಾರಣವೇನು? ೧೯೮೪-೮೫ರಲ್ಲಿ ಈ ಕೆಲವು ಕಾರ್ಯಕ್ರಮಗಳಿಗೆ ನೀವು ಏನು ಹಣ ಇಟ್ಟಿದ್ದೀರಿ, ಅದಕ್ಕಿಂತ ಕಡಿಮೆ ಹಣವನ್ನು ೧೯೮೫-೮೬ರಲ್ಲಿ ಇಟ್ಟಿದ್ದೀರಿ. ಬಡವರಿಗೆ ಸಹಾಯವಾಗುವಂತಹ ಕಾರ್ಯಕ್ರಮಗಳಿಗೆ ನೀವು ಕಡಿಮೆ ಹಣ ನೀಡಲು ಕಾರಣವಾದರೂ ಏನು? ಒಂದು ವೇಳೆ ನೀವು ಹೆಚ್ಚಿನ ಸಾಧನೆ ಮಾಡಿದ್ದೇ ಆಗಿದ್ದರೆ ಒಂದು ಕಂಪ್ಯಾರಿಟಿವ್ ಸ್ಟೇಟ್‌ಮೆಂಟ್ ಕೊಡಿ. ಈ ಕೆಲಸಗಳಿಗೆ ಹಣ ಖರ್ಚು ಮಾಡಲು ನಿಮಗೇನಾದರೂ ಹಣದ ಕೊರತೆ ಇದೆಯೋ? ಅದನ್ನಾದರೂ ಹೇಳಿ?

ಶ್ರೀ ಅಬ್ದುಲ್ ನಜೀರ್ ಸಾಬ್.—ನಾವು ಎನ್ ಆರ್.ಇ. ಪಿ.ಯಲ್ಲಿ ಒಂದನೇ ಸ್ಥಾನದಲ್ಲಿ ಇದ್ದೇವೆ. ಅದರಂತೆ ಆರ್.ಎಲ್.ಇ.ಜಿ.ಪಿ. ಕಾರ್ಯಕ್ರಮವೂ ಸಹ ಬಹಳ ಪ್ರಮುಖವಾದುದು. ಮಾನ್ಯ ಸದಸ್ಯರು ಕೂಡ ಈ ಹಿಂದೆ ಮಂತ್ರಿಗಳಾಗಿ ಕೆಲಸ ಮಾಡಿ ಅನುಭವ ಪಡೆದಿದ್ದಾರೆ. ಅವರು ಈಗ ಎಕನಾಮಿಕ್ ಸರ್ವೆ ಬಗ್ಗೆ ಹೇಳಿದರು. ಆ ಎಕನಾಮಿಕ್ ಸರ್ವೆಯಲ್ಲಿ ಕೊಟ್ಟಿರುವಂತಹ ವಿವರಗಳು ಕಳೆದ ಡಿಸೆಂಬರ್ ಅಂತ್ಯದವರೆಗೆ. ಮಾತ್ರ. utilisation certificate ಆಧಾರದ ಮೇಲೆ ೨ ಸಾವಿರ ಜನ ಜೀತ ಕಾರ್ಮಿಕರಿಗೆ ಡಿಸೆಂಬರ್‌ವರೆಗೆ ಪುನರ್‌ವಸತಿ ಸೌಲಭ್ಯವನ್ನು ಕಲ್ಪಿಸಿದ ಬಗ್ಗೆ ಎಕನಾಮಿಕ್ ಸರ್ವೆಯಲ್ಲಿ ಹೇಳಿದ್ದರೂ ಸಹ ನಿಜವಾಗಿಯೂ ಈ ಯೋಜನೆಯ ಅಡಿಯಲ್ಲಿ ೬ ಸಾವಿರ ಚಿಲ್ಲರೆ ಫಲಾನುಭವಿಗಳಿದ್ದಾರೆ. ಹೋದ ವರ್ಷದ ಪರ್‌ಫಾರ್ಮೆನ್ಸ್ ಬಡ್ಜೆಟ್‌ನಲ್ಲಿ ಸಹ ಕಳೆದ ಡಿಸೆಂಬರ್‌ವರೆಗಿನ ವಿವರಗಳನ್ನು ಮಾತ್ರ ಕೊಡಲಾಗಿದೆ. ಅದರ ನಂತರದ ಅಂಕಿಅಂಶಗಳನ್ನು ತೆಗೆದುಕೊಂಡರೆ ನಾವು ಮುಂದಿದ್ದೇವೆ. ಮತ್ತೊಂದು ಮುಖ್ಯವಾದಂಥ ಅಂಶವನ್ನು ತಮ್ಮ ಗಮನಕ್ಕೆ ತರುವುದಾದರೆ ಈ ಬಗ್ಗೆ ಪ್ರಧಾನಮಂತ್ರಿಗಳು ದೆಹಲಿ ವಿಶ್ವವಿದ್ಯಾನಿಲಯದವರಿಂದ evaluation report ಒಂದನ್ನು ಮಾಡಿಸಿದ್ದಾರೆ. ಪ್ರಧಾನಮಂತ್ರಿಯವರ ಆದೇಶದ ಪ್ರಕಾರ ಅವರು ರಾಷ್ಟ್ರವ್ಯಾಪ್ತಿ ಸರ್ವೆ ಮಾಡಿ ಒಂದು ವರದಿ ತಯಾರು ಮಾಡಿದ್ದಾರೆ. ಇದರಲ್ಲಿ National distribution of income per family raised from 2000/ to Rs. 3,500/ in 50% of the cases; Rs 1000/ to Rs. to 2000/ in 40% of the cases; and Rs. 1000 in 10% of the cases ಎಂದು ಹೇಳಿದ್ದಾರೆ. ರಾಷ್ಟ್ರಮಟ್ಟದಲ್ಲಿ ಐ.ಆರ್.ಡಿ.

ಪಿ. ಮೂಲಕ ಗ್ರಾಮಾಂತರ ಪ್ರದೇಶಗಳಲ್ಲಿ ವಾಸ ಮಾಡುತ್ತಿರುವ ಬಡಜನರಿಗೆ ಎಷ್ಟು ಲಾಭ ಸಿಕ್ಕಿದೆ. ಸ್ವಲ್ಪ ಇವರಿಗಿಂತ ಮೇಲ್ಮಟ್ಟದಲ್ಲಿರುವಂತಹ ಎಷ್ಟು ಲಾಭ ಸಿಕ್ಕಿದೆಯೆಂಬುದು ಇದರಿಂದ ನಮಗೆ ತಿಳಿದು ಬರುತ್ತದೆ. ಐ.ಆರ್.ಡಿ.ಪಿ. ಮೂಲಕ ರಾಷ್ಟ್ರಮಟ್ಟದಲ್ಲಿ ಒಂದು ಸಾವಿರ ರೂಪಾಯಿಗಳಿಗಿಂತ ಕಡಿಮೆ ವರಮಾನವಿರುವಂತಹವರಿಗೆ ಶೇಕಡ ಹತ್ತರಷ್ಟು ಜನರಿಗೆ ಲಾಭ ಸಿಕ್ಕಿದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಮಾತ್ರ ಇಂತಹ ಫಲಾನುಭವಿಗಳು ಶೇಕಡ ೨೫ರಷ್ಟು ಇದ್ದಾರೆ. ಅದೇ ರೀತಿ ಒಂದು ಸಾವಿರದಿಂದ ಎರಡು ಸಾವಿರದವರೆಗೆ ವರಮಾನವಿರುವಂತಹ.........

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನನ್ನ ಪ್ರಶ್ನೆಗೆ ಇದು ಉತ್ತರವಿಲ್ಲ. ನೀವು ಇಪ್ಪತ್ತು ಅಂಶಗಳ ಕಾರ್ಯಕ್ರಮದ ಬಗ್ಗೆ ನಿಮ್ಮ ಗುರಿಯನ್ನು ಮುಟ್ಟದಿರಲು ಕಾರಣ ಏನು? ಬೋರ್-ವೆಲ್‌ಗಳ ಬಗ್ಗೆ ನಿಮಗೆ ಶಹಭಾಸ್‌ಗಿರಿ ಸಿಕ್ಕಿರಬಹುದು. ಆದರೆ ಇನ್ನುಳಿದ ಕಾರ್ಯಕ್ರಮಗಳ ಬಗ್ಗೆ ವಿಶೇಷ ಪ್ರಗತಿ ಸಾಧಿಸಿಲ್ಲ ಪ್ರಗತಿಪರವಾದಂಥ ಕಾರ್ಯಕ್ರಮಗಳ ಬಗ್ಗೆ ವಿಚಾರಧಾರೆ ಮಾಡುವಂತಹ ನೀವು ಐ.ಆರ್.ಡಿ.ಪಿ.ಯಲ್ಲಿ ಹಿಂದೆ ಬೀಳಲು ಕಾರಣವೇನು?

ಶ್ರೀ ಅಬ್ದುಲ್‌ನಜೀರ್ ಸಾಬ್.— ತಾವು ತಾಳ್ಮೆಯಿಂದ ಕೇಳಿದರೆ ನಾನು ಉತ್ತರ ಕೊಡುತ್ತೇನೆ. ಈಗ ಕೇಂದ್ರ ಸರ್ಕಾರದವರು ಐ.ಆರ್.ಡಿ.ಪಿ. ಬಗ್ಗೆ ಇದ್ದಂಥ ನಾರ್ಮ್ಸ್‌ನ್ನು ಬದಲಾವಣೆ ಮಾಡಿದ್ದಾರೆ. ಮಾರ್ಚಿ ತಿಂಗಳ ಕೊನೆಯ ಹೊತ್ತಿಗೆ ಈ ಯೋಜನೆಯನ್ನು ಕೆಳಗೆ ಒಂದು ಲಕ್ಷಕ್ಕೂ ಹೆಚ್ಚು ಜನರಿಗೆ ಅನುಕೂಲ ಸಿಗುತ್ತದೆ. ಇಲ್ಲಿಯವರೆಗೆ ೭೦ ಸಾವಿರ ಜನರಿಗೆ ಅನುಕೂಲ ಸಿಕ್ಕಿದೆ.

ಉಪಾಧ್ಯಕ್ಷರು.— ಈಗ ಮಾನ್ಯ ಕಾನೂನು ಮಂತ್ರಿಗಳು ಒಂದು ಪ್ರಕಟಣೆ ಮಾಡುತ್ತಾರೆ. ಆ ಪ್ರಕಟಣೆಯ ನಂತರ ಮಾನ್ಯ ಮಂತ್ರಿಗಳು ತಮ್ಮ ಉತ್ತರವನ್ನು ಮುಂದುವರೆಸಬಹುದು.

Statement by the Minister

Reg.— Payment of D. A. to its employees w.e.f. 1-8-85

Now, the Hon'ble Minister for law and Parliamentary affairs will make a statement.

SRI A. LAKSMISAGAR.— Government of India has sanctioned two instalments of D.A. to its employees w. e. f. 1-8-1985 and 1-1.-1985 respectively in their order of 15-1-1986. Government of Karnataka is sanctioning D.A. as per the Government of India pattern. Therefore, two more instalments of D.A. to State Government employees and employees of aided educational institutions is sanctioned. This is applicable to Pensioners also. During the current financial year the outgo will be Rs 9.46 crores inclusive of the D.A. for pensioners of which a some of Rs. 8.54 crores will be impounded and investedin National Savings. certificates From 1986-87 onwards this payment will be made in cash for both the employees and the pensioners. The outgo in a full year on account of this two instalments will be Rs. 20.62 crores.

ವಿತ್ತೀಯ ಕಾರ್ಯಕಲಾಪಗಳು.
೧೯೮೭–೮೭ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ (ಮುಂ. ವ)

ಶ್ರೀ ಬಿ. ಆರ್. ಯಾವಗಲ್ (ಗ್ರಾಮೀಣಾಭಿವೃದ್ಧಿ ರಾಜ್ಯ ಸಚಿವರು).–ಮಾನ್ಯ ಉಪಾಧ್ಯಕ್ಷರೇ, ಇನ್ನೊಂದು ಮುಖ್ಯ ವಿಷಯವನ್ನು ಮಾನ್ಯ ಶ್ರೀ ಕೃಷ್ಣನ್‌ರವರು ಹೇಳಿದರು. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಬಗ್ಗೆ ಇಷ್ಟೊಂದು ಪ್ರಚಾರವನ್ನು ಮಾಡಿದ್ದೀರಿ ಆದರೆ ಬಜೆಟ್‌ನಲ್ಲಿ ಕೊಟ್ಟಂತಹ ಹಣ ಇದರ ಸಾಧನೆಗೆ ಸಾಕಾಗುವುದಿಲ್ಲವೆಂದು ಹೇಳಿದರು. ಮಾನ್ಯ ಉಪಾಧ್ಯಕ್ಷರೇ, ಸವೆಂಗೂ ಗೊತ್ತಿದೆ, ನಾವು ಕೊಟ್ಟಿರುವುದು ಒಂದು ಟೋಕನ್ ಗ್ರಾಂಟ್ ಮಾತ್ರ. ಜಿಲ್ಲಾ ಪರಿಷತ್ತಿಗೆ ಹೆಚ್ಚು ಹಣವನ್ನು ಕೊಡಬೇಕೆಂದು ಇದೆ ಜಿಲ್ಲಾ ಪರಿಷತ್ತು ಜಾರಿಯಲ್ಲಿ ಬಂದಾಗ ಅಷ್ಟೂ ಹಣವನ್ನು ನಾವು ಒದಗಿಸಲಿಕ್ಕೆ ಅನುಕೂಲವಾಗುತ್ತದೆ. ಈಗ ಕೊಟ್ಟಿರುವುದು ಮಾತ್ರ ಟೋಕನ್ ಗ್ರಾಂಟ್ ಎಂದು ಹೇಳಲಿಕ್ಕೆ ಬಯಸುತ್ತೇನೆ. ಅದೂ ಅಲ್ಲದೇ ಜಿಲ್ಲಾ ಪರಿಷತ್ತಿಗೆ ಜಿಲ್ಲಾ ಕಾರ್ಯಕ್ರಮಗಳು ವರ್ಗಾವಣೆಯಾದಾಗ ಅದಕ್ಕೆ ಬೇಕಾದ ಹಣವೂ ಜಿಲ್ಲಾ ಪರಿಷತ್ತಿಗೆ ತಾನಾಗೇ ವರ್ಗಾವಣೆಯಾಗುತ್ತದೆ. ಇದರಿಂದ ಯಾವ ತೊಂದರೆಯೂ ಆಗುವುದಿಲ್ಲ. ಇದು ಕಣ್ಣೊರೆಸುವ ತಂತ್ರ ಅಲ್ಲ. ಇದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಮಾನ್ಯ ಕೃಷ್ಣನ್‌ರವರು ಮತ್ತೊಂದು ವಿಷಯವನ್ನು ಹೇಳಿದರು ಅದೇನೆಂದರೆ, ಬಿ. ಡಿ. ಒ. ಗಳಿಗೆ ಮತ್ತು ಬಿ. ಡಿ. ಒ. ಕಛೇರಿಯಲ್ಲಿ ಇರುವಂಥ ಸಿಬ್ಬಂದಿ ವರ್ಗದವರಿಗೆ ಸರಿಯಾದ ತರಬೇತಿ ಕೊಟ್ಟಿಲ್ಲವೆಂದು. ನಾವು ಬಿ. ಡಿ. ಒ ಗಳಿಗೂ ಟ್ರೈನಿಂಗ್ ಕೊಡುತ್ತೇವೆ, ಅಲ್ಲಿರುವ ಸಿಬ್ಬಂದಿ ವರ್ಗದವರಿಗೂ ಅಂದರೆ ಅಕೌಂಟ್ಸ್ ತಯಾರು ಮಾಡುವ ಬಗ್ಗೆ ರೆಕಾರ್ಡ್ಸನ್ನು ಬಿಲ್ಡ್ ಅಪ್ ಮಾಡುವ ಬಗ್ಗೆ ಟ್ರೈನಿಂಗ್ ಕೊಟ್ಟಿದ್ದೇವೆ. ಗ್ರಾಮೀಣ ಅಭಿವೃದ್ಧಿ ಬಗ್ಗೆ ಯಾವ ರೀತಿ ಕೆಲಸಗಳನ್ನು ಮಾಡಬೇಕು ಎನ್ನುವ ಬಗ್ಗೆಯೂ ಟ್ರೈನಿಂಗನ್ನು ಕೊಟ್ಟಿದ್ದೇವೆ. ನೀರಾವರಿ ಯೋಜನೆಗಳ ಬಗ್ಗೆಯೂ ಮಾನ್ಯ ಸದಸ್ಯರು ಹೇಳಿದ್ದಾರೆ. ಆರ್. ಎಲ್. ಇ. ಜಿ. ಪಿ., ಡಿ. ಪಿ. ಎ. ಪಿ., ಯೋಜನೆಗಳಿಗೆ ನಾವು ಹೆಚ್ಚು ಹಣವನ್ನು ಒದಗಿಸಿರುವುದು ಎಲ್ಲರಿಗೂ ಗೊತ್ತಿದೆ. ಅದೂ ಅಲ್ಲದೆ ಎನ್. ಆರ್. ಇ. ಪಿ. ಯೋಜನೆಯಲ್ಲಿ ಸಣ್ಣ ಕೆಲಸಗಳನ್ನು ತೆಗೆದುಕೊಂಡು ಮಾಡಿಸುವುದಕ್ಕೆ ಸಾಧ್ಯ ಇದೆ. ಆಮೇಲೆ ಶಾಲಾ ಕಟ್ಟಡಗಳ ಬಗ್ಗೆ ಹೇಳಿದ್ದಾರೆ. ಈಗಾಗಲೇ ನಾವು ೧೦ ಸಾವಿರ ಶಾಲಾ ಕಟ್ಟಡಗಳನ್ನು ತೆಗೆದುಕೊಂಡಿದ್ದೇವೆ, ಹಾಗು ಅವುಗಳನ್ನು ಕಂಪ್ಲೀಟ್ ಮಾಡಿದ್ದೇವೆ. ಇನ್ನೂ ಹೆಚ್ಚು ಹೆಚ್ಚು ಶಾಲಾ ಕಟ್ಟಡಗಳನ್ನು ತೆಗೆದುಕೊಳ್ಳುವುದಕ್ಕೆ ಯೋಜನೆ ಹಾಕಿದ್ದೇವೆ ಆಮೇಲೆ ಸೆಲ್ಫ್ ಎಂಪ್ಲಾಯ್‌ಮೆಂಟ್ ಸ್ಕೀಮ್‌ನಲ್ಲಿ ಹೆಚ್ಚು ಜನರಿಗೆ ಉದ್ಯೋಗವನ್ನು ಒದಗಿಸಿ ಕೊಡಬೇಕೆಂದು ಮಾನ್ಯ ಸದಸ್ಯರು ಸಲಹೆ ಕೊಟ್ಟಿದ್ದಾರೆ. ನಾವು ಇದನ್ನು ಮಾಡುತ್ತಿದ್ದೇವೆ. ಕೃಷಿ ಕಾರ್ಮಿಕರ ಮಕ್ಕಳಿರಲಿ, ಕಾರ್ಮಿಕರ ಮಕ್ಕಳಿರಲಿ, ಸಣ್ಣ ಹಿಡುವಳಿದಾರರ ಮಕ್ಕಳಿರಲಿ, ಶ್ರೀಮಂತ ಹಿಡುವಳಿದಾರರ ಮಕ್ಕಳಿರಲಿ ಯಾರು ಬರುತ್ತಾರೋ ಅಂತಹವರಿಗೆ ತರಬೇತಿಯನ್ನು ಕೊಟ್ಟು ಐ. ಆರ್. ಡಿ. ಪಿ. ಯೋಜನೆ ಮೂಲಕ ಅವರಿಗೆ ಸಾಧನ ಸಲಕರಣೆಗಳನ್ನು ಒದಗಿಸಿ ಉದ್ಯೋಗವನ್ನು ಕೊಡುತ್ತೇವೆ. ಈ ಯೋಜನೆಯಡಿ ಸುಮಾರು ೨೫ ಸಾವಿರ ಯುವಕರಿಗೆ ಸೆಲ್ಫ್ ಎಂಪ್ಲಾಯ್‌ಮೆಂಟನ್ನು ಕಲ್ಪಿಸಿಕೊಡಬಹುದು. ಇದನ್ನು ನಾವು ಮಾಡುತ್ತಿದ್ದೇವೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಬಸವರಾಜು ರಾಯರೆಡ್ಡಿ.—ಮಾನ್ಯ ಅಧ್ಯಕ್ಷರೇ, ಇವರು ೨೫ ಸಾವಿರ ಜನಕ್ಕೆ ಟ್ರೈನಿಂಗ್ ಕೊಡುತ್ತಿದ್ದೇವೆಂದು ಹೇಳಿದ್ದಾರೆ. ಇವರು ಇಷ್ಟು ಕಡಿಮೆ ಹಣವನ್ನು ಇಟ್ಟಿರುವಾಗ ಹೇಗೆ ಸಾಧ್ಯವಾಗುತ್ತದೆ ?

ಅಧ್ಯಕ್ಷರು.—ರಾಯರೆಡ್ಡಿಯವರೇ, ಸುಮ್ಮನೇ ಕುಳಿತುಕೊಳ್ಳಿ. ಮಧ್ಯೆ ಮಧ್ಯೆ ಎದ್ದು ನಿಂತು ಮಾತನಾಡಬೇಡಿ. ಆಮೇಲೆ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಬಿ. ಆರ್. ಯಾವಗಲ್.—ಮಾನ್ಯ ಕೃಷ್ಣನ್‌ರವರು ಬಯೋಗ್ಯಾಸ್‌ಗಳ ಅಭಿವೃದ್ಧಿ ಬಗ್ಗೆ ಚೈನಾ ದೇಶದಲ್ಲಿ ಯಾವ ರೀತಿ ಇದೆ ಎಂಬುದನ್ನು ಉದಾಹರಣೆ ಕೊಟ್ಟು ಹೇಳಿದ್ದಾರೆ. ನಾವೂ ಸಹ ಅದೇ ರೀತಿಯಲ್ಲಿ ಬಯೋ ಗ್ಯಾಸ್ ಅಭಿವೃದ್ಧಿ ಮಾಡುತ್ತಿದ್ದೇವೆ. ಇವರ ಅನೇಕ ಸೂಚನೆಗಳನ್ನು ನಾನು ಒಪ್ಪುತ್ತೇನೆ.

ಇನ್ನು ಮಾನ್ಯ ಸದಸ್ಯರಾದ ಶಿವನಂಜಪ್ಪನವರು ಮಾತನಾಡುತ್ತಾ, ಅಂತ್ಯೋದಯ ಯೋಜನೆ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತ ಮಾಡಿದ್ದಾರೆ. ಈ ಯೋಜನೆಯಡಿಯಲ್ಲಿ ಸುಮಾರು ೫೩ ಸಾವಿರ ಜನರಿಗೆ ಉದ್ಯೋಗವನ್ನು ಕಲ್ಪಿಸಿಕೊಟ್ಟಿದ್ದೇವೆ. ಅಷ್ಟೇ ಅಲ್ಲ ಇನ್ನಿತರ ಅನುಕೂಲತೆಗಳಾದ ಓಲ್ಡ್ ಏಜ್‌ಪೆನ್‌ಷನ್ ಆಗಿರಬಹುದು, ಒಂದು ಕುಟುಂಬಕ್ಕೆ ಸಕಲ ರೀತಿಯಲ್ಲಿ ಅನುಕೂಲತೆಗಳನ್ನು ಮಾಡಿ ಕೊಟ್ಟು ಅವರ ಕಲ್ಯಾಣವನ್ನು ಮತ್ತು ಅವರ ಏಳಿಗೆಯನ್ನು ಬಯಸುವ ಕಾರ್ಯಕ್ರಮ ಆಗಿರಬಹುದು ಉದ್ಯೋಗ ಕಲ್ಪಿಸಿಕೊಡುವುದಾಗಿರಬಹುದು ಈ ರೀತಿ ೫೩ ಸಾವಿರ ಜನರಿಗೆ ಅನುಕೂಲತೆಗಳನ್ನು ಒದಗಿಸಿಕೊಟ್ಟಿದ್ದೇವೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಅಂತ್ಯೋದಯ ಸ್ಕೀಮ್‌ಗೆ ಎಷ್ಟು ಹಣವನ್ನು ಇಟ್ಟಿದ್ದೀರಿ ? ಈ ಯೋಜನೆಯಲ್ಲಿ ೫೨ ಸಾವಿರ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳಿ ೫೦ ಸಾವಿರ ಜನರಿಗೆ ಅನುಕೂಲವನ್ನು ಮಾಡುವುದಕ್ಕೆ ಆಗುತ್ತದೆಯೇ ?

ಶ್ರೀ ಬಿ. ಆರ್. ಯಾವಗಲ್.—ಈ ಯೋಜನೆಯು ೧೯೮೩-೮೪ರಲ್ಲಿ ಕಾರ್ಯಗತವಾಯಿತು. ೧೯೮೩-೮೪ರಲ್ಲಿ ಈ ಯೋಜನೆಯಲ್ಲಿ ೬೩ ಲಕ್ಷ ೩೮ ಸಾವಿರ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಇದರಿಂದ ೭,೬೩೮ ಕುಟುಂಬಗಳಿಗೆ ಸಹಾಯವಾಗಿದೆ. ೧೯೮೪-೮೫ ರಲ್ಲಿ ೨೦೩ ೯೭ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇದರಿಂದ ೭೯ ಸಾವಿರದ ೮೨೯ ಜನಕ್ಕೆ ಸಹಾಯವಾಗಿದೆ.

ಮಾನ್ಯ ಅಧ್ಯಕ್ಷರೆ, ೧೯೮೫-೮೬ ರಲ್ಲಿ ನಾವು ಸುಮಾರು ೧೧ ಸಾವಿರಕ್ಕಿಂತಲೂ ಹೆಚ್ಚು ಜನರಿಗೆ ಸಹಾಯ ಮಾಡಿದ್ದೇವೆ. ಈ ಅಂತ್ಯೋದಯದಿಂದ ಇದು ಸಾಧ್ಯವಾಗಿದೆ. ೮೫-೮೬ ರಲ್ಲಿ ಒಟ್ಟು ೧೧,೫೬೩ ಜನರಿಗೆ ಸಹಾಯ ಮಾಡಿದ್ದೇವೆ. ೧೨.೧ ಕೋಟಿ ೨೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅಲ್ಲದೆ, ಬಹಳ ಮುಖ್ಯವಾಗಿ ೨-೩ ವರ್ಷಗಳಿಂದ ಬಹಳ ದೊಡ್ಡ ಪ್ರಮಾಣದಲ್ಲಿ ಇದರಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಕಡಿಮೆ ಬೆಲೆಗೆ ಈ ರಿಗ್‌ಗಳನ್ನು ಪಡೆಯಲು ಸಾಧ್ಯವಿದ್ದರೂ ನೀವು ಹೆಚ್ಚು ಹಣ ಕೊಟ್ಟು ಪಡೆಯುತ್ತಿದ್ದೀರಿ ಮತ್ತು ಏಕೆ ಇದನ್ನು ಕೇಂದ್ರೀಕೃತ ಮಾಡಿದ್ದೀರೆಂದು ಹೇಳುತ್ತಿದ್ದಾರೆ. ಹೋದ ಸಲ ಮಾನ್ಯ ಸಚಿವರು ಹೇಳಿದರು. ಆ ರೀತಿ ಕಡಿಮೆ ದರದಲ್ಲಿ ಬರುವಂತಹ ಯಾವುದಾದರೂ ರಿಗ್‌ಗಳಿದ್ದರೆ ಅವರನ್ನು ದಯವಿಟ್ಟು ಕಳಿಸಿ. ನಾವು ಒಂದು ದಿನವೂ ಖಾಲಿ ಇಲ್ಲದೇ ಇರುವಂತಹ ರೀತಿಯಲ್ಲಿ ಕೆಲಸವನ್ನು ಕೊಡುತ್ತೇವೆಂದು ಹೇಳುತ್ತಿದ್ದೇನೆ. ನಿಮ್ಮ ಹತ್ತಿರ ಎಷ್ಟು ಇದೆಯೋ, ಅಷ್ಟೂ ನಮಗೆ ಬೇಕು. ಅದಕ್ಕೆ ಒಂದು ವಿಧಿವಿಧಾನ ಇದೆ. ಈಗ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಾಣಾಭಿವೃದ್ಧಿ ಸಚಿವರು) – ಮಾನ್ಯ ಅಧ್ಯಕ್ಷರೆ, ರಿಗ್‌ಗಳಲ್ಲಿ ಕೆಲಸ ಮಾಡತಕ್ಕಂಥಾದ್ದು ಬರೀ ಖಾಸಗಿಯವರೇ ಅಲ್ಲ. ನಮ್ಮಲ್ಲೂ ಕೂಡ ೭೦ ರಿಗ್‌ಗಳಿವೆ. ಅದಕ್ಕೆ ಒಂದು ಶೆಡ್ಯೂಲ್ಡ್ ರೇಟ್ ಎಂದು ಮಾಡಿದ್ದೇವೆ. ನಮ್ಮಲ್ಲಿರತಕ್ಕಂತಹ ಸರ್ಕಾರಿ ರಿಗ್ ಒಂದು ಅಡಿಗೆ ಎಷ್ಟು ಖರ್ಚಾಗಬಹುದೆಂದು ಲೆಕ್ಕಹಾಕಿ ಅದರ ಪ್ರಕಾರ, ೧೯೫ ರೂಪಾಯಿ ಪರ್ ಮೀಟರ್‌ಗೆ ಕೆಲಸ ಮಾಡಿದರೆ, ನಮಗೆ ವೆಚ್ಚ ಬರುತ್ತದೆ. ಅದನ್ನು ಲೆಕ್ಕಹಾಕಿ ನಾವು ಷೆಡ್ಯೂಲ್ ರೇಟ್ ಎಂದು ಫಿಕ್ಸ್ ಮಾಡಿಕೊಂಡು ಈಗ ಅದನ್ನು ೧೭೫ ರೂಪಾಯಿ ಎಂದು ಮಾಡಿದ್ದೇವೆ. ಇಡೀ ದೇಶದಲ್ಲೆಲ್ಲಾ ಮಹಾರಾಷ್ಟ್ರ, ತಮಿಳುನಾಡು ಹಾಗೂ ಆಂಧ್ರಪ್ರದೇಶ ಈ ಎಲ್ಲಾ ಕಡೆ ಈ ಷೆಡ್ಯೂಲ್ ರೇಟ್ ಪ್ರಕಾರ ಕೆಲಸಕೊಡುವ ಪದ್ಧತಿ ಇದೆ. ಎಲ್ಲಾ ಕಡೆಗಳಿಗಿಂತಲೂ ನಾವು ಕಡಿಮೆ ರೇಟ್ ಇಟ್ಟಿದ್ದೇವೆ. ಆದರೂ ಕೂಡ ಕೆಲಸವನ್ನು ನಾವು ಮಾಡುತ್ತಿದ್ದೇವೆ. ೪೦ ರೂಪಾಯಿಗೆ ನಾವು ಕೆಲಸ ಮಾಡುತ್ತಿದ್ದೇವೆ ನೀವು ಮೀಟರ್‌ಗೆ ೬೦ ರೂಪಾಯಿಗಳನ್ನು ಏಕೆ ಕೊಡುತ್ತೀರೆಂಬ ಅವರ ಸಂಶಯವಿದೆ. ಸ್ವಾಮಿ ಈ ಮನೆಕಟ್ಟುವುದಾದರೆ ಪಿಡಬ್ಲ್ಯುಡಿಯವರು ಒಂದು ಚದರ ಮೀಟರ್‌ಗೆ ಒಂದು ಷೆಡ್ಯೂಲ್ ರೇಟ್ ೧೦ ಸಾವಿರ ರೂಪಾಯಿ ಎಂದು ಹೇಳುತ್ತಾರೆ. ನಾನೇ ಮನೆ ಮಾಡುತ್ತೇವೆಂದು ಹೇಳಿದರೆ, ೫ ಸಾವಿರಕ್ಕೆ ಮಾಡಬಹುದು ೬ ಸಾವಿರಕ್ಕೂ ಮಾಡಬಹುದು ಇದೇ ರೀತಿ ಸಮಗ್ರವಾಗಿ ನಾವು ಮಾಡುವುದಕ್ಕಾಗುವುದಿಲ್ಲ ಆದರೆ ದೇಶದಲ್ಲಿ ಎಲ್ಲಾ ರಾಜ್ಯಗಳಿಗಿಂತ ಈ ರಾಜ್ಯದಲ್ಲಿ ಕಡಿಮೆ ಇದೆ. ತಮ್ಮ ಮುಖಾಂತರ ನಾನು ಈ ಸದನದಲ್ಲಿ ಭರವಸೆ ಕೊಡುತ್ತಿದ್ದೇನೆ. ಒಂದು ಅಡಿಗೆ ೪೦ ರೂಪಾಯಿಗೆ ಅಥವಾ ೫೦ ರೂಪಾಯಿಗಿಂತ ಕಡಿಮೆ ಕೆಲಸ ಮಾಡುವವರು ಇದ್ದರೆ ಮತ್ತು ಅಷ್ಟು ಕಡಿಮೆಯಲ್ಲಿ ಕೆಲಸ ಮಾಡತಕ್ಕಂತಹ ಜನರನ್ನು ತಾವು ಕಳುಹಿಸಿಕೊಟ್ಟರೆ, ಅವರಿಗೆ ನಾವು ಕೆಲಸ ಒದಗಿಸುತ್ತೇವೆಂದು ಆಶ್ವಾಸನೆ ಕೊಡುತ್ತಿದ್ದೇನೆ.

ಎಷ್ಟು ರಿಗ್‌ಗಳನ್ನು ಕಳುಹಿಸುತ್ತೀರೋ ಅಷ್ಟು ರಿಗ್‌ಗಳಿಗೆ ಕೆಲಸ ಕೊಡುತ್ತೇವೆ ಅವರನ್ನು ಕಳುಹಿಸಿರಿ. ನಾನು ಅದಕ್ಕೆ ಕೆಲಸ ಕೊಡುತ್ತೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೆ, ನೀವು ಒಳ್ಳೆಯ ರೇಟ್ ಫಿಕ್ಸ್ ಮಾಡಿದ್ದೇವೆಂದು ಹೇಳುತ್ತಿದ್ದೀರಿ. ಅದನ್ನು ಕೊಟೇಶನ್ ಮೂಲಕ ಏಕೆ ತೆಗೆದುಕೊಳ್ಳಲಿಲ್ಲ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಸ್ವಾಮಿ, ಕೊಟೇಶನ್ ಕರೆಯುವುದಕ್ಕೆ ಬರುವುದಿಲ್ಲ. ಈಗ ಒಬ್ಬ ಒಂದು ರಿಗ್ ಇರುವವನು ಇರುತ್ತಾನೆ ೧೦ ರಿಗ್ ಇರುವವನು ಇರುತ್ತಾನೆ ನನಗೆ ೧೦ ಸಾವಿರ ಬೋರ್‌ವೆಲ್ ಆಗಬೇಕು. ಅವನು ಕೊಟೇಶನ್ ಕೊಡುತ್ತಾನೆ, ೧೬೦ಕ್ಕೆ ಮಾಡುತ್ತೇನೆ ಎಂದು. ಆದರೆ, ಆಡಳಿತಾತ್ಮಕವಾಗಿ ಎಲ್ಲಾ ಕಡೆ ಕೊಟೇಶನ್ ಕರೆದೇ ಮಾಡುವುದಿಲ್ಲ. ಇಡೀ ಭಾರತದಲ್ಲಿ ರಾಜಸ್ಥಾನದಲ್ಲಿ ಒಂದು ಸಲ ಮಾಡಿದರು, ಈಗ ಅವರೂ ಅದನ್ನು ಬಿಟ್ಟರು. ಇವತ್ತು ದೇಶದಲ್ಲಿ ಈ ಪದ್ಧತಿ ಎಲ್ಲೂ ಇಲ್ಲ. ಇಲ್ಲಿ ತೊಂದರೆಯಿದೆ. ಈಗ ನಮಗೆ ೭ ಸಾವಿರಕ್ಕೂ ಹೆಚ್ಚು ಬಾವಿಗಳು ಬೇಕು. ನಮಗೆ ಒಂದು ರಿಗ್ ಇರುವವರು ಅರ್ಜಿ ಹಾಕುತ್ತಾರೆ. ೨ ರಿಗ್ ಇರುವವನೂ ಅರ್ಜಿ ಹಾಕುತ್ತಾನೆ. ಹಾಗೆಯೇ ೧೦ ರಿಗ್ ಇರುವವನೂ ಅರ್ಜಿ ಹಾಕುತ್ತಾನೆ. ಆದರೆ, ೧೦ ಸಾವಿರ ಬಾವಿಗಳನ್ನು ನಾನು ೧ ರಿಗ್ಸ್ ಅಥವಾ ೨ ರಿಗ್ಸ್ ಇರುವವನಿಗೆ ವಹಿಸುವುದಕ್ಕೆ ಆಗುತ್ತದೆಯೇ ? ಟೆಂಡರ್ ಪ್ರಕಾರ ಮಾಡಬೇಕೆಂದು ತಾವು ಹೇಳುತ್ತೀರಿ, ಆಡಳಿತಾತ್ಮಕವಾಗಿ ಇದನ್ನು ಯೋಚನೆ ಮಾಡಿ. ಮಾಡಿದ್ದೇನೆ ಎಷ್ಟು ಕಡಿಮೆ ರಿಗ್‌ನ್ನು ತಾವು ಕಳುಹಿಸುತ್ತೀರೋ, ಅಷ್ಟಕ್ಕೂ ಕೆಲಸ ಕೊಡುವುದಕ್ಕೆ ನಾನು ಈ ಸಂದರ್ಭದಲ್ಲಿ ಈ ಸದನದಲ್ಲಿ ಆಶ್ವಾಸನೆ ಕೊಡುತ್ತಿದ್ದೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೆ, ತುಮಕೂರಿನಲ್ಲಿ ಒಂದು ೩೦–೧೫ ಹಾಗೆಯೇ ರಸ್ತೆಗಳಲ್ಲಿ ನಿಂತಿದ್ದಾವೆ. ಅದಲ್ಲ ನಾನು ಹೇಳುತ್ತಿರುವುದು. ಹಿಂದಿನ ಸರ್ಕಾರ ಇದ್ದಾಗ ಪ್ರೈವೇಟ್‌ನವರನ್ನು ಬೋರ್‌ವೆಲ್‌ಗಳನ್ನು ಮಾಡಲು ಎಂಗೇಜ್ ಮಾಡಿಕೊಂಡಿದ್ದರು. ಅವರು ೪೦–೪೫ ರೂಪಾಯಿ ಕೊಡುತ್ತಿದ್ದರು, ೬೨ ರೂಪಾಯಿ ಪರ್ ಫೀಟ್ ಕೊಟ್ಟಿಲ್ಲ ಇದರಿಂದ ಸರ್ಕಾರಕ್ಕೆ ನಷ್ಟವಾಗುತ್ತಿದೆ ಇಲ್ಲಿ ಯಾವ ರೀತಿಯಲ್ಲಿ ಭ್ರಷ್ಟಾಚಾರವಾಗುತ್ತಿದೆಯೋ ನನಗೆ ಗೊತ್ತಿಲ್ಲ. ಆದರೆ ನಷ್ಟವಾಗುತ್ತಿದೆ ಎಂಬುದನ್ನು ಮಾತ್ರ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಅಧ್ಯಕ್ಷರೆ, ಬೋರ್‌ವೆಲ್‌ಗೆ ಕೇಸಿಂಗ್ ಪೈಪ್ ಬೇಕು. ಆ ರೇಟ್ ಇಳಿಸುವುದು ನನ್ನ ಕೈಲಿಲ್ಲ. ಬೆಲೆಗಳು ಏರುತ್ತಿವೆ. ಹಿಂದಿನ ಸರ್ಕಾರದಲ್ಲೂ ಟೆಂಡರ್ ಕರೆದು ಕೊಟ್ಟಿಲ್ಲ ಬೇಕಾದರೆ ನಾನು ಮಾಹಿತಿ ಒದಗಿಸುತ್ತೇನೆ. ಆಗಲೂ ಷೆಡ್ಯೂಲ್ ರೇಟ್ ಪ್ರಕಾರ ಮಾಡುತ್ತಿದ್ದರು. ೧೯೮೦ರಲ್ಲಿ ೬ ಸಾವಿರಕ್ಕೆ ಒಂದು ಶಾಲಾ ಕೊಠಡಿ ಕಟ್ಟಬಹುದಿತ್ತು. ಈಗ ನೀವೇ ಹೇಳುತ್ತೀರಿ. ೨೦ಕ್ಕೆ ಏರಿಸಿ ಎಂದು. ಏಕೆಂದರೆ ಇವತ್ತು ಷೆಡ್ಯೂಲ್ ರೇಟ್ ೩೦–೩೫ ಸಾವಿರ ಆಗಿದೆ ಎಂದು. ಬೆಲೆಗಳು ಏರುವುದನ್ನು ತಡೆಯಲು ನನ್ನ ಕೈಯಲ್ಲಿ ಇಲ್ಲ.

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೆ, ಇದು ನನ್ನ ನಿಮ್ಮ ವ್ಯವಹಾರವಲ್ಲ. ಸರ್ಕಾರದ ವ್ಯವಹಾರ. ಸ್ವಾಮಿ, ಇಲ್ಲಿ ನಾನು ಅಧಿಕಾರ ನಡೆಸುತ್ತಿಲ್ಲ ನಜೀರಸಾಬ್‌ರವರು ನಡೆಸುತ್ತಿದ್ದಾರೆ. ನೀವು ಒಂದು ಪ್ರಕಟಣೆ ಹೊರಡಿಸಿ. ಅದು ಬಿಟ್ಟು ಬೇರೆ ಹೇಳಿ

ಶ್ರೀ ಅಬ್ದುಲ್ ನಜೀರ್ ಸಾಬ್.—ಸ್ವಾಮಿ, ನಾನು ಪ್ರಕಟಣೆ ಹೊರಡಿಸುವುದಕ್ಕೆ ಆಗುವುದಿಲ್ಲ. ಪ್ರಕಟಣೆ ಜಗಜ್ಜಾಹೀರಾಗಿದೆ, ಷೆಡ್ಯೂಲ್ ರೇಟ್‌ನಲ್ಲಿ ಯಾರೇ ಬಂದರೂ ಕೆಲಸ ಕೊಡುವುದು ನನ್ನ ಕರ್ತವ್ಯ. ಇದು ಸರ್ಕಾರದ ಆಡಳಿತಾತ್ಮಕವಾದ ನಿರ್ಧಾರ. ಒಬ್ಬ ೪೦ಕ್ಕೆ ಮಾಡುತ್ತಾನೆ, ಒಬ್ಬ ೫೦ಕ್ಕೆ ಮಾಡುತ್ತಾನೆ ಎಂದು ಮಾಡಿಸುವುದಕ್ಕಾಗುವುದಿಲ್ಲ. ಇದಕ್ಕೆ ಕೆಲವು ನಿಯಮಗಳಿವೆ. ಸರ್ಕಾರ ನಡೆಯಬೇಕಾದರೆ ಕೆಲವು ನಿಯಮಾವಳಿಗಳಿವೆ.

ಅದರ ಪ್ರಕಾರ ನಾವು ಹೋಗಬೇಕಾಗುತ್ತದೆ. ಅದರ ಪ್ರಕಾರ ಯಾರೇ ಬಂದರೂ ಕೆಲಸ ಕೊಡುತ್ತೇವೆ. ಷೆಡ್ಯೂಲ್ ರೇಟ್ ತಯಾರು ಮಾಡಿದ್ದೇವೆ ಆ ಪ್ರಕಾರ ಕೊಡುತ್ತೇವೆ ಕಡಿಮೆ ರೇಟ್ ಕೊಡುತ್ತಿದ್ದೀರಿ ಎಂದು ಆರೋಪನೆ ಮಾಡತಕ್ಕಂತಹ ಜವಾಬ್ದಾರಿ ಇರುವವರು ನೀವು, ಇದರ ಜವಾಬ್ದಾರಿಯನ್ನೂ ವಹಿಸಿಕೊಳ್ಳಿ. ಆಗ ನೋಡುತ್ತೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಸ್ವಾಮಿ, ಈ ಛಾಲೆಂಜ್ ಬೇಡ. ನಾನು ಅದನ್ನು ತೆಗೆದು ಕೊಳ್ಳುತ್ತೇನೆ......

ಶ್ರೀ ಅಬ್ದುಲ್ ನಜೀರ್ ಸಾಬ್.—ಸಾರ್ವತ್ರಿಕವಾಗಿ ಅಲ್ಲ ಸ್ವಾಮಿ. ಈಗ. ...

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೆ, ನನಗೆ ಗೊತ್ತಿದೆ. ಷೆಡ್ಯೂಲ್ ರೇಟಿನ ಪ್ರಕಾರ ೩ ಲಕ್ಷದ ಒಂದು ಕೆರೆಯ ಕೆಲಸಕ್ಕೆ ಟೆಂಡರ್ ಕರೆದಾಗ ಅವನು ೧೨ ಪರ್ಸೆಂಟ್ ಅಥವಾ ೧೪ ಪರ್ಸೆಂಟ್ ಕಡಿಮೆ ಕೊಡುತ್ತಾನೆಂದಾಗ ಅವನಿಗೆ ಟೆಂಡರ್ ಕೊಡುತ್ತೀರಿ. ಅದೇ ರೀತಿ ಷೆಡ್ಯೂಲ್ ರೇಟಿನಲ್ಲಿ ಟೆಂಡರ್ ಕರೆಯಿರಿ ಕಡಿಮೆಯಲ್ಲಿ ಮಾಡುವವರು ಬರುತ್ತಾರೆ ಅವರಿಗೆ ಕೊಡಿ. ಏನು ಸ್ವಾಮಿ, ನಮಗೆ ನೀರಿಲ್ಲ ಎಂದು ಆರು ತಿಂಗಳಿಂದ ಬಡಕೊಳ್ಳುತ್ತಿದ್ದರೂ ಒಂದ ರಿಗ್ ನಮ್ಮಲ್ಲಿ ಕಳಿಸಿ ಕೆಲಸವಾಗಿಲ್ಲ ತುಮಕೂರಿನಲ್ಲಿ ೩-೪ ರಿಗ್‌ಗಳು ಕೆಲಸವಿಲ್ಲದೇ ನಿಂತಿವೆ. ೧೦-೧೫ ಹಳ್ಳಿಗಳಿಗೆ ಇವತ್ತಿನ ದಿವಸ, ಕುಡಿಯುವುದಕ್ಕೂ ನೀರಿಲ್ಲ. ನೀವು ಅಲ್ಲಿನ ಜಿಲ್ಲಾಧಿಕಾರಿಗಳಿಗೆ ಇದನ್ನು ಕೊಡಿ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೆ, ಇದು ತಮಗೆ ಗೊತ್ತಿದೆ. ಯಾವ ಕ್ಷೇತ್ರ ದಲ್ಲಿ ಕೆಲಸ ಆಗಬೇಕು ಹೇಳಿ ಶಾಸಕರು ಹೇಳತಕ್ಕಂತಹ ಕೆಲಸ ಅದು ನಾರಮ್ಸ್ ಪ್ರಕಾರ ಇರಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ್ದು ಏನೆಂದರೆ, ತಾವು ಏನು ಷೆಡ್ಯೂಲ್ ರೇಟ್ ಫಿಕ್ಸ್ ಮಾಡಿದ್ದೀರಿ, ಅದನ್ನು ತಾವು ಇಲ್ಲಿ ಕೇಂದ್ರೀಕೃತ ಮಾಡುವ ಬದಲು ಅದನ್ನು ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಡಿ. ಏಕೆಂದರೆ, ತಾವು ಸದುದ್ದೇಶದಿಂದ ಮಾಡಿರ ಬಹುದು. ಆದರೆ, ಅಲ್ಲಿ ದಾರಿಯಲ್ಲಿ ಕಾದು ನಿಂತಿವೆ. ಇಲ್ಲಿಂದ ಆರ್ಡರ್ ಬರುವುದಕ್ಕೆ ಬಹಳ ಸಮಯ ಹಿಡಿಯುತ್ತದೆ, ಅಲ್ಲಿ ಕೆಲಸ ನಿಂತುಹೋಗುತ್ತದೆ. ತಮಗೆ ಗೊತ್ತಿರಬಹುದು. ಅಲ್ಲಿ ೨-೩ ತಿಂಗಳು ಏನೂ ಕೆಲಸವೇ ಆಗಿಲ್ಲ. ಅದಕ್ಕೆ ಇದನ್ನು ಡಿಸಿಗಳಿಗೆ ಕೊಡಿ. ಇದರಿಂದ ತಮ್ಮ ಕೆಲಸವೂ ಸುಲಭ ವಾಗುತ್ತದೆ. ಮತ್ತು ಇಂತಹ ಆರೋಪಗಳಿಗೂ ಅವಕಾಶವಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ಇದು ಮುಂದೆ ಬರತಕ್ಕ ಜಿಲ್ಲಾ ಪರಿಷತ್‌ಗೆ ಅಧಿಕಾರ ಇದೆ. ಡಿಸಿಗಳಿಗೆ ಏಕೆ ಕೊಡುವುದಕ್ಕೆ ಆಗುವುದಿಲ್ಲ ಏಕೆಂದರೆ, ಕೇಂದ್ರದ ನಾರಮ್ಸ್ ಇದೆ. ಇಲ್ಲಿ ಸೆಂಟ್ರಲ್ ಸೆಕ್ಟಾರ್ ಇದೆ. ಅದರ ಪ್ರಕಾರ ನಾವು ಕೆಲಸ ಮಾಡ ಬೇಕಾಗುತ್ತದೆ. ಈಗ ಡಿಪಿಎಸ್ ಇದೆ, ಜನತಾ ಸೆಕ್ಟಾರ್ ಇದೆ, ಡ್ಯಾನಿಡಾ ಇದೆ, ಯೂನಿಸೆಫ್ ಇವೆ. ಇವಕ್ಕೆಲ್ಲಾ ನಿಯಮಗಳಿವೆ ಈ ನಿಯಮಗಳ ಪ್ರಕಾರ ನಾವು ಕೆಲಸ ಮಾಡಬೇಕಾಗುತ್ತದೆ. ಉದಾಹರಣೆಗೆ ಜಿಲ್ಲಾಧಿಕಾರಿಗಳು ಹೇಳುತ್ತಾರೆ. ಯಾವುದೇ ಒಂದು ಊರಿನಲ್ಲಿ ನಾಲ್ಕು ಬೋರ್‌ವೆಲ್ಸ್ ಇವೆ. ಆದರೆ ಅಲ್ಲಿ ಐದನೇ ಬೋರ್‌ವೆಲ್ಲನ್ನು ಕೊಡುವ ಅಧಿಕಾರ ಈ ನಾರ್ಮ್ಸ್ ಪ್ರಕಾರ ನಮಗೆ ಇಲ್ಲ. ಆಗಿರತಕ್ಕಂತಹ ವ್ಯವಹಾರ ನಾನು ಹೋಗಿ ನೋಡಿದ್ದೇನೆ. ಪರಿಸ್ಥಿತಿ ಹೀಗೆ ಇದೆ ನಾವು ನಾರ್ಮ್ಸ್ ಪ್ರಕಾರ ಮಾಡಬೇಕಾಗುತ್ತದೆ, ಬೇಕಾದ ಹಾಗೆ ಮಾಡುವುದಕ್ಕಾಗುವುದಿಲ್ಲ. ಬೋರ್ ಹಾಕುವುದು ಎಂದರೆ ಅದಕ್ಕೆ ಬೇಕಾಗಿರುವುದು ಕೇವಲ ರಿಗ್ ಮಾತ್ರವಲ್ಲ ಅದಕ್ಕೆ ಬೇಕಾಗಿರತಕ್ಕಂತಹ ಕೇಸಿಂಗ್ ಪೈಪು ಒದಗಿಸಬೇಕು. ಪಂಪು ಮತ್ತಿತರ ಸಲಕರಣೆಗಳೂ ಬೇಕು. ಈ ಎಲ್ಲಾ ಬೇಕಾದಂತಹ ಸಲಕರಣೆಗಳನ್ನು ಕೇಂದ್ರೀಕೃತ ವ್ಯವಸ್ಥೆಯಿಂದ ಮಾಡಿದರೆ ಮಾತ್ರ ಸಾಧ್ಯ ನಿಯಮಂದ ಪ್ರಕಾರ ವ್ಯವಸ್ಥಿತ ವಾಗಿ ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ತಮಗೆ ಗೊತ್ತಿದೆ ಬಹಳ ಸಮಯ ಬೇಕಾಗು ತ್ತದೆ. ನಾವು ರೂಲ್ಸ್ ಪ್ರಕಾರ ಕೆಲಸ ಮಾಡಬೇಕಾಗುತ್ತದೆ. ಆದುದರಿಂದ ಇವೊತ್ತು ಎಲ್ಲವೂ ಜಿಲ್ಲಾಧಿಕಾರಿಗಳಿಗೆ ಕೊಡಬೇಕು. ಅಂದರೆ ದುಡ್ಡು ಬೇಕಾಗುತ್ತದೆ ಒಂದು ವೇಳೆ ಎಲ್ಲವೂ ನಾರ್ಮ್ಸ್ ಒಳಗೆ ಇದ್ದರೂ ೪೮ ಗಂಟೆಗಳೊಳಗಾಗಿ ರಿಗ್ ಮೂವ್ ಆಗುತ್ತದೆ. ರಿಗ್‌ಗಳ ಸಮಸ್ಯೆ ಎಲ್ಲಿಯೂ ಇಲ್ಲ. ರೇಟ್ ಕಡಿಮೆಗೆ ಮಾಡುತ್ತಾರೆ ಎಂದರೆ, ನೀವು ಅಂತಹವರನ್ನು ನಮ್ಮಲ್ಲಿಗೆ ಕಳುಹಿಸಿಕೊಡಿ ನಾನು ಕೆಲಸ ಕೊಡಿಸುತ್ತೇನೆ.

ಶ್ರೀ ಬಿ. ಜಿ ಕೊಟ್ರಪ್ಪ.—ಮಾನ್ಯ ಸದಸ್ಯರು ಹೇಳುವ ದರಕ್ಕೆ ಯಾರಾದರೂ ಸಾಲ ತೀರಿಸಲಿಕ್ಕೆ ಕಂತಿನ ಹಣವನ್ನು ತುಂಬಲಿಕ್ಕೋಸ್ಕರವಾಗಿ ಕಡಿಮೆ ರೇಟನಲ್ಲಿ ಹಣದಲ್ಲಿ ಮಾಡುತ್ತಿರ ಬಹುದು.

ಶ್ರೀ ಬಿ. ಆರ್. ಯಾವಗಲ್.—ಮಾನ್ಯ ಶಿವನಂಜಪ್ಪನವರು ಎತ್ತಿದ ಅಂಶದ ಬಗ್ಗೆ ಇನ್ನೊಂದು

ಮಾತನ್ನು ಹೇಳಬಯಸುತ್ತೇನೆ. ಅವರು ರೇಟಿನ ವಿಚಾರದಲ್ಲಿ ಹೇಳಿದ್ದಾರೆ. ನಮ್ಮ ಕರ್ನಾಟಕದಲ್ಲಿ ಮೀಟರ್‌ಗೆ ೧೫ ರೂಪಾಯಿಗಳು, ಆಂಧ್ರ ಪ್ರದೇಶದಲ್ಲಿ, ೨೨೦, ಇದೆ, ಮಹಾರಾಷ್ಟ್ರದಲ್ಲಿ ೧೯೫ ರೂಪಾಯಿಗಳು ಇದೆ. ಅಲ್ಲದೆ ಮಧ್ಯಪ್ರದೇಶದಲ್ಲಿ ನಾಲ್ಕುವರೆ ಡಯಾಮೀಟರ್ ಅದಕ್ಕೆ ೨೨೦ ರಿಂದ ೨೪೦ ರೂಪಾಯಿಗಳು ಇವೆ. ಆದುದರಿಂದ ನಮ್ಮಲ್ಲಿನ ರೇಟು ಬೇರೆ ರಾಜ್ಯಗಳಿಗೆ ಹೋಲಿಸಿ ನೋಡಿದಾಗ ಅಷ್ಟು ಹೆಚ್ಚಿಗೆ ಅಲ್ಲ.

ಶ್ರೀ ಜಿ. ಎಸ್. ಶಿವನಂಜಪ್ಪ.—ಅಧ್ಯಕ್ಷರೆ. ನಾನು ಕೇಳಿದ್ದು ಒಂದಾದರೆ, ಮಂತ್ರಿಯವರು ಬೇರೆ ಏನನ್ನೋ ಹೇಳುತ್ತಿದ್ದಾರೆ.

ಉಪಾಧ್ಯಕ್ಷರು.—ತಾವು ಆಮೇಲೆ ಅವರ ಹತ್ತಿರ ಕೇಳಿಕೊಳ್ಳಬಹುದು.

ಶ್ರೀ ಜಿ. ಎಸ್. ಶಿವನಂಜಪ್ಪ.—ನೀವು ಎಷ್ಟು ಕೆಲಸಗಳನ್ನು ಮಾಡಿದ್ದೀರಿ ಎಂದು ನಾನು ಕೇಳಿದ್ದೇನೆ.

ಶ್ರೀ ಬಿ. ಆರ್. ಯಾವಗಲ್.—ವಾಸ್ತವವಾದ ಚಿತ್ರವನ್ನು ಕೊಡುವುದಾದರೆ, ಆ ಊರಿನಲ್ಲಿ ಆರು ಕೆಲಸಗಳನ್ನು ತೆಗೆದುಕೊಂಡಿದ್ದೇವೆ. ೧ ಲಕ್ಷದ ೫ ಸಾವಿರ ರೂಪಾಯಿಗಳ ಕಾರ್ಯಕ್ರಮ ಅಲ್ಲಿ ನಡೆಯುತ್ತಾ ಇದೆ. ಕೇಂದ್ರೀಕೃತವಾದುದರ ಬಗ್ಗೆ ಹೇಳಿದರು. ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟು, ಪ್ಲಾನಿಂಗ್ ಅಧಿಕಾರವನ್ನು ಕೊಟ್ಟು ಮಾಡುವಂತಹ ಒಂದು ಪತ್ರವನ್ನು ಮುಖ್ಯ ಅಭಿಯಂತರಿಗೆ ಬರೆದಂತಹದ್ದನ್ನು ಬೇಕಾದರೆ ತಮಗೆ ಕಳುಹಿಸಿಕೊಡುತ್ತೇನೆ. ಜಿಲ್ಲಾಧಿಕಾರಿಗಳಿಗೆ ನಿರ್ಧಾರ ಮಾಡುವಂತಹ ಅಧಿಕಾರವನ್ನು ಕೊಟ್ಟಿದ್ದೇವೆ.

ಇನ್ನು ಹೆಣ್ಣುಮಕ್ಕಳಿಗೆ ಹೆಚ್ಚಿನ ಪ್ರಮಾಣದಲ್ಲಿ ಪ್ರಾಶಸ್ತ್ಯವನ್ನು ಕೊಡಬೇಕೆಂದು ಸೂಚನೆ ಮಾಡಿದ್ದಾರೆ. ಐ.ಆರ್.ಡಿ.ಪಿ.ನಲ್ಲಿ ನಾವು ಈಗಾಗಲೇ ನಿರ್ಧಾರವನ್ನು ಮಾಡಿದ್ದೇವೆ, ೩೦ ಪರ್ಸೆಂಟ್ ನಷ್ಟಾದರೂ ಕೂಡಾ, ಕನಿಷ್ಟಪಕ್ಷ ಹೆಣ್ಣುಮಕ್ಕಳಿಗೆ ಸಹಾಯಧನವನ್ನು ಒದಗಿಸಿಕೊಡಬೇಕೆಂದು ಮಾಡಿದ್ದೇವೆ. ಈಗಾಗಲೇ ಮಹಿಳೆಯರಿಗಾಗಿ ಹಾಕಿಕೊಂಡ ಕಾರ್ಯಕ್ರಮಗಳನ್ವಯ ಬಹಳಷ್ಟು ಮಂಡಳಿಗಳಿಗೆ ಲಾಭವಾಗಿದೆ. ಹಾಗೆಯೇ ಯುವಕರಿಗೆ ಕೆಲಸ ಕೊಡಬೇಕೆಂದು ಹೇಳುತ್ತಾ ಇದ್ದೀರಿ. ಯುವಕರಿಗಾಗಿ ಏನೇನು ಮಾಡಿದ್ದೀರಿ ಎಂದೂ ಕೇಳಿದ್ದೀರಿ. ಚುನಾವಣೆ ಸಂದರ್ಭದಲ್ಲಿ ಏನು ಹೇಳಿದ್ದೀರಿ ಅದರಂತೆ ನಡೆದುಕೊಂಡಿಲ್ಲ ಅದಕ್ಕಾಗಿ ಯುವಕರು ತಮ್ಮ ಪ್ರತಿಭಟನೆಯನ್ನು ಮಾಡಬಹುದು ಎಂದು ಹೇಳಿದ್ದೀರಿ. ಯುವ ಜನರ ಏಳಿಗೆ, ಕಲ್ಯಾಣಕ್ಕೋಸ್ಕರ ನಾವು ಹಲವಾರು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದು, ನಾವು ಆ ವಿಷಯದಲ್ಲಿ ನಿಮಗಿಂತ ಕಡಿಮೆ ಇಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಪ್ರಾಯೋಗಿಕವಾಗಿ ಈ ವರ್ಷ ಐದು ತಾಲ್ಲೂಕುಗಳಲ್ಲಿ ಇರತಕ್ಕಂತಹ ಆರ್ ಇ ಜಿ ಎಸ್ ಯೋಜನೆಯನ್ನು ವರ್ಷವಿಡೀ ಅವರಿಗೆ ಕೆಲಸ ಕೊಡುವ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಅದನ್ನು ಪ್ರಾರಂಭಗೊಳಿಸುತ್ತಿದ್ದೇವೆ.

ಇಷ್ಟು ಹೇಳುತ್ತಾ, ಈ ಎಲ್ಲಾ ರೀತಿಯ ಚರ್ಚೆಗೆ ನಾನು ವಿವರಣೆಯನ್ನು ಕೊಟ್ಟಿದ್ದೇನೆ ಎಂದು ನನ್ನ ಭಾವನೆ. ಈಗ ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ವಕ್ಫ್ ಸಚಿವರು ತಮ್ಮ ಉತ್ತರವನ್ನು ಹೇಳುತ್ತಾರೆ

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೆ......

ಶ್ರೀ ಎಂ. ರಾಮಪ್ಪ.—ನನಗೆ ಒಂದು ವಿವರಣೆ ಬೇಕು. ಸಿ.ಒ.ಡಿ. ತನಿಖೆಗಳು ನಡೆಯುತ್ತಾ ಇವೆಯಲ್ಲ, ನಿಮ್ಮ ಮಂತ್ರಿಯವರ ಕ್ಷೇತ್ರದಲ್ಲಿಯೇ ತನಿಖೆ ನಡೆಯುತ್ತಿರುವಾಗ...

ಶ್ರೀ ಬಿ. ಆರ್. ಯಾವಗಲ್.—ಇವರಿಗೆ ಅಥವಾ ಇತರ ಯಾರಾದರೂ ಮುಖಂಡರಿಗೆ ಸಂಶಯ ಇದ್ದರೆ ಅವರು ನೇರವಾಗಿ ಮಾಡುತ್ತಾ ಇದ್ದರು. ಒಂದು ವೇಳೆ ಇವರಲ್ಲಿ ವೈಯಕ್ತಿಕವಾಗಿ ಇದ್ದರೆ ಕೂಡಲೆ, ಅದಕ್ಕೆ ನಾನೂ ತಯಾರಾಗಿದ್ದೇನೆ.

ಶ್ರೀ ಎಂ. ರಾಮಪ್ಪ.—ಅವರ ಕ್ಷೇತ್ರದಲ್ಲಿಯೂ ಇದೆ ಎಂದು ಹೇಳಿದ್ದಾರೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೆ ಈ ಎರಡೂ ವಿಷಯದ ಬಗ್ಗೆ ಇಲಾಖೆಯಲ್ಲಿ ಚರ್ಚೆ ನಡೆದಾಗ ಮಾನ್ಯ ಸದಸ್ಯರುಗಳು ಈ ವಿಷಯದಲ್ಲಿ ಮಾತನಾಡಿಲ್ಲ, ಅವರೂ ಕೂಡ

ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ವಕ್ಫ್‌ಗೆ ಸಂಬಂಧಪಟ್ಟಂತಹ ವಿಷಯ............

ಶ್ರೀ ಎಂ ಎಸ್. ಪಾಟೀಲ್. – ವಕ್ಫ್ ಬಗ್ಗೆ ಚರ್ಚೆ ಇಲ್ಲ ಎಂದು ತಿಳಿದು ಸಂಬಂಧಪಟ್ಟ ಮಾನ್ಯ ಸದಸ್ಯರುಗಳು ಈಗ ಇಲ್ಲಿ ಇಲ್ಲ. ಅವರು ಅಂದರೆ ನಾಲ್ಕೈದು ಜನ ಸದಸ್ಯರು ಡಿಮಾಂಡ್ ಇಲ್ಲ ಎಂದು ಬಂದಿಲ್ಲ. ಅವರಿಗೆ ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು.—ಡಿಮ್ಯಾಂಡ್ಸ್‌ನಲ್ಲಿ ಇತ್ತಲ್ಲ ಅದು ?

ಶ್ರೀ ಎಂ.ಎಸ್ ಪಾಟೀಲ್.—ಕೇಳಿದಾಗ ಇಲ್ಲವೆಂದು ಹೇಳಿದ್ದರು.

ಶ್ರೀ ಅಬ್ದುಲ್ ನಜೀರ್ ಸಾಬ್.—ಗ್ರಾಮೀಣ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಚರ್ಚೆ ಮಾಡಲಿಲ್ಲ. ಎರಡು ವಿಷಯಗಳು ಚರ್ಚೆ ಆಗಿದೆ. ವಕ್ಫ್ ಇಲಾಖೆಗೆ ಸಂಬಂಧಪಟ್ಟಂತೆ ಸಾಕಷ್ಟು ಕೇಂದ್ರೀಕೃತ ವ್ಯವಸ್ಥೆ ಆಗುತ್ತಾ ಇದೆ. ಎಲ್ಲರೂ ಪಾಲುಗೊಳ್ಳುವಂತಹ ವ್ಯವಸ್ಥೆ ಆಗಬೇಕೆಂದು ನನ್ನ ಉದ್ದೇಶ. ಯಾವುದು ಸರಕಾರದವರು ೫೦ ಲಕ್ಷ ರೂಪಾಯಿಗಳ ಗ್ರಾಂಟ್‌ನ್ನು ಕೊಡುತ್ತಾ ಇದ್ದೇವೆ, ಅದು ಇದು ವರೆಗೂ ಸರಿಯಾಗಿ ಉಪಯೋಗ ಆಗುತ್ತಾ ಇರಲಿಲ್ಲ. ಮೊಟ್ಟಮೊದಲನೇ ಬಾರಿಗೆ ಶಾಸಕರೆಲ್ಲರಿಗೂ ಪತ್ರವನ್ನು ಬರೆದು ಅವರಿಂದ ಸಲಹೆಗಳನ್ನು ಪಡೆದುದಲ್ಲದೆ, ಅವರ ಕ್ಷೇತ್ರದಲ್ಲಿ ಎರಡು ಸಂಸ್ಥೆಗಳನ್ನು ಕೊಟ್ಟರೆ ಅದಕ್ಕೆ ನೆರವು ಕೊಡಬೇಕೆಂದು ನಿರ್ಣಯವನ್ನು ಮಾಡಿದ್ದೇವೆ. ಈ ರೀತಿಯಾಗಿ ಕೊಟ್ಟರು ವವರಿಗೆ ಕೊಟ್ಟಿದ್ದೇವೆ. ಎಲ್ಲಾ ಶಾಸಕರು ಎರಡು ಕಾರ್ಯಕ್ರಮಗಳನು ಕೊಡುತ್ತೇವೆ ಎಂದು ಹೇಳಿದ್ದಾರೆ. ಅದನ್ನು ಮೊದಲನೇ ಸಾರಿಗೆ ಕೊಡುತ್ತೇವೆ. ಈಸಲ ತಪ್ಪಿದವರಿಗೆ ಮುಂದಿನ ಸಾರಿ ಏಪ್ರಿಲ್‌ನಲ್ಲಿ ಕೊಡುತ್ತೇವೆ. ಎರಡನೇಯದಾಗಿ ನೂರಾರು ಕೋಟಿ ರೂಪಾಯಿಗಳ ವಕ್ಫ್ ಆಸ್ತಿ ಪಾಸ್ತಿಗಳು ಬಹಳ ವರ್ಷಗಳಿಂದಲೂ ದುರುಪಯೋಗ ಆಗುತ್ತಾ ಇದೆ. ಇಂತಹ ದುರುಪಯೋಗಗಳ ಸಮಗ್ರ ತನಿಖೆಗಾಗಿ ಒಂದು ನಿರ್ಣಯವನ್ನು ಕೈಗೊಂಡಿದ್ದೇವೆ. ನಾನು ಮಾನ್ಯ ಮಲ್ಲಾರಿಗೌಡ ಪಾಟೀಲ್‌ರವರ ಒಂದು ಪ್ರಶ್ನೆಗೆ ಉತ್ತರ ಕೊಡತಕ್ಕಂತಹ ಸಂದರ್ಭದಲ್ಲಿ ಅದನ್ನು ಪ್ರಕಟಣೆ ಮಾಡಿದ್ದೇವೆ. ಅದಕ್ಕೆ ಒಂದು ತನಿಖಾ ಆಯೋಗವನ್ನು ಮಾಡಬೇಕು, ಕಮಿಶನ್ ಆಫ್ ಎನ್‌ಕ್ವಾಯರಿ ಆಕ್ಟ್ ಪ್ರಕಾರ ತನಿಖಾ ಆಯೋಗವನ್ನು ಮಾಡಬೇಕೆಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಅದಕ್ಕಾಗಿಯೇ ಚೀಫ್ ಜಸ್ಟೀಸ್‌ರವರೊಬ್ಬರ ಒಪ್ಪಿಗೆಯನ್ನು ಪಡೆದುಕೊಳ್ಳುವುದಕ್ಕೆ ಪ್ರಯತ್ನವನ್ನು ಮಾಡುತ್ತಾ ಇದ್ದೇವೆ. ಅವರು ತಮ್ಮ ಒಪ್ಪಿಗೆಯನ್ನು ತಿಳಿಸಿದ ಕೂಡಲೇ ಅದನ್ನು ಮಾಡತಕ್ಕಂತಹ ವ್ಯವಸ್ಥೆಯನ್ನು ಮಾಡುತ್ತೇವೆ. ಹಾಗೆಯೇ ಮೊಟ್ಟಮೊದಲನೆ ಬಾರಿಗೆ ವಕ್ಫ್ ಇಲಾಖೆ ಎನ್ನತಕ್ಕಂಥದ್ದನ್ನು ಅಧಿಕಾರಿಗಳ ವಿಮರ್ಶೆಗೆ ಒಳಪಡತಕ್ಕಂತಹ ಕಾರ್ಯಕ್ರಮವನ್ನು ಮಾಡಿದ್ದೇವೆ. ಡಿವಿಜನಲ್ ಮಟ್ಟದಲ್ಲಿ ಡೆಪ್ಯೂಟಿ ಕಮೀಷನರ್ ಮಟ್ಟದಲ್ಲಿ, ಇನ್ನು ಮುಂದೆ ಜಿಲ್ಲಾಧಿಕಾರಿಗಳು ಯಾವುದೇ ತಾಲ್ಲೂಕಿನ ತಪಾಸಣೆ ಮಾಡಿದಾಗ ಇತರ ಕಾರ್ಯಕ್ರಮಗಳ ಜೊತೆಗೆ ವಕ್ಫ್ ಇಲಾಖೆಯ ತಪಾಸಣೆಯನ್ನು ಮಾಡ ತಕ್ಕಂತದ್ದನ್ನು ಮಾಡಿದ್ದೇವೆ. ಎನ್ ಆರ್ ಇ ಪಿ ಅಡಿಯಲ್ಲಿ ಎಲ್ಲೆಲ್ಲಿ ವಕ್ಫ್ ಆಸ್ತಿಗಳು ಇವೆ, ಅವುಗಳಿಗೆ ಹಂತಹಂತವಾಗಿ ಕಾಂಪೌಂಡ್ ಹಾಕತಕ್ಕಂತಹ ಯೋಜನೆಯನ್ನು ಮಾಡಿದ್ದೇವೆ. ಹಾಗೆಯೇ ಎಲ್ಲೆಲ್ಲಿ ಎನ್‌ಕ್ರೋಚ್‌ಮೆಂಟ್ ಆಗಿದೆ ಅದನ್ನು ಸರಿಪಡಿಸಬೇಕಾಗಿದೆ. ಇದಕ್ಕೆ ಅನೇಕ ಸಮಸ್ಯೆಗಳು ಇದ್ದು, ಅದಕ್ಕೆ ನೇರವಾಗಿ ಸರಕಾರವು ಆದೇಶವನ್ನು ಮಾಡಿ. ಈ ರೆಕಾರ್ಡ್‌ಗಳನ್ನು ಸರಿಯಾಗಿ ಮಾಡ ತಕ್ಕಂತಹ, ಎನ್‌ಕ್ರೋಚ್‌ಮೆಂಟ್‌ಗಳನ್ನು ಸರಿಪಡಿಸತಕ್ಕಂತಹ ಕೆಲಸವನ್ನು ಮಾಡುತ್ತಿದ್ದೇವೆ. ಈ ದಿಶೆಯಲ್ಲಿ ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದೇವೆ. ಅಭಿವೃದ್ಧಿಯ ದೃಷ್ಟಿಯಿಂದ ನಾವು ಈಗಾಗಲೇ ಕೆಲವು ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ವಕ್ಫ್ ಸಂಸ್ಥೆಗಳ ಅಭಿವೃದ್ಧಿಯನ್ನು ಮಾಡುವುದು ಬಹಳ ಕಷ್ಟದ ಪರಿಸ್ಥಿತಿಯಾಗಿದೆ. ಈ ಸಂಸ್ಥೆಯ ಆಸ್ತಿಪಾಸ್ತಿಗಳಲ್ಲಿ ಉಂಟಾಗುವ ಸಂಪನ್ಮೂಲಗಳ ವೃದ್ಧಿಯಲ್ಲಿ ಮತ್ತು ಉತ್ಪಾದನೆಯಲ್ಲಿ ಈ ಜನಾಂಗಕ್ಕೆ ಅನುಕೂಲವಾಗುವ ದೃಷ್ಟಿಯಿಂದ ಸಾಮೂಹಿಕ ವಿದ್ಯೆ ಅಥವಾ ಆರ್ಥಿಕ ಹಿನ್ನೆಲೆಯ ಬಗ್ಗೆ ಗಮನ ಹರಿಸುವ ದೃಷ್ಟಿಯಿಂದ ಒಂದು ಯೋಜನೆಯನ್ನು ಸಿದ್ಧಪಡಿಸಿದ್ದೇವೆ. ಜೊತೆಗೆ ಬೆಂಗಳೂರು ನಗರದಲ್ಲಿರತಕ್ಕಂಥ ವಕ್ಫ್ ಸಂಸ್ಥೆಯ ಖಾಲಿ ನಿವೇಶನಗಳಲ್ಲಿ ಬಡವರಿಗೆ ಅನುಕೂಲವಾಗತಕ್ಕಂಥ ರೀತಿಯಲ್ಲಿ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಒಂದು ಮಾಸ್ಟರ್ ಪ್ಲಾನ್ ತಯಾರು ಮಾಡಿದ್ದೇವೆ. ಇದಕ್ಕೆ ಹುಡ್ಕೋ ನೆರವು ಪಡೆದುಕೊಂಡು ಮುಂದಿನ ವರ್ಷದಿಂದ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಈಗ ತಮಗೆಲ್ಲ ಗೊತ್ತಿರುವ ಹಾಗೆ ಮಾನ್ಯಮಂತ್ರಿಗಳು ಸಮಾಜವಾದಿ

ಗಳು. ಸಮಾಜವಾದಿಗಳ ಕೈಯಲ್ಲಿ ಈ ಗ್ರಾಮಾಭಿವೃದ್ಧಿ ಖಾತೆಯನ್ನು ಕೊಟ್ಟರೆ ಸಮಾಜದ ಅಭಿವೃದ್ಧಿಯಾಗುತ್ತದೆಂದು ಹೇಳಿ ನಾವು ಆ ಖಾತೆಯನ್ನು ನಿಮಗೆ ಕೊಟ್ಟಿದ್ದೇವೆ. ಈಗ ೩ ವರ್ಷಗಳಿಂದ ತಾವು ಏನು ಮಾಡಿದ್ದೀರಿ ? ನಾವು ಯೋಜನೆಗಳನ್ನು ತಯಾರು ಮಾಡಿದ್ದೇವೆ. ತಯಾರು ಮಾಡುತ್ತೇವೆ. ಅಲ್ಪಸಂಖ್ಯಾತರಿಗೆ ಮನೆಗಳನ್ನು ಕಟ್ಟಿಸಿಕೊಡುತ್ತೇವೆ. ಅದು ಬೇಡ. ತಾವೇನು ಕೆಲಸಕಾರ್ಯಗಳನ್ನು ಇದುವರೆವಿಗೂ ಮಾಡಿದ್ದೀರಿ ಅದನ್ನು ಮಾತ್ರ ಹೇಳಿದರೆ ಸಾಕು. ಇವತ್ತು ವಕ್ಫ್ ಬೋರ್ಡ್ ಎಲ್ಲಾ ಕಡೆ ದಿಕ್ಕು ಕೆಟ್ಟು ಹೋಗಿದೆ. ಅದರ ಆಸ್ತಿಪಾಸ್ತಿ ಯಾವುದೂ ಸರ್ಕಾರದ ವಶದಲ್ಲಿ ಇಲ್ಲ. ಆದಕ್ಕೆ ಬೇರೆ ಮಾಲೀಕರು ಇದ್ದಾರೆ. ಅವರು ಅನುಭವಿಸುತ್ತಿದ್ದಾರೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೇ.........

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ನನ್ನದೊಂದು ಸಲಹೆ ಅದೇನೆಂದರೆ, ವಕ್ಫ್ ಮುತವಲ್ಲಿಗಳು ಎಂದು ಇದ್ದಾರೆ. ಅವರು ಈಗಾಗಲೇ ಈ ಸಂಸ್ಥೆಯ ಮುಕ್ಕಾಲು ಭಾಗದಷ್ಟು ಆಸ್ತಿಯನ್ನು ಪರ್ಮನೆಂಟ್ ಸ್ಟ್ರಕ್ಚರ್ ಆಗಿ ಮಾಡಿಕೊಂಡು ದೊಡ್ಡದೊಡ್ಡ ಮನೆಗಳನ್ನು ಕಟ್ಟಿಸಿಕೊಂಡು ಬಿಟ್ಟಿದ್ದಾರೆ. ಅವರನ್ನು ತಾವೇನೂ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಬೇಗ ಯಾವುದಾದರೊಂದು ನಿರ್ಧಾರ ಮಾಡಿ.

ಶ್ರೀ ಅಬ್ದುಲ್ ನಜೀರ್ ಸಾಬ್.—ನಿಜ ಸ್ವಾಮಿ, ಮಾನ್ಯ ಸದಸ್ಯರು ಹೇಳುತ್ತಿರುವುದನ್ನು ನಾನು ಇಲ್ಲವೆಂದು ಹೇಳುವುದಿಲ್ಲ. ವಕ್ಫ್ ಸಂಸ್ಥೆಯಲ್ಲಿ ಸಮಾಜವಾದವನ್ನು ಸೇರಿಸುವುದಕ್ಕೆ ಆಗುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಸ್ವಾಮಿ, ವಕ್ಫ್ ಸಂಸ್ಥೆಯ ಆನ್ಯುಯಲ್ ರಿಪೋರ್ಟ್ ನಮಗೆ ಕೊಟ್ಟಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ಸ್ವಾಮಿ, ವಕ್ಫ್ ಸಂಸ್ಥೆಯ ವಾರ್ಷಿಕ ವರದಿಯನ್ನು ತಯಾರು ಮಾಡಿಲ್ಲ. ಆದ್ದರಿಂದ ನಾನು ಮಾನ್ಯ ಸದಸ್ಯರಲ್ಲಿ ಕ್ಷಮೆಯನ್ನು ಕೇಳಿಕೊಂಡು ಮುಂದಿನ ವರ್ಷದಿಂದ ವಾರ್ಷಿಕ ವರದಿಯನ್ನು ತಯಾರು ಮಾಡಿ ಕೊಡುತ್ತೇನೆ. ಹಿಂದೆ ಸಹ ವಾರ್ಷಿಕ ವರದಿ ಕೊಟ್ಟಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನೀವು ಮುಂದಿನ ವರ್ಷ ವಾರ್ಷಿಕ ವರದಿಯನ್ನು ತಯಾರು ಮಾಡುವ ತನಕ ನಾವು ಈ ಬೇಡಿಕೆಯನ್ನು ಪಾಸ್ ಮಾಡುವುದಕ್ಕೆ ಆಗುವುದಿಲ್ಲ. ಮುಂದಿನ ವರ್ಷವೇ ಬೇಡಿಕೆ ಪಾಸ್ ಮಾಡಿಕೊಡುತ್ತೇವೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಸ್ವಾಮಿ ಸಮಾಜವಾದವನ್ನು ವಕ್ಫ್ ಸಂಸ್ಥೆಯಲ್ಲಿ ತರುವುದಕ್ಕೆ ಸಾಧ್ಯವಾಗುವುದಿಲ್ಲ. ಸಮಾಜವಾದದಲ್ಲಿ ಎಲ್ಲರಿಗೂ ವಿಶ್ವಾಸ ಇದೆ. ಆದರೆ ರಾಜ್ಯ ಸರ್ಕಾರಕ್ಕೆ ಒಂದು ಇತಿಮಿತಿ ಇದೆ. ಅದರಲ್ಲಿ ನಾವು ಕೆಲಸ ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಸಮಾಜವಾದವನ್ನು ಇದರಲ್ಲಿ ತರಬೇಕಾದರೆ ರಾಷ್ಟ್ರವ್ಯಾಪ್ತಿಯಲ್ಲಿ ತರಬೇಕಾಗುತ್ತದೆ. ನನಗೆ ರಾಷ್ಟ್ರವ್ಯಾಪ್ತಿಯಲ್ಲಿ ಅಧಿಕಾರ ಸಿಕ್ಕಿದರೆ ಖಂಡಿತವಾಗಿ ಜಾರಿಗೆ ತರುತ್ತೇನೆ ಎನ್ನುವ ಭರವಸೆಯನ್ನು ಕೊಡುತ್ತೇನೆ. ಮತ್ತು ಈ ವಕ್ಫ್ ಸಂಸ್ಥೆಗೆ ಕೇಂದ್ರ ಸರ್ಕಾರದ ಆಕ್ಟ್ ಇದೆ. ಆ ಪ್ರಕಾರ ನಾವು ಕೆಲಸ ಮಾಡಬೇಕಾಗುತ್ತದೆ. ನಮಗೆ ಅದರಲ್ಲಿ ಹೆಚ್ಚು ಅಧಿಕಾರ ಇಲ್ಲ. ಮತ್ತೆ ಸೆಂಟ್ರಲ್ ಆಕ್ಟ್ ವಿರುದ್ಧ ನಾವು ರೂಲ್ಸ್ ತರುವುದಕ್ಕೆ ಆಗುವುದಿಲ್ಲ. ಅದರಲ್ಲಿ ಏನೇ ಒಂದು ಬದಲಾವಣೆ ಮಾಡಬೇಕಾದರೂ ಸಹ ಕೇಂದ್ರ ಸರ್ಕಾರ ಬದಲಾವಣೆ ಮಾಡಬೇಕಾಗುತ್ತದೆ. ನಮ್ಮ ಸರ್ಕಾರದ ವ್ಯಾಪ್ತಿಯಲ್ಲಿ ಏನೇನು ಅಭಿವೃದ್ಧಿ ಕೆಲಸಕಾರ್ಯಗಳನ್ನು ಮಾಡಬೇಕಾಗಿತ್ತೋ ಆ ಕೆಲಸವನ್ನು ನಾವು ಈಗಾಗಲೇ ಮಾಡಿದ್ದೇವೆ. ಉದಾಹರಣೆಗೆ ಹೇಳುವುದಾದರೆ ಎನ್‌ಕ್ರೋಚ್‌ಮೆಂಟ್ ಇತ್ತು. ಆ ಎನ್‌ಕ್ರೋಚ್‌ಮೆಂಟ್ ಅನ್ನು ಸರ್ಕಾರೀ ಆಜ್ಞೆಯ ಮುಖಾಂತರ ತೆರವು ಮಾಡಿಸಿದ್ದೇವೆ. ನನಗೆ ತಿಳಿದ ಮಟ್ಟಿಗೆ ಸುಮಾರು ೧೧೪ ಕಡೆಗಳಲ್ಲಿ ಎನ್‌ಕ್ರೋಚ್‌ಮೆಂಟ್ ಇತ್ತು.........

ಶ್ರೀ ಬಿ. ಬಸವಲಿಂಗಪ್ಪ.—ಬೀದರ್‌ನಲ್ಲಿ ಏನು ಮಾಡಿದ್ದೀರಿ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಸ್ವಾಮಿ, ಅಲ್ಲಿನ ಜಿಲ್ಲಾಧಿಕಾರಿಗಳು ಎನ್‌ಕ್ವೈರಿ ಮಾಡುತ್ತಿದ್ದಾರೆ. ಅಲ್ಲಿ ಡಿಸ್‌ಪ್ಯೂಟ್ ಇರುವುದರಿಂದ ಲಾ ಪ್ರಕಾರವಾಗಿ ಹಿಯರಿಂಗ್ ನಡೆಯುತ್ತಿದೆ. ಇನ್ನು ವಕ್ಫ್ ಬೋರ್ಡ್‌ಗಳ ಸಮಿತಿಗಳಲ್ಲಿ ಶಾಸಕರನ್ನು ಪ್ರತಿನಿಧಿಗಳನ್ನಾಗಿ ಮಾಡಿದ್ದೇವೆ. ಕಾರಣವೇನೆಂದರೆ,

ಜನತೆಯಲ್ಲಿ ಒಂದು ಬಾಂಧವ್ಯ ಬೆಳೆಯಲಿ ಎನ್ನತಕ್ಕಂಥ ದೃಷ್ಟಿಯಿಂದ ಈ ರೀತಿ ಮಾಡಿದ್ದೇವೆ. ಇದನ್ನು ಮಾನ್ಯ ಸದಸ್ಯರು ಮೆಚ್ಚುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ವಕ್ಫ್ ಸಂಸ್ಥೆಗಳಲ್ಲಿ ಅಭಿವೃದ್ಧಿ ಕೆಲಸಗಳು ಸರಿಯಾಗಿ ನಡೆಯುತ್ತಿಲ್ಲ. ಆದ್ದರಿಂದ ಸೆಂಟ್ರಲ್ ಆಕ್ಟ್‌ಗೆ ಅಮೆಂಡ್‌ಮೆಂಟ್ ತರುವಂತೆ ತಾವು ಒಂದು ಸಲಹೆಯನ್ನು ಕೇಂದ್ರ ಸರ್ಕಾರಕ್ಕೆ ಕೊಡಿ ಅಥವಾ ಕಾರ್ಪೊರೇಷನ್ ತರಹ ಮಾಡಿಕೊಂಡು ಕಂಪನಿ ಆಕ್ಟ್ ಪ್ರಕಾರ ರಿಜಿಸ್ಟರ್ ಮಾಡಿಕೊಂಡು ಅಭಿವೃದ್ಧಿ ಕೆಲಸ ಮಾಡಿ. ಇಲ್ಲದಿದ್ದರೆ ...

SRI ABDUL NASIR SAB.—It cannot be done. You know it better. It is a Central Act. The Parliament has amended the Act and in that some powers are vested. They have created a Commission for Wakfs. They have asked the State Governments as to whether they are going to fulfil the conditions stipulated in the amended Act. We have accepted that and we have sent it. We are the only State, as far as my knowledge goes, which has accepted the amendment. We are ready to abide by the conditions laid down by the amended Act but other States have put objections. That is why it has not come into being.

ಶ್ರೀ ಎಂ. ವೀರಪ್ಪ ಮೊಯ್ಲಿ.—ವಕ್ಫ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಇದೆ. ಇತ್ತೀಚಿನ ಒಂದು ಸುದ್ದಿ ಪ್ರಕಾರ ಅದನ್ನು ವೈಂಡ್ ಅಪ್ ಮಾಡುವ ಆಲೋಚನೆ ಇದೆಯಂತೆ ಅದು ನಿಜವೇ? ಮಾನ್ಯ ಅಜೀಜ್‌ಸೇಠ್‌ರವರು ಅದರ ಅಧ್ಯಕ್ಷರಾಗಿದ್ದಾರೆ. ಅವರು ಇರದಿದ್ದರೆ, ತಾವೇ ಅದರ ಅಧ್ಯಕ್ಷರಾಗಿ. ಆದರೆ ಅದನ್ನು ವೈಂಡ್ ಅಪ್ ಮಾಡುವುದು ಸರಿಯಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ಸ್ವಾಮಿ, ನಾನು ಮೊದಲೇ ಹೇಳಿದ ಹಾಗೆ ನನಗೆ ಯಾವುದೇ ರಾಜಕೀಯ ಉದ್ದೇಶವಿಲ್ಲ: ಉದಾಹರಣೆಗೆ ಹೇಳುವುದಾದರೆ, ಮಾನ್ಯ ಅಜೀಜ್ ಸೇಠ್‌ರವರು ವಕ್ಫ್ ಸಂಸ್ಥೆಯ ಸಮಿತಿಗಳನ್ನು ರಚನೆ ಮಾಡಿದ್ದರು. ಆ ಸಮಿತಿಗಳನ್ನು ನಾನು ಬದಲಾವಣೆ ಮಾಡಿಲ್ಲ. ಮಾನ್ಯ ಅಜೀಜ್‌ಸೇಠ್‌ರವರು ಏನು ಮಾಡಿದ್ದಾರೆಂದು ಹೇಳಲೇನು? ಹಿಂದಿನ ಸರ್ಕಾರದಲ್ಲಿ ಕ್ಯಾಬಿನೆಟ್ ರೆಜಲ್ಯೂಷನ್ ಮಾಡಿ ೫೧ ಶೇರುಗಳು ವಕ್ಫ್ ಸಂಸ್ಥೆಗೆ ಇನ್ನು ಉಳಿದ ೪೯ ಶೇರುಗಳು ಪ್ರವೇಟಿನವರಿಗೆ ಎಂದು ಕಾರ್ಪೊರೇಷನ್‌ನಲ್ಲಿ ಮಾಡಿದ್ದಾರೆ. They have refused the Government share. They have converted it into a private property, ಅದಕ್ಕಾಗಿ ನಾನು ಹೇಳಿದ್ದು not to wind up. Public property worth crores of rupees is involved. That is why my idea is to take over. The earlier provisions of the decision of the Government should prevail. That is my contention. ಈ ವಕ್ಫ್ ಸಂಸ್ಥೆ ಒಂದು ಅವಿಭಾಜ್ಯ ಅಂಗ ಎಂಬ ಅಭಿಪ್ರಾಯ ಜನರಲ್ಲಿ ಬರಬೇಕು ಮತ್ತು ಮೂಲೆ ಮೂಲೆಯಲ್ಲಿ ಈ ವಕ್ಫ್ ಸಂಸ್ಥೆ ಬೆಳೆಸಬೇಕೆಂಬುದೇ ನನ್ನ ಉದ್ದೇಶ.

(ಮಾನ್ಯ ಅಧ್ಯಕ್ಷರು. ಪೀಠವನ್ನು ಅಲಂಕರಿಸಿದರು)

ಶ್ರೀ ಅಬ್ದುಲ್ ನಜೀರ್‌ಸಾಬ್.—ಕೊನೆಯದಾಗಿ ಎರಡು ಮುಖ್ಯ ವಿಚಾರಗಳನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ. ಮೊದಲನೆಯದಾಗಿ, ಗ್ರಾಮಾಭಿವೃದ್ಧಿಗೆ ಸಂಬಂಧಪಟ್ಟದ್ದು. ರೂರಲ್ ಇಂಜಿನಿಯರಿಂಗ್ ಸರ್ವೀಸ್ ಮಾಡುತ್ತೇವೆಂದು ಹೇಳಿದ್ದೆವು ಜಿಲ್ಲಾಪರಿಷತ್ತು ಬಂದಮೇಲೆ ಸ್ಟೇಟ್ ಸೆಕ್ಟರ್ ಮತ್ತು ಜಿಲ್ಲಾಪರಿಷತ್ ಸೆಕ್ಟರ್ ಎಂದು ಆಯಿತು. ಈ ರೂರಲ್ ಇಂಜಿನಿಯರಿಂಗ್ ಸರ್ವೀಸ್ ಮಾಡುವುದನ್ನು ಗಂಭೀರವಾಗಿ ಪರಿಶೀಲನೆ ಮಾಡುತ್ತಿದ್ದೇವೆ. ಎಲ್ಲಾ ಹಂತದಲ್ಲೂ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇವೆಂದು ಹೇಳುತ್ತೇನೆ. ಇನ್ನೊಂದು, ಭೂಸೇನೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ಭೂಸೇನೆಯ ಉದ್ದೇಶ ಸಾಕಷ್ಟು ಜನಕ್ಕೆ ಗೊತ್ತಿಲ್ಲ. ಭೂಸೇನೆ ಪ್ರಾರಂಭವಾದಾಗ ಇದ್ದ ಬಂಡವಾಳ ಕೇವಲ ೫೦ ಲಕ್ಷ ರೂಪಾಯಿ. ಕೇವಲ ೫೦ ಲಕ್ಷ ರೂಪಾಯಿಯಲ್ಲಿ ಪ್ರಾರಂಭವಾದ ಸಂಸ್ಥೆ. ಈ ವರ್ಷದಲ್ಲಿ ೧೨ ಕೋಟಿ ರೂಪಾಯಿಗಳ ಗ್ರಾಮಾಭಿ

ವೃದ್ಧಿ ಕಾರ್ಯಕ್ರಮಗಳನ್ನು ಮಾಡಿದೆ. ೫೫೦ ಜನ ಇಂಜಿನಿಯರುಗಳು ಕೆಲಸ ಮಾಡುತ್ತಿದ್ದಾರೆ, ೧೮ ಸಾವಿರ ಜನ ಡೈಲಿ ವೇಜಸ್ ಮೇಲೆ ಕೆಲಸ ಮಾಡುತ್ತಿದ್ದಾರೆ. ಇದರ ಕಾರ್ಯವನ್ನು ವಿಸ್ತಾರ ಮಾಡಿದ್ದೇವೆ. ಹಿಂದಿನ ೨-೩ ವರ್ಷದಲ್ಲಿ ಬೃಹದಾಕಾರವಾಗಿ ವಿಸ್ತಾರವಾಗಿದೆ. ಪ್ರತಿ ತಾಲ್ಲೂಕಿನ ಹಂತದಲ್ಲಿಯೂ ಈ ಭೂ ಸೇನಾ ನಿಗಮ ಕೆಲಸ ಮಾಡುತ್ತಿದೆ. ಇದಕ್ಕೆ ಪೂರಕವಾದ ವ್ಯವಸ್ಥೆಯನ್ನು ಹಂತ ಹಂತವಾಗಿ ಮಾಡುತ್ತಿದ್ದೇವೆ. ಇದಕ್ಕೆ ಸರ್ಕಾರದಿಂದ ಒಂದು ಪೈಸೆ ಕೂಡ ಕೊಟ್ಟಿಲ್ಲ. ಇದುವರೆಗೆ ಸರ್ಕಾರಿಂದ ದುಡ್ಡು ಹಾಕಿಲ್ಲ. ಕಂಟ್ರಾಕ್ಟರ್ ಮುಖಾಂತರ ಈ ಕಾರ್ಯಕ್ರಮ ಮಾಡುತ್ತಿದ್ದೇವೆ. ಇದಕ್ಕೆ ಇನ್ನೂ ಸ್ಥಳೀಯ ರಾಜಕೀಯ ನಾಯಕತ್ವದ ಬೆಂಬಲ ಬೇಕು. ಸ್ಥಳೀಯವಾಗಿ ಪಟ್ಟಭದ್ರ ಹಿತಾಸಕ್ತಿಗಳು ಏನಿವೆ ಅವುಗಳು ಸಾರ್ವಜನಿಕ ಕ್ಷೇತ್ರದಲ್ಲಿ ಅನೇಕ ಆರೋಪಗಳನ್ನು ಮಾಡುತ್ತಿವೆ. ಸಮಾಜದಲ್ಲಿರತಕ್ಕ ಇಂತಹ ಶಕ್ತಿಗಳಿಗೆ, ಸ್ಥಳೀಯ ನಾಯಕತ್ವದ ಬೆಂಬಲ ಕೊಡತಕ್ಕ ವ್ಯವಸ್ಥೆಯಾಗಬೇಕು. ಇದು ಒಂದು ಸಾರ್ವಜನಿಕ ಸಂಸ್ಥೆ. ನಮ್ಮ ದೇಶದ ಹೊಸ ಪರಂಪರೆಯನ್ನು ಪ್ರಾರಂಭ ಮಾಡತಕ್ಕಂಥಾದ್ದು. ಈ ಸಂಸ್ಥೆಯ ಮುಖಾಂತರ ಸಾಧ್ಯ. ಇನ್ನು ಈ ವರ್ಷದಲ್ಲಿ ಉದ್ಯೋಗದ ಭರವಸೆ ಕೊಡತಕ್ಕಂಥ ಗ್ರಾಮೀಣ ಬಡ ಜನರು ಏನಿದ್ದಾರೆ, ಕೃಷಿ ಕಾರ್ಮಿಕರು ಏನಿದ್ದಾರೆ, ಅವರಿಗೆ ಆರ್.ಎಲ್.ಇ.ಜಿ.ಪಿ. ಮುಖಾಂತರ ಉದ್ಯೋಗ ಕೊಡುವುದಾಗಿ ಮಾಡಿದ್ದೇವೆ. ಇದು ಇನ್ನೂ ಸಂಪೂರ್ಣವಾಗಿ ಈಡೇರಿಲ್ಲ. ಇದರ ವೈಫಲ್ಯವನ್ನು ನಾನು ಒಪ್ಪಿಕೊಳ್ಳುತ್ತೇನೆ. ಕಾರಣ ನಾವು ಇನ್ನೂ ವೈಜ್ಞಾನಿಕವಾದ ಪೂರಕ ವ್ಯವಸ್ಥೆ ಮಾಡಿಲ್ಲ. ಹಣದ ಪೂರೈಕೆ ಮಾಡಿಲ್ಲ. ಇಡೀ ದೇಶದಲ್ಲಿ ಅಚ್ಚುಕಟ್ಟಾಗಿ, ಈ ಯೋಜನೆ ಮಹಾರಾಷ್ಟ್ರದಲ್ಲಿ ನಡೆಯುತ್ತಿದೆ. ಅಲ್ಲಿ ಶಾಸನವನ್ನು ತಂದು, ಅದರ ಮುಖಾಂತರ ಮಾಡಿದೆ. ನಮ್ಮ ಸರ್ಕಾರವೂ ಕೂಡ ಮುಂದಿನ ವರ್ಷ ಹಳ್ಳಿಗಾಡುಗಳಲ್ಲಿ ಕೆಲಸವನ್ನು ಅಪೇಕ್ಷಿಸತಕ್ಕಂಥವರಿಗೆ. ಕೆಲಸ ಒದಗಿಸತಕ್ಕಂಥ ಹಕ್ಕನ್ನು ಕೊಡಬೇಕೆಂದು ನಿರ್ಧಾರ ಮಾಡಿದ್ದೇವೆ. ಮುಂದಿನ ವರ್ಷ ಪೂರಕ ಯೋಜನೆಗಳು ಆದಮೇಲೆ, ಶಾಸನ ತಂದು ಅದರ ಮುಖಾಂತರ ಈ ಕಾರ್ಯವನ್ನು ಮಾಡುತ್ತೇವೆಂದು, ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳಿ, ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ —ಮಾನ್ಯ ಅಧ್ಯಕ್ಷರೇ, ಅವರಿಗೆ ತಿಳಿದಹಾಗೆ ಉತ್ತರವನ್ನು ಸರಿಯಾಗಿ ಹೇಳಿದ್ದಾರೆ. ಆದರೆ ಮುಖ್ಯವಾದ ವಿಚಾರ ನಮಗೆ ಬೇಕು. ಪ್ರಮುಖವಾಗಿರತಕ್ಕಂಥ ಜಿಲ್ಲಾಪರಿಷತ್ತಿಗೆ ಮತ್ತು ಮಂಡಲ್ ಪಂಚಾಯಿತಿ ಬಗ್ಗೆ ತಾವು ಕಾನೂನು ಮಾಡಿಕೊಂಡಿದ್ದೀರಿ. ಈ ಬಗ್ಗೆ ಚುನಾವಣೆಗೆ ಬೇಕಾದ ಸಿದ್ಧತೆಗಳನ್ನೂ ಮಾಡಿಕೊಂಡು, ಫೈನಲ್ ಮಾಡಿದ್ದೀರಿ. ಆದರೆ ಚುನಾವಣೆ ಯಾವ ದಿನ ಮಾಡುತ್ತೀರಿ ಎಂಬುದನ್ನು ನಿರ್ದಿಷ್ಟವಾಗಿ ಹೇಳಬೇಕು. ನಾಳೆ, ನಾಡಿದ್ದು ಎಂಬುವನ್ನು ಹೇಳದೆ ಸ್ಪಷ್ಟವಾಗಿ, ಚುನಾವಣೆ ದಿನಾಂಕವನ್ನು ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಟ ಭಾಷಣದಲ್ಲಿ ಹೇಳಿದ್ದಾರೆ. ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಮಾಡುವುದಾಗಿ ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮೇ ೧೭ ನೇ ತಾರೀಖು ಮಾಡುವುದಾಗಿ ಗೊತ್ತಾಯಿತು.

ಶ್ರೀ ಅಬ್ದುಲ್ ನಜೀರ್‌ಸಾಬ್.—ಇನ್ನೂ ನಿರ್ಧಾರವಾಗಿಲ್ಲ. ಈ ವಿಚಾರದಲ್ಲಿ ನಮಗೆ ಅನ್‌ಅಫಿಷಿಯಲ್ ಆಗಿ ತೊಂದರೆ ಬಂತು. ನಾನು ಕೂಡ ಇದರ ಬಗ್ಗೆ ಇರತಕ್ಕ ನಿಯಮ ನೋಡಿರಲಿಲ್ಲ. ಪ್ರತಿ ವರ್ಷ ವೋಟರ್ಸ್ ಎನ್ಯುಮರೇಷನ್ ಮಾಡುವುದು ಜನವರಿಯಲ್ಲಿ. ಇದು ಆಗಬೇಕಾದರೆ ಮೂರು ತಿಂಗಳು ಆಗುತ್ತದೆ. ನಿಯಮದ ಪ್ರಕಾರ ಈ ಎನ್ಯುಮರೇಷನ್ ಕಾರ್ಯಕ್ರಮ ಮಾರ್ಚಿಯವರೆಗೆ ಮುಗಿಯುತ್ತದೆ. ಇದಾದ ಮೇಲೆ ೧೮ ವರ್ಷ ವಯಸ್ಸಿನವರನ್ನೂ ಎನುಮರೇಷನ್ ಮಾಡಬೇಕು. ಈ ಎರಡು ಕಾರ್ಯಕ್ರಮಗಳೂ ನಿಧಾನವಾಗುತ್ತಿವೆ. ಆದ್ದರಿಂದ ತಾರೀಖನ್ನು ಹೇಳುವುದಕ್ಕಾಗುವುದಿಲ್ಲ. ನೋಟಿಫಿಕೇಷನ್ ಪ್ರಕಾರ, ತಾತ್ಕಾಲಿಕವಾಗಿ ಮೇ ನಲ್ಲಿ ಮಾಡಬೇಕೆಂದು, ಎಲ್ಲಾ ಸಿದ್ಧತೆಗಳನ್ನೂ ಮಾಡುತ್ತಿದ್ದೇವೆ. ನಿಗದಿಯಾದ ತಾರೀಖನ್ನು ಈ ಸದನಕ್ಕೆ ಹೇಳಲಾರೆ. Cabinet has to take a decision and after the completion of my programmes like all the delimitations and other things as early as possible I am taking the subject to the cabinet

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮುಖ್ಯಮಂತ್ರಿಗಳು, ಬಜೆಟ್ ಭಾಷಣದಲ್ಲಿ ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಚುನಾವಣೆ ಮಾಡುತ್ತೇವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ತಾವೂ ಕೂಡ ಇನ್ನೊಂದು ಸಲ ಏಪ್ರಿಲ್ ಅಥವಾ ಮೇ ಎಂದು ಉಚ್ಚರಿಸುತ್ತಿದ್ದೀರಿ. ಒಂದು ಕಡೆ ಬರಗಾಲ ಪರಿಸ್ಥಿತಿ ಇದೆ ಎಂಬುದನ್ನು ಒಪ್ಪಿಕೊಳ್ಳುತ್ತೀರಿ. ಅಲ್ಲದೆ ರಾಜ್ಯದ ಎಂ.ಪಿ.ಗಳನ್ನು ಭೇಟಿಯಾದಾಗ, ಚುನಾವಣೆ ಮಾಡುವುದು ಬೇಡ ಎಂದರು ಎಂಬ ವಾದವನ್ನೂ ತಾವು ಹೇಳಿದ್ದೀರಿ. ಒಂದು ಕಡೆ ಬರಗಾಲ, ಇನ್ನೊಂದು ಕಡೆ ಏಪ್ರಿಲ್ ಮೇ ಎಂದು ಹೇಳುತ್ತೀರಿ. ಈಗ ಮತ್ತೆ ೧೮ ವರ್ಷ ವಯಸ್ಸಿನವರನ್ನೂ ಎನ್ಯುಮರೇಷನ್ ಮಾಡಬೇಕಾದ್ದು ಇದೆ. ಇದು ಮುಗಿಯುವವರೆಗೂ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತೀರಿ. ಖಂಡಿತವಾಗಿ ಮಾಡುವುದಕ್ಕಾಗುತ್ತದೆಯೋ ಅಥವಾ ಮುಂದೆ ಸೆಪ್ಟೆಂಬರ್, ಅಕ್ಟೋಬರ್‌ನಲ್ಲಿ ಮಾಡುತ್ತೀರೊ, ಇಲ್ಲ, ಮೇ ತಿಂಗಳಲ್ಲಿ ಮಾಡುತ್ತೀರೋ ಸ್ಪಷ್ಟವಾಗಿ ಹೇಳಿ.

ಆ ಮೇಲೆ ಲ್ಯಾಂಡ್ ಆರ್ಮಿ ಕಾರ್ಪೊರೇಷನ್ ಬಗ್ಗೆ ಹೇಳಿದ್ದೀರಿ. ಭೂಸೇನೆಯು ಕಂಟ್ರಾಕ್ಟರ್ ಕೆಲವು ಕಡೆ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆಂದು ವರದಿ ಬಂದಿದೆ. ಇದರ ಬಗ್ಗೆ ಮೊದಲು ನಮ್ಮ ಅಭಿಪ್ರಾಯ ಸರಿ ಇರಲಿಲ್ಲ. ತಾವು ವಹಿಸಿಕೊಂಡ ಮೇಲೆ ಹೆಚ್ಚಿನ ಚುರುಕು ಕೊಡುತ್ತಿದ್ದೀರಿ. ಹಣವನ್ನು ಮೊದಲೇ ಕೊಡುತ್ತೀರಿಆದರೆ ಬೇರೆಯವರಿಗೆ ಕೊಡುವುದಿಲ್ಲ. ಇವರಿಗೆ ಮಾತ್ರ ಸಿಕ್ಕುತ್ತಿದೆ, ಕೆಲಸ ನಡೆದಿದೆ. ಇವತ್ತಿನ ದಿವಸ ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಮತ್ತು ಭೂ ಸೇನಾ ನಿಗಮ ಈ ಎರಡೇ ಕೆಲಸ ಮಾಡುತಿವೆ. ಆದರೆ ಈ ಭೂ ಸೇನಾ ನಿಗಮದವರು ಎಷ್ಟು ಲಾಭವನ್ನು ಪಡೆದುಕೊಂಡಿದ್ದಾರೆ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು.

ಕೊನೆಯದಾಗಿ, ಪಾವರ್ಟಿ ರಿಮೂವಲ್ ಪ್ರೋಗ್ರಾಂ ಬಗ್ಗೆ, ಕೆಲಸಗಳು ಚುರುಕಾಗಿ ನಡೆಯಬೇಕು. ಪ್ರತಿ ತಾಲ್ಲೂಕಿನಲ್ಲೂ ರಿವ್ಯೂ ಮಾಡಬೇಕು, ಇದು ಆಗುತ್ತಾ ಇಲ್ಲ. ಇದರ ಬಗ್ಗೆ ಕೆಲವು ಕಡೆ ತಾಲ್ಲೂಕು ಸಮಿತಿಗಳನ್ನು ಮಾಡಿದ್ದೀರಿ. ನಂತರ ಎಲ್ಲಾ ಕಡೆ ನಿಲ್ಲಿಸಿದ್ದೇವೆಂದು ಹೇಳಿದಿರಿ. ಕೆಲವು ಕಡೆ ಪುನರ್ ರಚನೆ ಮಾಡಿದ್ದೀರಿ. ಅವರು ಮೀಟಿಂಗ್ ಕರೆದು ಮಾಡುತ್ತಿದ್ದಾರೆ. ಇದು ಒಂದು ತಾಲ್ಲೂಕಿನಲ್ಲಿ ಆಗಿದೆ, ಇನ್ನೊಂದು ತಾಲ್ಲೂಕಿನಲ್ಲಿ ಆಗಿಲ್ಲ ಇದು ಏಕೆ ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಬಡತನ ನಿರ್ಮೂಲನೆ ಮಾಡತಕ್ಕಂಥ ಕಾರ್ಯ ಚುರುಕಾಗಿ, ಜೋರಾಗಿ ಆಗುತಾ ಇಲ್ಲವೆಂದು ಹೇಳಿದ್ದಾರೆ. ದಯಮಾಡಿ ಇದರ ಬಗ್ಗೆ ನಿಗದಿಯಾದ ಅಂಕಿಅಂಶಗಳನ್ನು ಮಾನ್ಯ ಸದಸ್ಯರು ಕೊಡಬೇಕು. ಎಲ್ಲಾ ಕೆಲಸಗಳೂ ಎಲ್ಲಾ ಕಡೆಯೂ ನಡೆಯುತ್ತಿವೆ. ಇನ್ನು ಸಲಹಾ ಸಮಿತಿ ಬಗ್ಗೆ, ಚುನಾವಣೆ ಬೇಗ ನಿರ್ಧಾರ ಮಾಡುವುದರಿಂದ, ಇವೆಲ್ಲಾ ನಿಂತು ಹೋಗುತ್ತದೆಂದು ನನ್ನ ಅಭಿಪ್ರಾಯ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಲ್ಯಾಂಡ್‌ಆರ್ಮಿ ಕಾರ್ಪೊರೇಷನ್ ಬಗ್ಗೆ ನೀವು ಹೇಳಲಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ಲ್ಯಾಂಡ್ ಆರ್ಮಿ ಕಾರ್ಪೊರೇಷನ್ ಬಗ್ಗೆ ಹೇಳುವುದಾದರೆ ಇದು ನೊ ಪ್ರಾಫಿಟ್ ನೊ ಲಾಸ್ ಬೇಸಿಸ್‌ನಲ್ಲಿ ನಡೆಯುತ್ತದೆ. ಇದರಲ್ಲಿ ಏನೂ ಪ್ರಾಫಿಟ್ ಮಾಡುವುದಿಲ್ಲ. It is a taxable profit In the process we will build up inventaries. ಅದರ ಅಂಕಿಅಂಶ ಈಗ ನನ್ನ ಹತ್ತಿರ ಇಲ್ಲ. ಅದನ್ನು ತರಿಸಿಕೊಡುತ್ತೇನೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪ್ರಾಫಿಟ್ ಮಾಡುವುದಿಲ್ಲ ಎಂದರೆ ಅದಕ್ಕೇನಾದರೂ ಅಸೆಟ್ ಇರಬೇಕಲ್ಲ. ಏನಾದರೂ ಮೆಶಿನರಿ ಪರ್ಚೇಸ್ ಮಾಡಿದ್ದೀರಾ, ಏನಾದರೂ ಗೊತ್ತಾಗಬೇಕಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—೧೯೭೮ ರಲ್ಲಿ ಇದರಲ್ಲಿ ಮೂಲ ಬಂಡವಾಳ ಇದ್ದದ್ದು ೫೦ ಲಕ್ಷ ರೂಪಾಯಿ. ಈವೊತ್ತು ಅದರ ಅಸೆಟ್ಸ್ ೨ ೧/೨ ಕೋಟಿ ರೂಪಾಯಿ ಆಗಿದೆ ಅದರಲ್ಲಿ ಕೆಲಸ ಮಾಡುತ್ತಾ ಇರುವವರು ೫೫೦ ಜನ ಇಂಜಿನೀಯರ್ಸ್ ಮತ್ತು ೧೮ ಜನರು ಡೈಲಿ ವೇಜಸ್‌ನಲ್ಲಿದ್ದಾರೆ. ಇದಕ್ಕೆ ಗ್ರಾಂಟ್ ಯಾವುದೂ ಇಲ್ಲ ನೀವು advance ಕೊಡುತ್ತೇವೆಂದು ಹೇಳಿದ್ದೀರಲ್ಲ. ನಿಮ್ಮ ಭಾವನೆ ತಪ್ಪು. ನಾವು ಯಾವುದೂ ಅಡ್ವಾನ್ಸ್ ಕೊಡುತ್ತಾ ಇಲ್ಲ. ತಮಗೆ ಹೇಳಬೇಕಾದರೆ ನಾವು ಕೋ ಆಪರೇಟೀವ್ ಡಿಪಾರ್ಟ್‌ಮೆಂಟಿನ ಗೋಡೌನ್‌ನ, ೧ ೧/೨ ಕೋಟಿ ರೂಪಾಯಿ ಕೆಲಸ

ಮಾಡಿ ಇನ್ನೂ ೪೦ ಲಕ್ಷ ರೂಪಾಯಿ ತೆಗೆದುಕೊಳ್ಳುವುದರಲ್ಲೇ ಇದ್ದೇವೆ. ನಾವು ಈ ಬಡತನದ ಕಾರ್ಯಕ್ರಮದಲ್ಲಿ ಎರಡು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಒಂದು, ಎನ್. ಆರ್. ಇ. ಪಿ. ಯ ಗ್ರೂಪ್ ಹೌಸಿಂಗ್‌ನಲ್ಲಿ ೫೦೦೦ ಮನೆಗಳನ್ನು ಕಟ್ಟಿಸಿಕೊಡುವುದು. ಮತ್ತು ಆರ್. ಎಲ್. ಇ. ಜಿ. ಪಿ. ಯ ಕಾರ್ಯಕ್ರಮದಲ್ಲಿ ಎಸ್. ಸಿ ಗ್ರೂಪ್ ಹೌಸಿಂಗ್ ಸ್ಕೀಂನಲ್ಲಿ ೬ ಸಾವಿರ ಮನೆಗಳನ್ನು ಅದಕ್ಕೆ ಬೇಕಾದ ಲೈಟ್ಸ್ ಇತ್ಯಾದಿ ಸೌಲಭ್ಯಗಳನ್ನೆಲ್ಲಾ ಒದಗಿಸಿಕೊಡುವಂಥಾ ಮನೆಗಳನ್ನು ಕಟ್ಟಿಸಿಕೊಡುವ ಕಾರ್ಯಕ್ರಮ ಇದೆ. A .very good modes also developed by the Land Army. that model will be taken up throughtout the state.

ಶ್ರೀ ಕೆ. ಬಿ. ಶಾನಪ್ಪ.—ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ತಾಲ್ಲೂಕು ಬೋರ್ಡ್‌ನವರು ನಡೆಸುತ್ತಿರುವ ಬಾಲವಾಡಿಗಳ ಬಗ್ಗೆ ಏನೂ ಹೇಳಲಿಲ್ಲ. ಬಾಲವಾಡಿಗಳಲ್ಲಿ ೧೨ ವರ್ಷಗಳಿಂದ ಅನೇಕ ಟೀಚರಗಳು ಕೆಲಸ ಮಾಡುತ್ತಿವೆ? ಕೆಲಸವನ್ನು ಡಿ. ಸಿ ಯವರೇ ನಡೆಸುತ್ತಿದ್ದಾರೆ. ಟಿ.ಡಿ.ಬಿ. ನವರು ೧೨ ವರ್ಷದಿಂದಲೂ ಕೂಡ ಬಾಲವಾಡಿಗಳನ್ನು ನಡೆಸುವುದಕ್ಕೆ ಬೇಕಾದಷ್ಟು ಹಣ ಖರ್ಚು ಮಾಡುತ್ತಿದ್ದಾರೆ. ಈಗ ಅವರನ್ನು ಅಂಗನವಾಡಿಗೆ ಟ್ರಾನ್ಸ್‌ಫರ್ ಮಾಡಬೇಕು ಅಂತ ಇದ್ದಾರೆ. ಅವರನ್ನು ಅಲ್ಲಿಗೆ ಟ್ರಾನ್ಸ್‌ಫರ್ ಮಾಡಿದರೆ ಅಲ್ಲಿಗೆ ಅವರು ಬರೀ ೨೫೦ ರೂಪಾಯಿಗೆ ಹೋಗಿ ಕೆಲಸ ಮಾಡಬೇಕಾಗುತ್ತದೆ, ಈಗ ಅವರಿಗೆ ಬರುವ ೮೦೦ ರೂಪಾಯಿ ತಪ್ಪಿಹೋಗುತ್ತದೆ. ಅವರಿಗೆ ಅಲ್ಲಿಗೆ ಹೋದರೂ ಕೂಡ ೮೦೦ ರೂಪಾಯಿ ಬರುವಹಾಗೆ ಕೊಡಿಸಿಕೊಡಬೇಕು. ಅಂತಹ ಟೀಚರ್ಸ್‌ಗೆ ದಯಮಾಡಿ ರಕ್ಷಣೆ ಕೊಡಬೇಕು. ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರದಲ್ಲಿ ಭರವಸೆ ಕೊಡಬೇಕು. ಆದುದರಿಂದ ಇಲ್ಲಿರತಕ್ಕಂಥಾ ಉಪಾಧ್ಯಾಯರುಗಳನ್ನು ಬಾಲವಾಡಿಯಲ್ಲೇ ಇರುವ ಹಾಗೆ ಅವರಿಗೆ ಪ್ರೊಟೆಕ್ಷನ್ ಕೊಡಬೇಕು. ತಾಲ್ಲೂಕಾ ಬೋರ್ಡ್ ವತಿಯಿಂದ ನಡೆಸುತ್ತಿರುವ ಶಾಲೆಗಳ ಉಪಾಧ್ಯಾಯರುಗಳಿಗೆ ಸಂರಕ್ಷಣೆ ಕೊಡಬೇಕು ಎಂದು ಹೇಳುತ್ತೇನೆ,

ಎರಡನೆಯದಾಗಿ ಪಿಹೆಚ್‌ಇನಲ್ಲಿ ಸರಿಯಾದ ಉಪಕರಣಗಳು ಇಲ್ಲ. ನಮ್ಮ ಗುಲ್ಬರ್ಗ ಜಿಲ್ಲಾ ತೆಗೆದುಕೊಂಡರೆ ೪-೫ ತಾಲ್ಲೂಕುಗಳಿಗೆ ಒಬ್ಬ ಇಂಜಿನಿಯರ್ ಇರುತ್ತಾನೆ. ಅಲ್ಲ ಬೇಕಾದ ಉಪಕರಣಗಳೂ ಇಲ್ಲ. ಅವನು ಸಾವಿರಾರು ಹಳ್ಳಿಗಳನ್ನು ನೋಡಬೇಕಾಗುತ್ತದೆ, ಅದು ಬಹಳ ಕಷ್ಟವಾಗುತ್ತದೆ. ಆದುದರಿಂದ ಪಿ.ಡಬ್ಲ್ಯು ಡಿ ತರಹ ಇಲ್ಲಿ ವ್ಯವಸ್ಥೆ ಮಾಡುವುದಕ್ಕಾಗುವುದಿಲ್ಲವೇ ? ಈಗ ತಾವು ಎಲ್ಲಾ ಕಡೆಯಲ್ಲೂ ಬೋರ್‌ವೆಲ್ ತೆಗಿಸಿದ್ದೀರಿ. ಅದಕ್ಕೆ ನಾನು ಅಭಿನಂದಿಸುತ್ತೇನೆ. ಒಂದು ಹಳ್ಳಿಗೆ ಬೋರ್‌ವೆಲ್ ಹಾಕುತ್ತೀರಿ. ಮತ್ತೊಂದು ಸಾರಿ ಹೋಗಿ ನೋಡಿದರೆ ಆ ಬೋರ್‌ವೆಲ್ ಕಟ್ಟುಹೋಗಿರುತ್ತದೆ. ಅದನ್ನು ರಿಪೇರಿ ಮಾಡುವುದಕ್ಕೆ ಮೆಕ್ಯಾನಿಕ್ ಇಲ್ಲ, ಉಪಕರಣಗಳು ಇಲ್ಲ. ಈ ತರಹವಾಗಿ ಅವ್ಯವಸ್ಥೆ ಉಂಟಾಗಿದೆ. ಇದಕ್ಕೇನಾದರೂ ಒಂದು ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.— ಈ ಪಿ. ಹೆಚ್. ಇ. ಇಲಾಖೆಗೆ ಪಿ. ಡಬ್ಲ್ಯು. ಡಿ. ನಿಂದ ಡೆಪ್ಯೂಟೇಶನ್. ಬಂದಿರುತ್ತಾರೆ. ಆ ಇಲಾಖೆಯಿಂದ ಇದಕ್ಕೆ ಭರ್ತಿ ಮಾಡಬೇಕಾಗಿದೆ, ಇದಕ್ಕೆ ಸಪರೇಟ್ ರೂಲ್ಸ್ ಇಲ್ಲ. ತಾವು ಹೇಳಿದ ಹಾಗೆ ಅಲ್ಲಿ ಮೆಕ್ಯಾನಿಕ್ಸ್ ಇಲ್ಲ ಅನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ ಬಗ್ಗೆ ಅನೇಕ ವೈಫಲ್ಯಗಳು ಇವೆ. ಆದುದರಿಂದ ನಾವು ಮುಂದಿನ ವರ್ಷ ರೂರಲ್ ಇಂಜನೀಯರಿಂಗ್ ಸರ್ವಿಸ್ ಅಂತ ಒಂದು ಸಪರೇಟ್ ಸಿ ಅಂಡ್ ಆರ್ ಮಾಡಿ ಈ ಕೊರತೆಯನ್ನು ತುಂಬುವುದಕ್ಕೆ ಒಂದು ಯೋಜನೆ ಮಾಡಿಕೊಂಡಿದ್ದೇವೆ. ಈ ಪ್ರೋಗ್ರಾಂ ಮುಂದಿನ ವರ್ಷದಿಂದ ಜಾರಿಗೆ ತರುವ ವ್ಯವಸ್ಥೆ ಮಾಡುತ್ತೇವೆ. ಇನ್ನು ಮಾನ್ಯ ಸದಸ್ಯರು ಬಾಲವಾಡಿ ವಿಷಯದ ಬಗ್ಗೆ ಹೇಳಿದ್ದಾರೆ. ಆ ವಿಷಯ ನನಗೆ ಗೊತ್ತಿಲ್ಲ. ಅದೇನಾದರೂ ಎ.ಸಿ.ಪಿ.ಎಸ್. ಪ್ರೋಗ್ರಾಂನಲ್ಲಿ ದರೆ ಅದು ಬೇರೆ. ಆ ಬಗ್ಗೆ ಯಾರಿಗಾದರೂ ತೊಂದರೆಯಾಗಿದ್ದರೆ ಯಾರಿಗೆ ಯಾವ ಕಡೆಯಲ್ಲಿ ತೊಂದರೆಯಾಗಿದೆ ಅದನ್ನು ನೋಡಿಕೊಳ್ಳುತ್ತೇವೆ. ಸಪರೇಟ್ ಆಗಿ ಬರೆದು ಕಳುಹಿಸಿ.

ಶ್ರೀ ಕೆ, ಬಿ. ಶಾನಪ್ಪ.—ಅವರಿಗೆ ಏನಾದರೂ ಟ್ರಾನ್ಸ್‌ಫರ್ ಮಾಡಿದರೆ ಅವರ ಸೀನಿಯಾರಿಟಿ, ಪೇ ಪ್ರೊಟೆಕ್ಷನ್ ಇತ್ಯಾದಿ ಎಲ್ಲಾ ಕೊಡಬೇಕು,

ಶ್ರೀ ಅಬ್ದುಲ್ ನಜೀರ್ ಸಾಬ್.—ಯಾರಿಗಾದರೂ ಏನಾದರೂ ತೊಂದರೆಯಾಗಿದ್ದರೆ ಬರೆದು ಕಳುಹಿಸಿ, ನಾನು ನೋಡುತ್ತೇನೆಂದು ಮೊದಲೇ ಹೇಳಿದನಲ್ಲಾ,

ಶ್ರೀ ಬಸವರಾಜರಾಯರೆಡ್ಡಿ.—ಹೋದ ವರ್ಷ ಎನ್. ಆರ್. ಡಬ್ಲ್ಯು. ಎಸ್ ಸ್ಕೀಂಗೆ ೨೦ ಕೋಟಿ ರೂಪಾಯಿ ಇಟ್ಟಿದ್ದರು. ಈ ವರ್ಷದ ಬಜೆಟ್ಟಿನಲ್ಲಿ ೧೫ ಕೋಟಿ ರೂಪಾಯಿ ಇಟ್ಟಿದ್ದಾರೆ. ಈ ಸಾರಿ ೫ ಕೋಟಿ ರೂಪಾಯಿ ಕಡಿಮೆ ಮಾಡಿದ್ದಾರೆ. ಮತ್ತು ೨ ಸಾವಿರ ಜನಸಂಖ್ಯೆ ಇರತಕ್ಕಂಥ ಎಲ್ಲಾ ಗ್ರಾಮಗಳಿಗೂ ಕೂಡ ಕುಡಿಯುವ ನೀರು ಕೊಡುತ್ತೇವೆಂದು ಹೇಳಿದ್ದಾರೆ. ಹಾಗಿದ್ದರೂ ಈ ವರ್ಷದ ಬಜೆಟ್‌ನಲ್ಲಿ ೫ ಕೋಟಿ ರೂಪಾಯಿ ಕಡಿಮೆ ಮಾಡಿದ್ದಾರಲ್ಲಾ ಇದು ಸರಿಯೇ ? ರಾಜ್ಯದಲ್ಲಿ ಹೆಚ್ಚು ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಕಾರ್ಯಕ್ರಮ ಏನಾದರೂ ಇದೆಯೇ ?

ಎರಡನೆಯದಾಗಿ, ವಿಂಡ್‌ಮಿಲ್ಸ್ ಬಗ್ಗೆ ಹೇಳಿಲ್ಲ. ಯಾವ ಯಾವ ಜಿಲ್ಲೆಯಲ್ಲಿ ತುಂತುರು ಯೋಜನೆ ಎಷ್ಟೆಷ್ಟು ತೆಗೆದುಕೊಂಡಿದ್ದೀರಿ ಅನ್ನುವುದನ್ನು ಹೇಳಲಿಲ್ಲ. ಅದು ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಂ ಡಿ.ಪಿ.ಎ.ಪಿ. ಪ್ರೋಗ್ರಾಂನಲ್ಲಿ ಈ ತುಂತುರು ಯೋಜನೆಗೆ ಅವರು ೧೦೦ ಪರ್ಸೆಂಟ್ ಸಬ್ಸಿಡಿ ಕೊಡುತ್ತಾರೆ. ಆದರೆ ಸೆಂಟ್ರಲ್ ಸ್ಕೀಮಿನಲ್ಲಿ ಆ ತರಹ ಇಲ್ಲ. ಕೆಲವರಿಗೆ ೫೦ ಪರ್ಸೆಂಟ್ ೨೫ ಪರ್ಸೆಂಟ್ ಸಬ್ಸಿಡಿ ಕೊಡುತ್ತಾರೆ ಆದುದರಿಂದ ಈ ತಾರತಮ್ಯವನ್ನು ಹೋಗಲಾಡಿಸಿ ಈ ಒಂದು ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಂನಲ್ಲಿ ಸಹ ೧೦೦ ಪರ್ಸೆಂಟ್ ಸಬ್ಸಿಡಿ ಕೊಡಬೇಕೆಂದು ಹೇಳುತ್ತೇನೆ. ಇನ್ನೊಂದು ಪಂಪ್ಸ್ ಮತ್ತು ಮೋಟರ್ಸ್ ಬಗ್ಗೆ ಸಚಿವರು ಹೇಳಿದರು ನಿರ್ಧಿಷ್ಟವಾಗಿ ಇಂತಹ ಕಂಪನಿಗಳ ಮೋಟರ್‌ಗಳು ಕೆಲಸ ಮಾಡದಿದ್ದರೆ ಅದನ್ನು ತೆಗೆದುಹಾಕುತ್ತೇವೆಂದು ಹೇಳಿದರು. ತಮಗೆ ಹೇಳಬೇಕಾದರೆ ನಮ್ಮ ತಾಲ್ಲೂಕಿನಲ್ಲಿ ಇವರು ಏನು ಪಂಪ್‌ಸೆಟ್ಸ್ ಕೊಟ್ಟಿದ್ದಾರೆ ಅವೆಲ್ಲಾ ಕೆಟ್ಟುಹೋಗಿದೆ. ಕಳಪೆ ಪಂಪ್‌ಸೆಟ್ಸನ್ನು ಒದಗಿಸಿಕೊಟ್ಟಿದ್ದಾರೆ. ಇದರಿಂದ ಸರ್ಕಾರಕ್ಕೆ ಬೇಕಾದಷ್ಟು ಹಣ ಅಪವ್ಯಯವಾಗುವುದಿಲ್ಲವೇ ? ಈ ಬಗ್ಗೆ ತಾವು ನಿಗಾ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಪ್ಯಾಕೇಜ್ ಜೋನ್ ಏರಿಯಾ ವಾಟರ್ ಸಪ್ಲೈ ಬೋರ್ಡ್ ಮಾಡಿ ಎಂದು ಹೇಳಿದೆ ನಾನು ಕೆಲಸ ಏನೂ ಮಾಡಿಲ್ಲವೆಂದು ಹೇಳಿಲ್ಲ. ಉದಾಹರಣೆಗೆ ಒಂದು ಗ್ರಾಮದಲ್ಲಿ ಎಲ್ಲಾ ಗ್ರಾಮಗಳಿಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದಾರೆ. ಅದಕ್ಕೆ ಅಭಿನಂದನೆಗಳು ಆದರೆ ಇನ್‌ಟೆನ್ಸೀವ್ ಆಗಿ ಈ ವಾಟರ್ ಸಪ್ಲೈ ಯೋಜನೆಯನ್ನು ತೆಗೆದುಕೊಂಡರೆ ಎಲ್ಲಾ ಗ್ರಾಮಗಳಿಗೆ ನೀರು ಕೊಡುವುದಕ್ಕೆ ಸಾಧ್ಯವಾಗುತ್ತದೆ.

ಇನ್ನು ವಕ್ಫ್ ಬೋರ್ಡ್ ಬಗ್ಗೆ ಹೇಳುವುದಾದರೆ ಇದರಲ್ಲಿ ಯಾರೂ ಕೂಡ ಮಹಿಳಾ ಸದಸ್ಯರಿಲ್ಲ. ಜಿಲ್ಲಾ ಪರಿಷತ್ತುಗಳಲ್ಲಿ ಯಾವರೀತಿಯಾಗಿ ಮಹಿಳೆಯರಿಗೆ ಮೀಸಲಾತಿ ಇಟ್ಟಿದ್ದೀರೋ ಅದೇ ರೀತಿಯಾಗಿ ವಕ್ಫ್ ಬೋರ್ಡ್‌ನಲ್ಲೂ ಮಹಿಳಾ ಸದಸ್ಯರನ್ನು ಏತಕ್ಕೆ ಮಾಡಬಾರದು. ಇನ್ನೊಂದು ವಿಷಯ ಏನೆಂದರೆ ವಕ್ಫ್ ಬೋರ್ಡ್‌ನಲ್ಲಿ ಜೂನಿಯರ್ ಇಂಜಿನೀಯರ್ಸ್ ಇಲ್ಲ. ಈಗ ಎಲ್ಲಾ ತಾಲ್ಲೂಕಿನಲ್ಲೂ, ಎಲ್ಲ ಹಳ್ಳಿಗಳಲ್ಲೂ ವಕ್ಫ್ ಬೋರ್ಡ್ ಇರುವುದರಿಂದ ಈಗ ವಕ್ ಬೋರ್ಡ್ ಏನು ಅನ್ನುವುದು ಎಲ್ಲರಿಗೂ ಗೊತ್ತಿದೆ. ಆದುದರಿಂದ ಆ ವಕ್ಫ್ ಬೋರ್ಡ್‌ಗೆ ಒಬ್ಬ ಜೂನಿಯರ್ ಇಂಜಿನೀಯರನ್ನು ಇಡಲು ಟೆಕ್ನಿಕಲ್ ಸ್ಯಾಂಕ್ಷನ್ ಕೊಟ್ಟರೆ ಅಲ್ಲಿ ಬರತಕ್ಕಂಥ ಹಣ ಸದುಪಯೋಗವಾಗುತ್ತದೆ. ಹಾಗೆ ಮಾಡುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್— ಮಾನ್ಯ ಸದಸ್ಯರು ಬಜೆಟ್ಟಿನಲ್ಲಿ ಎನ್.ಆರ್ ಡಬ್ಲ್ಯು.ಎಸ್ ಸ್ಕೀಂಗೆ ಹೋದ ಸಲ ೨೦ ಕೋಟಿ ರೂಪಾಯಿ ಇಟ್ಟಿದ್ದರೆ ಈ ಸಲ ೧೫ ಕೋಟಿ ರೂಪಾಯಿ ಇಟ್ಟಿದ್ದಾರೆನ್ನುವ ಮಾತು ಹೇಳಿದರು. ಅದರ ಬಗ್ಗೆ ಹೇಳಬೇಕಾದರೆ ಹೋದ ಸಲ ಇದಕ್ಕೆ ೨೦ ಕೋಟಿ ರೂಪಾಯಿ ಇಟ್ಟಿದ್ದರಲ್ಲಿ ಖರ್ಚು ಆದದ್ದು ೧೫ ಕೋಟಿ ರೂಪಾಯಿ. ಆದರಿಂದ ಅಷ್ಟಕ್ಕೆ ಸೀಮಿತವಾದ ಕೆಲಸಕ್ಕೆ ಈ ಸಲ ಇಡಲಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಭಾಷಣದಲ್ಲಿ ಇದರ ಬಗ್ಗೆ ಹೇಳಿದ್ದಾರೆ ಈ ಕಾರ್ಯಕ್ರಮಕ್ಕೆ ಹೆಚ್ಚು ಹಣವನ್ನು ಒದಗಿಸಿಕೊಡಲಾಗುತ್ತದೆಂದು ಹೇಳಿದ್ದಾರೆ. ಇನ್ನು ಡಿ.ಪಿ.ಎ.ಪಿ ನಲ್ಲಿ ಸ್ಪ್ರಿಂಕ್ಲರ್ ಸಿಸ್ಟಂ ಏನು ಇದೆ ಇದು ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಂ. ಇದಕ್ಕೆ ೧೦೦ಕ್ಕೆ ೧೦೦ ಪರ್ಸೆಂಟ್ ಸಬ್ಸಿಡಿ ಕೊಡುತ್ತಾರೆ. ಆದರೆ ಈ ಸ್ಪ್ರಿಂಕ್ಲರ್‌ನಲ್ಲಿ ಡೆ ಮಾನ್‌ಸ್ಟ್ರೇಷನ್ ಏನು ಇದೆ ಅದಕ್ಕೆ ಮಾತ್ರ ಸಬ್ಸಿಡಿ ೫೦ ಪರ್ಸೆಂಟ್ ಕೊಡುತ್ತಾರೆ. ಈ ಬಗ್ಗೆ ಹೆಚ್ಚು ಸಬ್ಸಿಡಿಯನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ೫೦ ಪರ್ಸೆಂಟ್ ಸಬ್ಸಿಡಿ ಕೊಟ್ಟರೆ ಆ ಒಂದು ಬಾವಿಗೆ ಈ ಸ್ಪ್ರಿಂಕ್ಲರ್ ಸಿಸ್ಟಂ ಅನ್ನು ಅಳವಡಿಸಿ ಹೆಚ್ಚು ನೀರನ್ನು ಬಳಸುವ ಹಾಗೆ ಮಾಡಿಕೊಂಡರೆ ಆ ರೈತನ ಆರ್ಥಿಕ ಪರಿಸ್ಥಿತಿಗೂ ಅನುಕೂಲವಾಗುತ್ತದೆ

ಅವನು ಹಾಕಿದಂಥಾ ಬೆಳೆಗಳಿಗೆ ಹೆಚ್ಚು ನೀರು ಸಿಕ್ಕಿದ ಹಾಗಾಗುತ್ತದೆ. ಆದರೆ ನಾನು ಮೊದಲೇ ಹೇಳಿದ ಹಾಗೆ ಈ ಡಿ.ಪಿ.ಎ.ಪಿ.ನಲ್ಲಿ ಸ್ಪ್ರಿಂಕ್ಲರ್ ಸಿಸ್ಟಂ ಯೋಜನೆ ಏನು ಮಾಡಿದ್ದಾರೆ ಅದಕ್ಕೆ ೧೦೦ಕ್ಕೆ ೧೦೦ರಷ್ಟು ಸಬ್ಸಿಡಿ ಕೊಡುತ್ತಾರೆ. ಆದರೆ ಅದರ ಮ್ಯಾನೇಜ್‌ಮೆಂಟನ್ನು ಅವರೇ ಮಾಡಿಕೊಳ್ಳಬೇಕು. ಅವರಿಗೆ ವಾಟರ್‌ರೇಟ್ ಹಾಕುತ್ತೇವೆ, ಈ ವಾಟರ್‌ರೇಟ್ ನೋ ಪ್ರಾಫಿಟ್ ನೋಲಾಸ್ ಬೇಸಿಸ್ ಮೇಲೆ ವಸೂಲ್ಮಾಡುತ್ತೇವೆ. ಅದಕ್ಕಾಗಿ ಈಗಾಗಲೇ ೨ ಕೋಟಿ ರೂಪಾಯಿ ಕೊಟ್ಟಿದ್ದೇವೆ. ಇನ್ನು ವಕ್ಫ್ ಬೋರ್ಡಿಗೆ ಇಂಜನೀಯರ್ಸ್ ಅವರನ್ನು ನೇಮಿಸಬೇಕೆಂದು ಹೇಳಿದ್ದಾರೆ. ಅವರ ಆದಾಯದಲ್ಲಿ ಜ್ಯೂನಿಯರ್ ಇಂಜನಿಯರ್. ಅಥವಾ ಕ್ಲರ್ಕ್ ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಈಗ ಇರತಕ್ಕಂಥ ವಕ್ಸ್ ಬೋರ್ಡ್‌ನ ಆದಾಯ ನೋಡಿದರೆ, ಅದು ಖೋತಾ ಬಜೆಟ್ಟಿನಲ್ಲಿ ನಡೆಯುತ್ತದೆ. ಅಷ್ಟು ಆದಾಯ ಬರುತ್ತಾ ಇಲ್ಲ. ಬೇಕಾದರೆ ವಕ್ಫ್ ಬೋರ್ಡ್‌ನವರೇ ಅವರ ದುಡ್ಡಿನಲ್ಲಿ ಒಬ್ಬ ಜೂನಿಯರ್ ಇಂಜನೀಯರ್‌ನ್ನು ಇಟ್ಟುಕೊಳ್ಳುವುದಕ್ಕಾಗುವುದಿಲ್ಲ ಅದನ್ನು ನೀವೇನಾದರೂ ಸಹಾಯ ಮಾಡಿದರೆ ಜೂನಿಯರ್ ಇಂಜಿನಿಯರ್ ಹತ್ತಿರ ಎಸ್ಟಿಮೇಟ್ಸ್ ಮಾಡಿ ಕಳಿಸಿ, ಮಾಡಿಕೊಡೋಣ. ಇನ್ನು ಇದಕ್ಕೆ ಬೇಕಾದ ಪಂಪ್‌ನ್ನು ತೆಗೆದುಕೊಳ್ಳಬೇಕಾದರೆ ಈ ಬಗ್ಗೆ ನೇಮಿಸಿರತಕ್ಕಂಥಾ ಎಸ್.ಪಿ.ಡಿ. ಅವರಿಂದಲೇ ಕೊಂಡುಕೊಳ್ಳಬೇಕಾಗುತ್ತದೆ. ಅವರ ಹತ್ತಿರ ಕೊಂಡುಕೊಳ್ಳದೇ ಬೇರೆ ಎಲ್ಲಾದರೂ ಕೊಂಡುಕೊಂಡರೆ ಅವೆಲ್ಲಾ ಗೋಲ್‌ಮಾಲ್ ಆಗಿಬಿಟ್ಟರೆ ಕಷ್ಟ ಆದುದರಿಂದ ಅವರ ಅವರ ಹತ್ತಿರವೇ ಕೊಂಡುಕೊಳ್ಳ ಬೇಕಾಗಂತ್ತದೆ.

ಶ್ರೀ ಉಸ್ತಾದ್ ಮಹಬೂಬ್ ಪಟೇಲ್ ಲಾಡ್ಲೆ ಪಟೇಲ್— ಸನ್ಮಾನ್ಯ ಅಧ್ಯಕ್ಷರೇ, ಈಗ ತಾನೇ ಮಾನ್ಯ ಸಚಿವರು ಹೇಳಿದರು. ವಕ್ಸ್ ಬೋರ್ಡ್ ಬಗ್ಗೆ ವಾರ್ಷಿಕ ವರದಿ ಕೊಡುವುದಕ್ಕಾಗುವುದಿಲ್ಲ, ಮುಂದಿನ ವರ್ಷ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಈ ವಕ್ಫ್ ಬೋರ್ಡ್ ಬಗ್ಗೆ ಇದರ ವರದಿ ಬಂದ ನಂತರ ನಮಗೆ ಚನ್ನಾಗಿ ತಿಳಿಯುತ್ತದೆ.

ಇನ್ನೊಂದು ವಿಷಯ ಏನೆಂದರೆ, ಮುತವಲ್ಲಿಷಿಪ್ ಬಗ್ಗೆ ಹೇಳುತ್ತೇನೆ. ಈ ಒಂದು ಹೆರಿಡಿಟರಿ ರೈಟ್ಸ್ ೨೦೦-೩೦೦ ವರ್ಷದಿಂದಲೂ ಬಂದಿರತಕ್ಕಂಥಾದ್ದು. ಅದನ್ನು ಈಗ ತೆಗೆಯಲಿಕ್ಕೆ ಯಾರ ಕೈಯ್ಯಲ್ಲೂ ಆಗುವುದಿಲ್ಲ. ಇದರಲ್ಲಿ ಒಂದು ರೀತಿಯಾಗಿ ಮಿಸ್‌ಮ್ಯಾನೇಜ್‌ಮೆಂಟ್ ನಡೆದಿದೆ. ಈ ಸಂಸ್ಥೆಯಲ್ಲಿ ಈ ಹೆರಿಡಿಟರಿಶಿಪ್ ಅನ್ನು ಕಿತ್ತು ಮತ್ತೊಬ್ಬರನ್ನು ನೇಮಕ ಮಾಡಲಿಕ್ಕೆ ಹತ್ತಿದ್ದಾರೆ. ತಮಗೆ ಹೇಳಬೇಕಾದರೆ ಬಿಜಾಪುರ ಸಿಟಿಯಲ್ಲಿ ಈ ಕೆಲಸ ನಡೆಯುತ್ತಾ ಇದೆ. ಈ ಹೆರಿಡಿಟರಿ ರೈಟ್ಸ್ ಬ್ರಿಟಿಷರ ಕಾಲದಿಂದಲೂ ನಡೆದುಕೊಂಡು ಬಂದಿದೆ. ಈಗ ಇದನ್ನು ಕಿತ್ತು ಬೇರೆಯವರಿಗೆ ಕೊಡುವು ದಕ್ಕೆ ಹೊರಟಿದ್ದಾರೆ. ವಕ್ಫ್ ಬೋರ್ಡ್ ಛೇರ್ಮನ್‌ರು ಅವರಿಂದ ಕಬ್ಜ ತೆಗೆದುಕೊಂಡಿದ್ದಾರೆ. ಎರಡನೆಯದಾಗಿ ಈ ವಕ್ಫ್ ಪ್ರಾಪರ್ಟಿ ಏನು ಇದೆ ಇದನ್ನು ಎನ್‌ಕ್ರೋಚ್‌ಮೆಂಟ್ ಮಾಡಿದ್ದಾರೆ. ಹೋದ ಸಲವೂ ಸಹ ನಾನು ಇದರ ಬಗ್ಗೆ ಪ್ರಸ್ತಾಪ ಮಾಡಿದೆ. ಮತ್ತೆ ಒಂದು ಗೌರ್ನ್‌ಮೆಂಟ್ ಆರ್ಡರ್ ಮಾಡಿ ಅದನ್ನು ವಾಪಸ್ ಮಾಡಬೇಕು ಎಂದು ಮಾಡಿದರೂ ಸಹ ಮಾಡಿಲ್ಲ ಇದರ ಬಗ್ಗೆ ಇದುವರೆಗೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಈಗಲಾದರೂ ಕಾರ್ಯಕ್ರಮ ತೆಗೆದು ಕೊಳ್ಳುತ್ತೀರಾ?

ಮೂರನೆಯದಾಗಿ ಈ ಬೋರ್‌ವೆಲ್ ರಿಗ್ಸ್ ಬಗ್ಗೆ ಹೇಳಬೇಕಾದರೆ ಹೋದ ಸಲ ಮಾನ್ಯ ಸಚಿವರಿಗೆ ಹೇಳಿದ್ದೆ, ಏನೆಂದರೆ ಕರ್ನಾಟಕ ರಾಜ್ಯದಲ್ಲಿ ಒಬ್ಬ ಕನ್ನಡಿಗ ಆತನು ನಮ್ಮ ಜಿಲ್ಲೆಯವನೇ ಆತನು ಬೆಂಗಳೂರಿನಲ್ಲಿ ಒಂದು ಫ್ಯಾಕ್ಟರಿ ಇಟ್ಟು ರಿಗ್ಸ್‌ನ್ನು ತಯಾರು ಮಾಡುತ್ತಿದ್ದಾನೆಂದು. ಬಹುಶಃ ಒಂದು ರಿಗ್ಸ್ ಕಿಮ್ಮತ್ತು ೭೦-೮೦ ಸಾವಿರ ರೂಪಾಯಿ ಆಗಬಹುದು. ಈಗ ಇದರಲ್ಲಿ ಏನಾಗಿದೆ ಎಂದರೆ ಎರಡು ವರ್ಷದಿಂದಲೂ ಕೂಡ ಇದಕ್ಕೆ ಆತ ಟೆಂಡರ್ ಕರೆದಾಗ ಟೆಂಡರ್ ಹಾಕಿದರೂ ಯಾವ ಕನ್ನಡಿಗನಿಗೆ ಬೆಂಗಳೂರಿನಲ್ಲಿ ಫ್ಯಾಕ್ಟರಿಯನ್ನು ಇಟ್ಟು ಇದನ್ನು ತಯಾರು ಮಾಡುತ್ತಿದ್ದಾನೋ ಅವನ ಹತ್ತಿರ ಪರ್ಚೇಸ್ ಮಾಡಿಲ್ಲ. ಇದನ್ನು ಪರ್ಚೇಸ್ ಮಾಡುವುದಕ್ಕೆ ಬೇರೆಯೇ ಒಂದು ಕಂಪನಿ ಇದೆ. ಇದನ್ನು ತಾವು ಲಘುವಾಗಿ ಪರಿಗಣಿಸಬೇಡಿ. ಕಲ್ಕತ್ತಾ ಒಂದು ಕಂಪನಿಗೆ ಕೋಟ್ಯಾಂತರ ರೂಪಾಯಿ ಕೊಟ್ಟು ಅವರ ಹತ್ತಿರ ಪರ್ಚೇಸ್ ಮಾಡಿದ್ದಾರೆ. ಇಲ್ಲಿ ಇರುವ ಕನ್ನಡಿಗನಿಗೆ ಟೆಂಡರ್ ಹಾಕಿದರೂ ಅವನಿಗೆ ಕೊಟ್ಟಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್— ಈ ಮಂತ್ರಿವಳ್ಳಿ ಹೆರಿಡಿಟರಿಶಿಪ್‌ಗೆ ನಾನೇ ಅಪಲೆಟ್ ಅಥಾರಿಟಿ ಅದನ್ನು ಹಿಯರಿಂಗ್ ಮಾಡುವ ಅಧಿಕಾರ ನನಗೆ ಇದೆ. ಇದುವರೆಗೆ ಯಾವ ಒಂದು ಕೇಸ್ ಸಹ ಆ ತರಹದ್ದು ಬಂದಿಲ್ಲ. ಈಗ ತಾವು ಹೇಳಿದ್ದೀರಿ. ಆ ಕೇಸ್ ಹಿಯರಿಂಗ್ ಬಂದರೆ ನೀವು ಹೇಳಿದ ವಿಚಾರವನ್ನು ನೋಡುತ್ತೇನೆ. ಇದುವರೆಗೂ ಯಾವುದೇ ಮಂತ್ರಿವಳ್ಳಿ ಹೆರಿಡಿಟರಿ ರೈಟ್ಸ್‌ನ್ನೂ ತೆಗೆಯುವಂತೆ ಏನೂ ಮಾಡಿಲ್ಲ. ಇದರ ಬಗ್ಗೆ ಒಬ್ಬರು ಅಪೀಲು ಮಾಡಿದ್ದಾರೆ. ಅದು ಅಪೀಲ್‌ಗೆ ಈಗ ತಾನೇ ನನ್ನ ಹತ್ತಿರ ಬಂದಿದೆ. ಅದನ್ನು ನಾನು ವಿಚಾರ ಮಾಡುತ್ತೇನೆ. ಇನ್ನು ಎರಡನೆಯದಾಗಿ ಸರ್ಕಾರೀ ಕಬ್ಬನ್ನು ಬಿಡುಗಡೆ ಮಾಡುವಾಗ ಅದನ್ನು ಕಟ್ಟುನಿಟ್ಟಾಗಿ ಮಾಡುವಂತೆ ಆದೇಶ ಕೊಟ್ಟಿದ್ದೇನೆ. ಅದರ ಬಗ್ಗೆ ಏನಾದರೂ ಅವ್ಯವಹಾರ, ಅನ್ಯಾಯ ನಡೆದರೆ ಅದಕ್ಕೆ ಒಂದು ಎನ್‌ಕ್ವೈರಿ ಕಮೀಷನ್ ಮಾಡಿದ್ದೇನೆ. ಅದರಲ್ಲಿ ಡಿಸ್‌ಪ್ಯೂಟ್ ಏನಾದರೂ ಇದ್ದರೆ ಅದರ ಬಗ್ಗೆ ದಸ್ತಾವೇಜ್ ತಯಾರು ಮಾಡುವುದಕ್ಕೆ ಆದೇಶ ಕೊಟ್ಟಿದ್ದೇನೆ. ಇನ್ನು ಮಾನ್ಯ ಸದಸ್ಯರು ರಿಗ್ಸ್ ಬಗ್ಗೆ ಹೇಳಿದರು. ರಿಗ್ಸ್‌ಗೆ ಆಗಲಿ ಸ್ಪೇರ್‌ಪಾರ್ಟ್ಸ್‌ಗಾಗಲಿ ಟೆಂಡರ್ ಕರೆಯಬೇಕು. ಅದರಲ್ಲಿ ಕ್ರಿಟಿಕಲ್ ಮತ್ತು ನಾನ್ ಕ್ರಿಟಿಕಲ್ ಅಂತ ಇದೆ. ಕೆಲವರು ಗುಂಚರಿಯಲ್ಲಿ ತಂದು ಬಣ್ಣ ಬಳಿದು ಕೊಡುತ್ತಾರೆ. ಅಂಥಾದ್ದನ್ನು ಕಂಪನಿಯವರು ಒಪ್ಪುವುದಿಲ್ಲ. ರಿಗ್ಸ್ ಯಾರಿಂದ ತೆಗೆದುಕೊಳ್ಳುತ್ತೇವೋ ಅವರು ಗ್ಯಾರಂಟಿ ಕೊಡಬೇಕು. ಯಾರು ಗ್ಯಾರಂಟಿ ಕೊಡುತ್ತಾರೋ ಅವರಿಂದ ತೆಗೆದುಕೊಳ್ಳುತ್ತೇವೆ. ಇಲ್ಲಿ ನಮ್ಮವರೇ ಇದ್ದರು ಅವರಿಂದ ಏತಕ್ಕೆ ಪರ್ಚೇಸ್ ಮಾಡಲಿಲ್ಲ ಎಂದರೆ ಇದಕ್ಕೆ ಅವರದ್ದು ನಾನ್ ಕ್ರಿಟಿಕಲ್ ಐಟಂ ಇದ್ದರೆ ಏನು ಟೆಂಡರ್ ಕರೆಯುತ್ತಾರೆ. ಆ ಟೆಂಡರ್‌ನಲ್ಲಿ ಅವರು ಕಡಿಮೆ ಕೊಟ್ಟಿದ್ದರೆ ಅವರಿಂದ ಅಗತ್ಯವಾಗಿ ಗೂಂಡುಕೊಳ್ಳುತ್ತಾರೆ.

ಶ್ರೀ ಎಂ. ಪಿ. ಎಲ್. ಉಸ್ತಾದ್.—If must be of a good quality ಎಂದರೆ ಹೇಳುತ್ತೀರಿ. ಎರಡು ವರ್ಷದ ಹಿಂದೆ ಟೆಂಡರ್ ಕರೆದಿದ್ದರು. ಆ ಟೆಂಡರ್‌ನಲ್ಲಿ ಆರು ರಿಗ್ಸ್ ಪಾಸಾಗಿದೆ. ಅದರಲ್ಲಿ ನೀವು ಎರಡನ್ನು ಮಾತ್ರ ಕೊಂಡುಕೊಂಡಿದ್ದೀರಿ, ಕರ್ನಾಟಕದಲ್ಲಿ ಒಬ್ಬನೇ ಒಬ್ಬ ಕನ್ನಡಿಗನು ತಯಾರು ಮಾಡಿತ್ತಿದ್ದರೂ ನೀವು ಎಲ್ಲಾ ರಿಗ್ಸ್‌ನ್ನು ಕಲ್ಕತ್ತಾ ಕಂಪನಿಯಿಂದ ಏಕೆ ಕೊಂಡುಕೊಳ್ಳುತ್ತೀರಿ ? ಇದರ ಬಗ್ಗೆ ತಾವು ಏನು ಹೇಳುತ್ತೀರಿ ?

ಶ್ರೀ ಅಬ್ದುಲ್ ನಜೀರ್ ಸಾಬ್.— ಕಾನೂನು ಪ್ರಕಾರ ಏನು ಮಾಡಬೇಕು ಅದನು ಮಾಡುತ್ತಿದ್ದೇವೆ. ಅವರು ಯಾವುದೋ ಒಂದನ್ನು ಹೇಳಿದ್ದಾರೆ, ಆದರೂ ಭರವಸೆ ಕೊಡುತ್ತೇನೆ ಮತ್ತು ಚೀಫ್ ಇಂಜನಿಯರ್ ಜೊತೆ ಮಾತನಾಡುವಂತೆ ನಾನು ಬರೆದಿದ್ದೇನೆ ಇದರಲ್ಲಿ ಎರಡು ಇದೆ. ತಾವು ಸ್ವಲ್ಪ ತಿಳಿದುಕೊಳ್ಳಬೇಕು ಇಲ್ಲಿ ಸ್ವಲ್ಪ ಕ್ರಿಟಿಕಲ್ ಇದೆ. ನೀವು ಕನ್ನಡಿಗರು ಎಂದು ಹೇಳಬಹುದು ನೀವು ಎಲ್ಲಿಂದಲೋ ಒಂದು ಸ್ಪೇರ್ ತಗೆದುಕೊಂಡು ಬಂದು ಕೊಟ್ಟರೆ ಆಗುವುದಿಲ್ಲ. ಅದರಿಂದ ನಮ್ಮಲ್ಲಿರತಕ್ಕ ಒಂದು ಲಕ್ಷದ ಕಂಪ್ರೇಸರ್ ಹಾಳಾಗಿಹೋಗುತ್ತದೆ. ನಮಗೆ ಸ್ವಲ್ಪ ಗ್ಯಾರಂಟಿ ಬೇಕು. ಅವರು ಏನು ಹೇಳುತ್ತಾರೆಂದರೆ, ಯಾವುದೋ ಸ್ಪೇರ್ ಸಿಕ್ಕಿತ್ತು, ಹಾಕಿದೆ, ನಾವೇನು ಮಾಡಲಿ ಎಂದು ಹೇಳುತ್ತಾನೆ. ತಾವು ಹೋಗಿ ನಮ್ಮ ಚೀಫ್ ಇಂಜಿನಿಯರ್ ಜೊತೆ ಚರ್ಚೆ ಮಾಡಿ, ಅವರಿಗೆ ಏನಾದರೂ ಅನ್ಯಾಯವಾದರೆ ನನ್ನ ಗಮನಕ್ಕೆ ತನ್ನಿ, ನಾನು ಅದನ್ನು ಸರಿಪಡಿಸುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೇ, ೧೯೭೬ರಲ್ಲಿ ಜೀತ ನಿರ್ಮೂಲನಾ ಪದ್ಧತಿಯಲ್ಲಿ ೬೨,೬೮೦ ಜೀತದಾಳು ವಿಮುಕ್ತರಾಗಿದ್ದಾರೆಂದು ಹೇಳಿದ್ದೀರಿ. ಬಿಡುಗಡೆ ಹೊಂದಿದ ೬೨,೬೪೯ರಲ್ಲಿ ೯,೯೮೭ ಜನರಿಗೆ ಜೀತ ಯೋಜನೆಯ ಅನ್ವಯ ಪುನರ್ ವಸತಿ ಕಲ್ಪಿಸಿದ್ದೇವೆಂದು ಹೇಳಿದ್ದೀರಿ. ೧೯೭೬ ರಿಂದ ೮೬ರವರೆವಿಗೂ ಅಂದರೆ ೧೦ ವರ್ಷ ಎರಡನೆಯ ಒಂದು ಭಾಗದ ಜೀತದಾಳುಗಳಿಗೆ ಪುನರ್ ವಸತಿ ಕಲ್ಪಿಸಿದ್ದೇವೆಂದು ಹೇಳಿದ್ದೀರಿ. ಕೊನೆಯಲ್ಲಿ ಬೆಂಗಳೂರು, ಮೈಸೂರು, ಹಾಸನ ಮಂಡ್ಯ ಮತ್ತು ಶಿವಮೊಗ್ಗ ಜಿಲ್ಲೆಗಳನ್ನು ಹೊರತುಪಡಿಸಿ ಇದನ್ನು ಹೇಳಿದ್ದೀರಿ, ಈ ಜೀತದಾಳುಗಳಲ್ಲಿ ಮುಂದುವರಿದ ಜೀತದಾಳುಗಳು, ಹಿಂದುಳಿದ ಜೀತದಾಳುಗಳು ಅಂತಾ ಏನಾದರೂ ಇದ್ದರೆ ದಯವಿಟ್ಟು ತಿಳಿಸಿ. ಏಕೆಂದರೆ ಈ ಜಿಲ್ಲೆಗಳನ್ನು ಹೊರತುಪಡಿಸಿ ಬಾಕಿ ಜಿಲ್ಲೆಗಳಲ್ಲಿ ಪುನರ್ ವಸತಿ ಕಲ್ಪಿಸಿದ್ದೇವೆಂದು ಹೇಳಿದ್ದೀರಿ. ಈ ರೀತಿ ಏಕೆ ? ಈ ಜಿಲ್ಲೆಯ ಜೀತದಾಳುಗಳು ಮುಂದುವರಿದ ಜೀತದಾಳುಗಳೇ ದಯವಿಟ್ಟು ತಿಳಿಸಿ ? ಬಾಕಿ ಜಿಲ್ಲೆಯ ಜೀತದಾಳುಗಳು ಹಿಂದುಳಿದವರೇ ತಿಳಿಸಿ.

ಶ್ರೀ ಅಬ್ದುಲ್ ನಜೀರ್ ಸಾಬ್.—ಹೊರತುಪಡಿಸಿ ಎಂದರೆ, ಈಗಾಗಲೇ ಅಲ್ಲಿ ಪುನರ್ ವಸತಿ ಆಗಿಬಿಟ್ಟಿದೆ, ಇಲ್ಲಿ ಪುನರ್ ವಸತಿ ಆಗಿಲ್ಲ. ೬೨,೦೦೦ ಜನರಲ್ಲೇ ಮೈಸೂರು ಜಿಲ್ಲೆಯಲ್ಲಿ ೨೫,೦೦೦ ಸಾವಿರ

ಜನರಿದ್ದಾರೆ. ಸಂಖ್ಯೆ ದೃಷ್ಟಿಯಿಂದ ಮೂರನೆಯ ಒಂದು ಭಾಗ ಒಂದೇ ಜಿಲ್ಲೆಯಲ್ಲಿದ್ದಾರೆ. ನಾಲ್ಕು ಜಿಲ್ಲೆಗಳಲ್ಲಿ ೮೦ ರಷ್ಟು ಜೀತದಾಳುಗಳು ಇದ್ದಾರೆ. ಪುನರ್ ವಸತಿ ಹಾಗುವಾಗ ಕೇಂದ್ರ ಸರ್ಕಾರದಿಂದ ಸಹಾಯ ಏನು ಇದೆ, ಅವರು ಎಷ್ಟು ನಿಗದಿ ಮಾಡಿದ್ದಾರೆ ಅದರ ಪ್ರಕಾರ ನಾವು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಅದರ ಪ್ರಕಾರ ನಾವು ಚಿಂತನೆ ಮಾಡುತ್ತೇವೆ, ಅದಕ್ಕೆ ಬೇಕಾಗಿರುವ ಹಣವನ್ನು ಮತ್ತು ವಿಶೇಷವಾದ ಸಿಬ್ಬಂದಿಯನ್ನು ಒದಗಿಸಿಕೊಂಡು ಈಗಾಗಲೇ ಕೇಂದ್ರಕ್ಕೆ ಒಂದು ವರದಿಯನ್ನು ಕಳುಹಿಸಿಕೊಟ್ಟಿದ್ದೇವೆ. ಮಾನ್ಯ ಬಸವಲಿಂಗಪ್ಪನವರು ಮಂತ್ರಿಯಾಗಿದ್ದಾಗ ಒಂದು ವರದಿಯನ್ನು ತಯಾರು ಮಾಡಿದ್ದರು. ಆ ವರದಿಯನ್ನು ನಾವು ಇಟ್ಟುಕೊಂಡು ೨೦,೦೦೦ ರೂಪಾಯಿಗಳನ್ನು ಪರ್ ಯೂನಿಟ್‌ಗೆ ಕೊಡುವುದಾದರೆ ಮಾತ್ರ ಅವರುಗಳು ಸಾಮೂಹಿಕವಾಗಿ ಬದುಕತಕ್ಕ ವ್ಯವಸ್ಥೆಯನ್ನು ನಿರ್ಮಾಣ ಮಾಡಬಹುದು ಇಲ್ಲದಿದ್ದರೆ ಅನೇಕ ರೀತಿಯ ಅನಿಷ್ಟಗಳಿಗೆ ಭ್ರಷ್ಟಾಚಾರಕ್ಕೆ ಅವಕಾಶ ವಾಗುತ್ತದೆ. ಇದರಿಂದ ಜೀತದಾಳುಗಳಿಗೆ meaningful rehabilitation ಅಥವಾ ಪುನರ್ ವಸತಿ ಯಾಗುವುದಿಲ್ಲ ಎನ್ನುವ ಅಭಿಪ್ರಾಯವನ್ನು ಸರ್ಕಾರವು ಕೇಂದ್ರಕ್ಕೆ ಕಳುಹಿಸಿದೆ. ಕೇಂದ್ರ ಸರ್ಕಾರ ನಮ್ಮ ವಾದವನ್ನು ಒಪ್ಪಿಲ್ಲ. ಆದರೂ ನಾಲ್ಕು ಸಾವಿರದಿಂದ ಆರು ಸಾವಿರ ರೂಪಾಯಿಯನ್ನು ಕೊಡುವಂತಹ ಒಂದು ಯೋಜನೆಯನ್ನು ಕೇಂದ್ರ ಸರ್ಕಾರ ಒಪ್ಪಿದೆ. ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡು ಒಂದು ಅಥವಾ ಎರಡು ವರ್ಷದಲ್ಲೇ ಅಥವಾ ಮುಂದಿನ ವರ್ಷವೇ ಉಳಿದಿರತಕ್ಕ ಎಲ್ಲರಿಗೂ ಅಂದರೆ ಕಡುಬಡವರಿಗೆ ಪುನರ್ ವಸತಿ ಮಾಡುವ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ, ತಪ್ಪಿದರೆ ಮುಂದಿನ ಎರಡು ವರ್ಷದಲ್ಲಿ ಎಲ್ಲರಿಗೂ ಪುನರ್ ವಸತಿ ಮಾಡತಕ್ಕ ಯೋಜನೆಯನ್ನು ಕಾರ್ಯಗತ ಮಾಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಈ ಐಆರ್‌ಡಿಪಿ ಸ್ಕೀಮ್‌ನಲ್ಲಿ ಇವರು ಹೇಳುತ್ತಾರೆ, ಒಂದು ಪಂಚಾಯಿತಿಯಲ್ಲಿ ಒಂದು ಸಾವಿರ ಸಂಸಾರಗಳು ಇರುತ್ತವೆ. ಆದರೆ ೬೦ ಸಂಸಾರಗಳಿಗೆ ಮಾತ್ರ ಸಾಲ ಕೊಡುತ್ತಾರೆ, ಅದನ್ನು ಕೂಡ ಬ್ಯಾಂಕ್‌ಗೆ ಲಿಂಕ್ ಮಾಡಿ ಕೊಡುತ್ತೀರಿ. ನಾನು ಏನು ಹೇಳುವುದೇನೆಂದರೆ ಐಆರ್‌ಡಿಪಿಯಲ್ಲಿ ಅಲ್ಲಿರತಕ್ಕ ಕ್ಲಸ್ಟರ್‌ನೆಲ್ಲಾ ಸೆಲೆಕ್ಟ್ ಮಾಡಿ ಬಿಟ್ಟರೆ ದಾರಿದ್ರ್ಯ ನಿವಾರಣೆ ಮಾಡುತ್ತೇವೆಂದು ಹೇಳುತ್ತಾರೆ. ಆದರೆ ಇದು ಆಗುತ್ತಾ ಇಲ್ಲ. ದಯವಿಟ್ಟು ೬೦ ಸಂಸಾರಗಳು ಏನು ಮಾಡುತ್ತೀರಿ ಅದನ್ನು ಜಾಸ್ತಿ ಮಾಡಿ ಅಲ್ಲಿರುವ ಎಲ್ಲಾ ಬಡವರಿಗೆ ಸಹಾಯ ಮಾಡುವ ಪ್ರಯತ್ನ ಮಾಡುತ್ತೀರಾ ? ನಾರ್ಮ್ಸ್ ಅಂತ ಹೇಳಿಬಿಟ್ಟು ಏನೂ ಮಾಡುತ್ತಾ ಇದ್ದೀರಿ, ಅಂದರೆ ತಾಲ್ಲೂಕು ಪ್ಲಾನ್ ಇದೆ ಈ ತಾಲ್ಲೂಕು ಪ್ಲಾನಿಗೆ ಸಾಧಾರಣ ಆರು ಲಕ್ಷ ರೂ. ಕೊಟ್ಟಿದ್ದಾರೆ ಅದರಲ್ಲಿ ಸ್ಕೂಲ್ ಕಟ್ಟಡಕ್ಕೆ ಕೊಡಿ ಎಂದರೆ ನಾರ್ಮ್ಸ್ ಇದೆ. ಆದರ ಪ್ರಕಾರ ೧/೩ ಭಾಗ ಕೊಡುವುದು ಎಂದು ಹೇಳುತ್ತಾರೆ. ನಾವೇ ಆರು ಲಕ್ಷ ಕೊಟ್ಟಿದೆವು. ಶಾಲಾ ಕಟ್ಟಡ ಆಗಲಿ ಎಂದು, ಆ ನಾರ್ಮ್ಸನ್ನು ಸ್ವಲ್ಪ ಬದಲಾವಣೆ ಮಾಡಬೇಕು, ಜೊತೆಗೆ ನಾರ್ಮ್ಸನಲ್ಲಿ ಏನು ಮಾಡಿದ್ದೀರಿ ಎಂದರೆ ರಿಲೀಫ್ ಕಾಮಗಾರಿಗಳಲ್ಲಿ ನಾರ್ಮ್ಸ್ ಹೆಸರಿನಲ್ಲಿ ೬೦ ಪರ್ಸೆಂಟ್ ಲೇಬರ್ಸ್, ೪೦ ಪರ್ಸೆಂಟ್ ಮೆಟೀರಿಯಲ್ಸ್ ಕಾಂಪೋನೆಂಟ್ಸ್ ಎಂದು ಇದೆ. ಈ ಮೆಟೀರಿಯಲ್ ಕಂಪೋನೆಂಟ್ಸ್ ಸ್ವಲ್ಪ ಜಾಸ್ತಿ ಮಾಡಿದರೆ ದುರುಪಯೋಗ ಇರುವುದಿಲ್ಲ, ಇದನ್ನು ಸ್ವಲ್ಪ ಸರಿಮಾಡುತ್ತೀರಾ ಎಂದು ಕೇಳುತ್ತೇನೆ. ಮೊದಲೇ ನಾವು ಕೇಳಿದ್ದೆವು, ಈ ಸೈಕ್ಲೋನ್ ರಿಗ್ಸ್ ಇರುವುದು ಎರಡು ನಮ್ಮ ಕರ್ನಾಟಕ ರಾಜ್ಯದಲ್ಲಿ. ಒಂದು ಕೆಟ್ಟಿದೆ, ಇನ್ನೊಂದು ಉಪಯೋಗವಾಗುತ್ತಿಲ್ಲ ಒಂದೊಂದಕ್ಕೂ ಕೋಟಿ ರೂಪಾಯಿಯಷ್ಟಾಗುತ್ತದೆ. ಇದು ಬಹಳ ಆವಶ್ಯಕತೆ ಇದ್ದು, ಇದನ್ನು ಜಾಸ್ತಿ ತರಿಸುತ್ತೀರಾ ? ಅಷ್ಟೇ ಅಲ್ಲದೆ, ವಕ್ಫ್ ಬೋರ್ಡಿನಲ್ಲಿ ಹಳೆಯ ಹೆಗ್ಗಣಗಳು ಸೇರಿಕೊಂಡು ಬಿಟ್ಟಿವೆ, ಇದು ನಜೀರ್ ಸಾಹೇಬರಿಗೆ ಗೊತ್ತು. ಅವು ರಾಜಕೀಯ ಕೂಡ ಬದಲಾಯಿಸುತ್ತವೆ. ಕಾಂಗ್ರೆಸ್ ಬಂದರೆ ಕಾಂಗ್ರೆಸ್ ಜೊತೆಯಲ್ಲಿ ಇರುತ್ತವೆ, ಜನತಾ ಬಂದರೆ ಜನತಾ ಜೊತೆಯಲ್ಲಿ ಸೇರಿಕೊಳ್ಳುತ್ತವೆ, ಅವು ಕೋಟ್ಯಾಂತರ ರೂಪಾಯಿಗಳನ್ನು ತಿಂದು ಹಾಕಿಬಿಟ್ಟಿವೆ. ಇವುಗಳನ್ನು ಕಂಟ್ರೋಲ್ ಮಾಡಬೇಕು. ದಯವಿಟ್ಟು ಕಂಟ್ರೋಲ್ ಮಾಡಿ ಕೊನೆಯ ಪಕ್ಷ ಹೊಸಬರಿಗೆ ಅಧಿಕಾರ ಕೊಟ್ಟರೆ ಸ್ವಲ್ಪ ಆಸ್ತಿ ಉಳಿಯುತ್ತದೆ ಇಲ್ಲದಿದ್ದರೆ ಆಸ್ತಿಯನ್ನು ಹಾಳು ಮಾಡಿಬಿಡುತ್ತವೆ. ಡಿಸ್ಟ್ರಿಕ್ಟ್ ವಕ್ಫ್ ಬೋರ್ಡ್, ಸ್ಟೇಟ್ ವಕ್ಫ್ ಬೋರ್ಡ್ ಅಂತ ಏನು ಇವೆ ಅದನ್ನು ಬದಲಾಯಿಸಿ ಏನಾದರೂ ಕಂಟ್ರೋಲ್ ಮಾಡುತ್ತೀರಾ ? ಇಲ್ಲದಿದ್ದರೆ ಹೀಗೇಯೇ ಬಿಡುತ್ತೀರಾ ದಯವಿಟ್ಟು ತಿಳಿಸಬೇಕು,

ಶ್ರೀ ಅಬ್ದುಲ್ ನಜೀರ್ ಸಾಬ್.—ಸಭಾಧ್ಯಕ್ಷರೇ ಅವರು ಹೇಳುವುದನ್ನು ನಾನು ಒಪ್ಪುತ್ತೇನೆ. ಈ ಒಂದು ಗ್ರಾಮದಲ್ಲಿ ೬೦ ಜನರನ್ನು ತೆಗೆದುಕೊಳ್ಳುತ್ತೀರಿ ಇದರಿಂದ ಬಡವರಿಗೆ ಅನುಕೂಲವಾಗುವುದಿಲ್ಲ, ಹೆಚ್ಚಾಗಿ ಮಾಡಬೇಕು ಎನ್ನುವುದು ಅವರ ಅಭಿಪ್ರಾಯ ಆದರೆ ಇದು ರಾಷ್ಟ್ರೀಯ ಕಾರ್ಯಕ್ರಮ. ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಒಂದು ಗುರಿಯನ್ನು ನಿಗದಿ ಮಾಡಿದ್ದಾರೆ. ಅದನ್ನು ಹೆಚ್ಚಿಸತಕ್ಕ ಅಧಿಕಾರ ನನಗಿಲ್ಲ. ಆದಕ್ಕೆ ಸಾಕಷ್ಟು ಹಣ ಸಂಪನ್ಮೂಲ ನಮಗಿಲ್ಲ, ನಾನು ಒಪ್ಪುತ್ತೇನೆ, ಬಡತನ ಸಂಪೂರ್ಣವಾಗಿ ಹೋಗುತ್ತದೆ ಎಂಬ ವಿಶ್ವಾಸ ನನಗಿಲ್ಲ.

ಇದೇನೋ ಬಡವರನ್ನು ತೃಪ್ತಿಪಡಿಸತಕ್ಕ ಕಾರ್ಯಕ್ರಮ ಇದು. ಇದು ಬಡವರಿಗಾಗಿ ಇಟ್ಟಿರತಕ್ಕ ಕಾರ್ಯಕ್ರಮ. ಆದರೆ ಬ್ಯಾಂಕುಗಳಿಗೆ ಹೋಗುವುದು ನಿಧಾನವಾಗುತ್ತದೆ. ಪ್ರಧಾನ ಮಂತ್ರಿಯವರು ಡೆಲ್ಲಿ ಯೂನಿವರ್ಸಿಟಿ ವಿದ್ವಾಂಸರಿಂದ ರಿವ್ಯೂ ಮಾಡಿಸಿದರು ಅದರ ಅಂಶ ಏನೆಂದರೆ, at the national level 21% of the beneficiaries have repaid 75% of the loan. 26% of the beneficiaries have repaid the loan between 51% and 75%. Another 21% of the beneficiaries have repaid less than 5% of the loan. Whereas in Karnataka 50% of the beneficiaries have repaid 75% of the loan. Another 15% of the beneficiaries have repaid the loan between 50 and 75%. 18% paid between 20 to 25% less than 10 have paid less than 25%. ಅಂದರೆ ರಿಕವರಿ ಕೂಡ ಚೆನ್ನಾಗಿ ಆಗಿದೆ. ಬ್ಯಾಂಕಿನಲ್ಲಿರತಕ್ಕ ಕಾಲಾವಧಿ ಏನಿದೆ ಅದು ರಾಷ್ಟ್ರೀಯ ಸರಾಸರಿ ಕಾಲಾವಧಿ ೯ ತಿಂಗಳು ಇದ್ದರೆ ಕರ್ನಾಟಕದಲ್ಲಿ ಸ್ಯಾಂಕ್ಷನ್ಸ್ ಪೀರಿಯೇಡ್ ೫ ತಿಂಗಳು. ಎನ್.ಆರ್.ಇ.ಪಿ.ಯಲ್ಲಿ ಕೆಲವು ಶಾಲಾ ಕಟ್ಟಡವನ್ನು ಮಾಡಬೇಕು ಎನ್ನುವುದನ್ನು ಒಪ್ಪುತ್ತೇನೆ. ಇದೂ ಕೂಡ ಒಂದು ರಾಷ್ಟ್ರೀಯ ಕಾರ್ಯಕ್ರಮ. ಅವರು ಕೊಟ್ಟಿರತಕ್ಕ ನಾರ್ಮ್ಸ್‌ನಂತೆ ಕೆಲಸ ಮಾಡಬೇಕು. ಇಲ್ಲದೇ ಹೋದರೆ ಸಹಾಯ ಕೊಡುವುದಿಲ್ಲ. ಮಾನ್ಯ ಸಚಿವರು ಹೇಳಿದರು, ನಾವು ೨-೩ ವರ್ಷಗಳಲ್ಲಿ ೧೦ ಸಾವಿರ ಶಾಲಾ ಕಟ್ಟಡಗಳನ್ನು ಮಾಡಿದ್ದೇವೆ ಎಂದು. ಇನ್ನೂ ಹೆಚ್ಚಿಗೆ ಅವಶ್ಯಕತೆ ಇದೆ ಎಂದು ಗೊತ್ತು. ಆದರೆ ಈ ಕಾರ್ಯಕ್ರಮದಲ್ಲಿ ಹೆಚ್ಚಿಗೆ ಮಾಡುವುದಕ್ಕಾಗುವುದಿಲ್ಲ. ಕೇಂದ್ರ ನಿರ್ದೇಶನಕ್ಕೆ ಅನುಗುಣವಾಗಿ ನಾವು ಕೆಲಸ ಮಾಡಬೇಕು. ಆಮೇಲೆ ವಕ್ಫ್ ಬೋರ್ಡ್ ಬಗ್ಗೆ ಹೇಳಿದರು. ಅವರು ಕಾಂಗ್ರೆಸ್‌ನವರೋ, ಜನತಾದವರೋ, ಕಮ್ಯೂನಿಸ್ಟರೋ ನನಗೆ ಗೊತ್ತಿಲ್ಲ. ಕಾನೂನುಬದ್ಧವಾಗಿ ಆಗಿದ್ದಾರೆ, ಅವರನ್ನು ಬದಲಾಯಿಸುವುದಕ್ಕೆ ಹೋಗಿಲ್ಲ. ನಿಯಮಗಳ ಪ್ರಕಾರ ಮುಂದೆ ಮಾಡುವಾಗ ನಿಮ್ಮ ನಿಮ್ಮ ಕ್ಷೇತ್ರದಿಂದ ಸಲಹೆ ಪಡೆದು ಹಾಕುತ್ತೇವೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ನಜೀರ್ ಸಾಹೇಬರ ಇಲಾಖೆ ಬಹಳ ದೊಡ್ಡ ಇಲಾಖೆ ಆದರೆ ಕಾರ್ಯಾಚರಣೆ ಮಾತ್ರ ಚಿಕ್ಕದಾಗಿದೆ. ಏಕೆಂದರೆ ಚಿಕ್ಕಮಗಳೂರಿನಲ್ಲಿ ಸಬ್-ಡಿವಿಜನ್ ಇಲ್ಲ. ಒಂದೊಂದು ತಾಲ್ಲೂಕಿನಲ್ಲಿ ೬೦೦, ೭೦೦, ೮೦೦ ಬೋರ್‌ವೆಲ್ಸ್ ಇದೆ, ವರ್ಷಕ್ಕೊಂದು ಸಾರಿ ರಿಪೇರಿ ಆಗುತ್ತದೆ. ಆದ್ದರಿಂದ ಒಂದೊಂದು ಡಿಸ್ಟ್ರಿಕ್ಟ್‌ಗೆ ಒಬ್ಬ ಬೋರ್‌ವೆಲ್ ಮೆಕಾನಿಕ್‌ನ್ನು ಅಳವಡಿಸಬೇಕು. ಚಿಕ್ಕಮಗಳೂರಿನಲ್ಲಿ ಸಬ್‌ಡಿವಿಜನ್ ಮಾಡಬೇಕು ಮತ್ತು ಮೆಕಾನಿಕರನ್ನು ಅಳವಡಿಸಬೇಕು. ಆಮೇಲೆ ವಕ್ಫ್ ಬೋರ್ಡ್ ಬಗ್ಗೆ ಹೇಳುವುದಾದರೆ, ಚಿಕ್ಕಮಗಳೂರು ಜಿಲ್ಲೆಯಲ್ಲಿ ತರೀಕೆರೆಯಲ್ಲಿ ವಕ್ಫ್ ಬೋರ್ಡ್ ಎಲ್ಲಿವೆ. ಎಲ್ಲಿ ಹೋಗುತ್ತಾರೆ, ಎಲ್ಲಿ ಬರುತ್ತಾರೆ ಎಂದು ಗೊತ್ತಿಲ್ಲ. ವಕ್ಫ್ ಬೋರ್ಡ್ ಇದೆಯೋ ಇಲ್ಲವೋ ಎನ್ನುವ ಪರಿಸ್ಥಿತಿ ನಮ್ಮ ಜಿಲ್ಲೆಯಲ್ಲಿ ಉಂಟಾಗಿದೆ. ಆದುದರಿಂದ ಇದರ ಬಗ್ಗೆ ಪೂರ್ಣ ವ್ಯವಸ್ಥೆ ಮಾಡಬೇಕು. ಸಬ್ ಡಿವಿಜನ್ ಮಾಡಬೇಕು ಮತ್ತು ೧೦೦ ಬೋರ್‌ವೆಲ್‌ಗೆ ಒಬ್ಬ ಮೆಕಾನಿಕ್ ಎಂದು ಮಾಡಬೇಕು. ಈ ರೀತಿ ಮಾಡಿದರೆ ಕಾಲಕಾಲಕ್ಕೆ ಬೋರ್‌ವೆಲ್‌ಗಳು ರಿಪೇರಿಯಾಗಿ ನಿಮ್ಮ ಹೆಸರು ಸಾವಿರಾರು ವರ್ಷಗಳ ಕಾಲ ಉಳಿಯುತ್ತದೆ. ನಜೀರ್‌ಸಾಹೇಬರ ಬೋರ್‌ವೆಲ್ ಎಂದು ಹೆಸರು ಪಡೆಯುತ್ತೀರಿ. ವಕ್ಫ್‌ಬೋರ್ಡನ್ನು ಬದಲಾವಣೆ ಮಾಡಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಮಿತ್ರರು ಅವರ ಜಿಲ್ಲೆಗೆ ಸಬ್ ಡಿವಿಜನ್ ಇಲ್ಲ ಎಂದು ಹೇಳಿದ್ದಾರೆ, ಅದನ್ನು ಒಪ್ಪುತ್ತೇನೆ. ಹೋದವರ್ಷ ಸಬ್ ಡಿವಿಜನ್ ಮಾಡಬೇಕು ಎಂದು ಕಳಿಸಿಕೊಟ್ಟಿದ್ದೆ. ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಮುಂದೆ ಮಾಡೋಣ ಎಂದು ಒಪ್ಪಿಗೆಯಾಗಿಲ್ಲ. ಮತ್ತೊಮ್ಮೆ ಆ ಪ್ರಸ್ತಾವವನ್ನು ನಾನು ಕಳಿಸಿಕೊಡುತ್ತೇನೆ. ತಾವು ಬರುವುದಕ್ಕೆ

ಮುಂದೆ ರೂರಲ್ ಇಂಜಿನಿಯರಿಂಗ್ ಸರ್ವೀಸ್ ಮಾಡತಕ್ಕ ನಿರ್ಧಾರವನ್ನು ಕೈಗೊಳ್ಳತಕ್ಕ ಭರವಸ ಕೊಟ್ಟಿದ್ದೇನೆ. ರೂರಲ್ ಇಂಜಿನಿಯರಿಂಗ್ ಸರ್ವೀಸ್ ನಿರ್ಮಾಣ ಮಾಡಿದರೆ ೫೦೦, ೬೦೦ ಬೋರ್‌ಗೆ ಒಬ್ಬ ಮೆಕಾನಿಕರ್ ಏನು ಇರುತ್ತಾರೆ, ಅದು ಹೋಗಿ ೧೫೦ ಬೋರ್‌ಗೆ ಒಬ್ಬ ಇರುತ್ತಾನೆ. ತಾವೂ ಆ ಸಮಿತಿಯ ಸದಸ್ಯರಾಗಿದಿರಿ. ಮುಂದೆ ಬರತಕ್ಕಂಥ ಜಿಲ್ಲಾ ಪರಿಷತ್, ಮಂಡಲ್ ಪಂಚಾಯುತ್‌ಗಳಿಗೆ ಹೆಚ್ಚಿನ ಸಂಪನ್ಮೂಲಗಳನ್ನು ಕೊಟ್ಟು ಒಂದು ಮಂಡಲ್‌ಗಾದರೂ ಒಬ್ಬ ಮೆಕಾನಿಕ್ ಇರುವಂತೆ ಮಾಡುತ್ತೇನೆ. ಆಮೇಲೆ ವಕ್ಫ್‌ಬೋರ್ಡ್ ಎಲ್ಲಿದೆಯೆಂದು ಗೊತ್ತಿಲ್ಲ ಎಂದು ಹೇಳಿದರು. ಮಾನ್ಯ ನೀಲಕಂಠಪ್ಪನವರು ಮಾತನಾಡುತ್ತಾ ಇರುವುದು ನೋಡಿದರೆ ಅವರಿಗೆ ಏನೋ ಸ್ವಲ್ಪ ಕಾರ್ಯಚಟುವಟಿಕೆ ಇದೆಯೆಂದು ಖಾತ್ರಿಯಾಗಿದೆ. ಅದನ್ನು ಬದಲಾವಣೆ ಮಾಡಬೇಕು ಎಂದು ಹೇಳಿದರೆ ಅವರನ್ನು ಎಷ್ಟು ಕಾಲಕ್ಕೆ ನೇಮಕ ಮಾಡಿದ್ದಾರೋ ಗೊತ್ತಿಲ್ಲ, ಕಾಲ ಮುಗಿಯಂದೆ ಬದಲಾವಣೆ ಮಾಡುವುದಕ್ಕೆ ಬರುವುದಿಲ್ಲ, ನಂತರ ಮಾಡಿಕೊಡುತ್ತೇನೆ.

ಶ್ರೀ ಪ್ರತಾಪಚಂದ್ರಶೆಟ್ಟಿ.—ಮಾನ್ಯ ಅಧ್ಯಕ್ಷರೆ, ಮಂಡಲ್ ಪಂಚಾಯಿತಿ ವಿಂಗಡಣೆ ಮಾಡಿದಿರಿ, ಅದನ್ನು ಡಿವಿಜನಲ್ ಕಮಿಷನರಿಗೆ ರೆಫರ್ ಮಾಡುವಂಥ ಅವಕಾಶ ಮಾಡಿಕೊಟ್ಟಿದ್ದೀರಿ. ಇದನ್ನು ಸರ್ಕಾರ ಮಾಡುವಂಥ ಅವಕಾಶ ಇದೆಯೇ. ಮಂಡಲ್ ಪಂಚಾಯುತ್ ವಿಂಗಡಣೆ ಯಾವ ಒಂದು ನೆಲೆಯಲ್ಲಿ ಮಾಡಿದ್ದೀರಿ, ಜನಸಾಂದ್ರತೆ ಇದೆಯೇ, ಅಥವಾ ಪಶ್ಚಿಮಘಟ್ಟಗಳ ಪ್ರದೇಶದಲ್ಲಿರತಕ್ಕ ಮಲೆನಾಡು ಪ್ರದೇಶದಲ್ಲಿ ಯಾವ ನೆಲೆಯಲ್ಲಿ ವಿಂಗಡಿಸಿದಿರಿ. ಉದಾಹರಣೆಗೆ ಹೇಳುವುದಾದರೆ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಬೆಳ್ತಂಗಡಿ ಪ್ರದೇಶವನ್ನು ಮಲೆನಾಡು ಪ್ರದೇಶವೆಂದು ಘೋಷಿಸಿದ್ದೀರಿ. ಪಶ್ಚಿಮಘಟ್ಟಗಳ ಕುಂದಾಪುರ ಮೊದಲಾದ ತಾಲ್ಲೂಕುಗಳನ್ನು ಮಲೆನಾಡು ತಾಲ್ಲೂಕುಗಳೆಂದು ಘೋಷಿಸಿಲ್ಲ. ಆದ್ದರಿಂದ ಯಾವ ನೆಲೆಯ ಆಧಾರದ ಮೇಲೆ ವಿಂಗಡಿಸಿದ್ದೀರಿ. ಮತ್ತು ಅಪೀಲ್ ಮಾಡಿದರೆ ಸಾಕೇ ಅಥವಾ ಹೈಕೋರ್ಟಿಗೆ ಹೋಗಬೇಕೇ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಮಂಡಲ್ ಪಂಚಾಯುತ್‌ಗಳನ್ನು ಪ್ರಾಥಮಿಕವಾಗಿ ಘೋಷಣೆ ಮಾಡತಕ್ಕ ಅಧಿಕಾರ ಜಿಲ್ಲಾಧಿಕಾರಿಗಳಿಗೆ ಇದೆ. ಪ್ರಾಥಮಿಕ ಘೋಷಣೆಯಾದ ನಂತರ ಅದರ ಬಗ್ಗೆ ಇರತಕ್ಕ ನ್ಯೂನತೆಗಳನ್ನು ಜಿಲ್ಲಾ ಪರಿಷತ್‌ಗೆ ತಿಳಿಸಬಹುದು. ೧೫ ದಿವಸಗಳ ನಂತರ ಪೂರ್ವಭಾವಿಯಾಗಿ ಫೈನಲ್ ನೋಟಿಫಿಕೇಷನ್‌ವನ್ನು ಗೆಜೆಟ್‌ನಲ್ಲಿ ನೋಟಿಫೈ ಮಾಡುತ್ತಾರೆ. ನಂತರ ೩೦ ದಿವಸಗಳ ಒಳಗೆ ಅಪೀಲ್ ಹೋಗತಕ್ಕಂಥಾದ್ದು. ಅದು ಕೊನೆಯದು. ಅದರ ನಂತರ ಸರ್ಕಾರಕ್ಕೆ ಅಧಿಕಾರ ಇಲ್ಲ. ನಂತರ ಹೈಕೋರ್ಟಿಗೆ ಹೋಗಬೇಕು. ಮಲೆನಾಡಿನ ಪ್ರದೇಶದಲ್ಲಿ ಕೆಲವು ಕಡೆ ಜನಸಂಖ್ಯೆ ಹೆಚ್ಚೂ ಕಡಿಮೆ ಮಾಡಿದ್ದಾರೆ ಎಂಬುದು ನನ್ನ ಭಾವನೆ ಇದೆ. ಚದರ ಮೈಲಿಗೆ ಜನಸಾಂದ್ರತೆ ಇರತಕ್ಕದ್ದನ್ನು ಆಧರಿಸಿ ರಚನೆ ಮಾಡಬೇಕೆಂಬ ನಿರ್ಧಾರದ ಪ್ರಕಾರ ಮಾಡಿದ್ದಾರೆ.

ಶ್ರೀ ಐ ಬಿ ಶಂಕರ.—ಕಳೆದ ಸಾಲಿನಲ್ಲಿ ಎನ್‌ಆರ್‌ಡಬ್ಲ್ಯುನಲ್ಲಿ ೨೦೦೦ ದಿಂದ ೫೦೦ಕ್ಕೆ ಇಳಿಸಲು ಆಲೋಚನೆ ಮಾಡುತ್ತೇನೆ ಎಂದು ಹೇಳಿದಿರಿ. ಅದು ಏನಾಯಿತೂ ಎಂದು ಕೇಳುತ್ತೇನೆ. ಎರಡನೆಯದಾಗಿ ಗುಡ್ಡಗಾಡಿನಿಂದ ಬರುವಂಥ ನೀರನ್ನು ಪೈಪುಗಳ ಮುಖಾಂತರ ಸಪ್ಲೈ ಮಾಡುವುದಕ್ಕೆ ಆದೇಶ ಕೊಟ್ಟಿದ್ದೇನೆ ಎಂದು ಹೇಳಿದಿರಿ. ಈ ಬಗ್ಗೆ ಅಧಿಕಾರಿಗಳ ಹತ್ತಿರ ಚರ್ಚೆ ಮಾಡಿದಾಗ ಸರ್ಕಾರದಿಂದ ಆದೇಶ ಬಂದಿಲ್ಲ ಎಂದು ಹೇಳಿದರು. ಬೋರ್ ಹಾಕುವುದಿಲ್ಲ, ಬಾವಿ ತೆಗೆಯುವುದಕ್ಕೆ ಹೋಗುವುದಿಲ್ಲ, ಗುಡ್ಡದಿಂದ ಖನಿಜಸಮೃದ್ಧವಾದ ನೀರು ಏನು ಬರುತ್ತಿದೆ ಅದನ್ನು ಪೈಪುಗಳ ಮುಖಾಂತರ ಸಪ್ಲೈ ಮಾಡುತ್ತಾ ಇಲ್ಲ. ದಯವಿಟ್ಟು ಇದನ್ನು ಮಾಡದೇಹೋದರೆ ಉದ್ದೇಶಪೂರ್ವಕವಾಗಿ ಮಾಡಿದ ಹಾಗೆ ಆಗುತ್ತದೆ. ತಾವು ಈ ಬಗ್ಗೆ ಭರವಸೆ ಕೊಡಬೇಕು. ಪರಿಶೀಲನೆ ಮಾಡುತ್ತೇವೆ ಎನ್ನುವ ಪ್ರಶ್ನೆಯಿಲ್ಲ. ಸಬ್ ಡಿವಿಜನ್ ಮಾಡಿಕೊಡುತ್ತೇವೆ ಎನ್ನುವ ಭರವಸೆ ಕೊಡಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.—ಪರಿಶೀಲನೆ ಅಲ್ಲ, ಮಾಡುತ್ತೇನೆ, ನನ್ನ ಇಲಾಖೆಯಿಂದ ಕಳಿಸಿದ್ದೇನೆ. ಅದಕ್ಕೆ ಯೋಜನೆ ಮತ್ತು ಆರ್ಥಿಕ ಇಲಾಖೆಗಳಿಂದ ಮಂಜೂರಾತಿ ಕೊಡಬೇಕು, ಪರಿಶೀಲನೆ ಮಾಡುವುದಲ್ಲ, ಮಾಡಬೇಕು ಎನ್ನುವುದು ನನ್ನ ಇಲಾಖೆಯ ನಿರ್ಧಾರ.

ಇತರ ಇಲಾಖೆಗಳಿಂದ ಬರಬೇಕು. ನಾನು ತಮ್ಮ ಎದುರಿಗೇ ಆದೇಶ ಕೊಟ್ಟಿದ್ದೆ ತಮಗೆ ಜ್ಞಾಪಕವಿರಬಹುದು, ಗ್ರಾವಿಟಿ ಸಿಸ್ಟಮ್ ಆಫ್ ವಾಟರ್ ಎಂದು ಏನಿದೆ, ಅದನ್ನು ಪ್ರಾಯೋಗಿಕವಾಗಿ ಒಂದೆರಡ ಕಡೆ ಮಾಡಿ ನೋಡಿ, ಪೂರ್ಣವಾಗಿ ಮಾಡುವುದಕ್ಕೆ ಆಗುವುದಿಲ್ಲ. ಅದನ್ನು ನೋಡಿಕೊಂಡು ಅದು

ಫಲಪ್ರದವಾದರೆ ಎಲ್ಲಾ ಕಡೆ ಮಾಡೋಣವೆಂದು ಹೇಳಿದ್ದೆ. ಅದು ಆಗಲಿಲ್ಲವೆಂದು ಹೇಳಿದರು. ಈ ವರ್ಷಒಂದೆರಡು ಕಡೆ ಪ್ರಾಯೋಗಿಕವಾಗಿ ಮಾಡುವ ವ್ಯವಸ್ಥೆ ಮಾಡುತ್ತೇನೆ. ಇನ್ನು ಎರಡು ಸಾವಿರ ಜನಸಂಖ್ಯೆ ಎಂದು ಬಯಲು ಪ್ರದೇಶಕ್ಕೆ ಸೀಮಿತಗೊಳಿಸಿದ್ದೀರಿ, ಮಲೆನಾಡಿನಲ್ಲಿ ಅಷ್ಟು ಜನಸಂಖ್ಯೆಯಿಲ್ಲವೆಂದು ಹೇಳಿದ್ದಾರೆ. ಮಲೆನಾಡಿಗೆ ಕೊಡುವಾಗ ಹೆಚ್ಚೂ ಕಡಿಮೆ ಜನಸಂಖ್ಯೆ ನೋಡಿಕೊಂಡು ವ್ಯವಸ್ಥೆ ಮಾಡುತ್ತೇವೆ.

ಶ್ರೀ ಮೂಡಲಗಿರಿಯಪ್ಪ.—ವಕ್ಫ್ ಬೋರ್ಡ್ ರಚನೆಯಲ್ಲಿ ಒಂದು ಸುಧಾರಣೆಯನ್ನು ಮಾನ್ಯ ಮುಖ್ಯ ಮಂತ್ರಿಗಳು ತರಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಪ್ರತಿಯೊಬ್ಬರೂ ಸಾರ್ವಜನಿಕವಾಗಿ, ಸಾಮೂಹಿಕವಾಗಿ ವಕ್ಫ್ ಬೋಡ್ ರಚನೆಯಲ್ಲಿ ಆಸಕ್ತಿ ವಹಿಸುತ್ತಾರೆ. ವಕ್ಫ್ ಬೋರ್ಡಿನಲ್ಲಿ ಬೇರೆ ಜನಾಂಗದವರಿಗೂ ಕೂಡ ಪ್ರಾತಿನಿಧ್ಯತೆ ಕೊಡಬೇಕು. ಇದರಲ್ಲಿ ನಾವೂ ಕೂಡ ಮುಂದಾಳತ್ವವನ್ನು ವಹಿಸುತ್ತೇವೆನ್ನತಕ್ಕಂಥಾದ್ದನ್ನು ಸಾರ್ವಜನಿಕರಿಗೆ ತೋರಿಸುವುದು ಮುಖ್ಯ. ಇನ್ನಿತರ ಜನಾಂಗದವರಿಗೂ ಕೂಡ ಅವಕಾಶವನ್ನು ಕಲ್ಪಿಸಿಕೊಟ್ಟಹಾಗೆ ಆಗುತ್ತದೆ ಇದನ್ನು ಕಾರ್ಯರೂಪಕ್ಕೆ ತರಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ವೈಯಕ್ತಿಕವಾಗಿ ಈ ಸಲಹೆ ಬಹಳ ಸ್ವಾಗತಾರ್ಹ. ಇದು ಅಲ್ಪ ಸಂಖ್ಯಾತರಿಗೆ ಅಲ್ಲದೆ ಬೇರೆಯವರಿಗೆ ಕೊಡುವುದಕ್ಕೆ ಬರುವುದಿಲ್ಲ. ಇದು ಸಂವಿಧಾನದಲ್ಲಿರ ತಕ್ಕಂತಹ ಹಕ್ಕು. ಇದನ್ನು ನಾನೇನೂ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಬಿ. ಬಿ. ನಿಂಗಯ್ಯ.—ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸರ್ಕಾರದಲ್ಲಿ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ವಕ್ಫ್ ಇಲಾಖೆಯ ಜವಾಬ್ದಾರಿಯನ್ನು ಹೊತ್ತಿರತಕ್ಕಂತಹ ಸಚಿವರಿಬ್ಬರೂ ಶ್ಲಾಘನೀಯವಾದ ಕೆಲಸಗಳನ್ನು ಮಾಡಿಕೊಂಡು ಬಂದಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಕುಡಿಯುವ ನೀರಿನ ಯೋಜನೆ ಏನಿದೆ ಈ ವಿಚಾರದಲ್ಲಿ ನಮ್ಮ ರಾಜ್ಯ ಪ್ರಥಮ ಸ್ಥಾನದಲ್ಲಿದೆ, ಅದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ಹೇಳುತ್ತಾ, ನಮ್ಮ ಜಿಲ್ಲೆಯ ಬಗ್ಗೆ ಕೆಲವು ಪ್ರಶ್ನೆಗಳನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ನನ್ನ ಸ್ನೇಹಿತರಾದಂತಹ ನೀಲಕಂಠಪ್ಪನವರು ಈಗಾಗಲೇ ಕೆಲವು ವಿಷಯಗಳನ್ನು ಹೇಳಿದ್ದಾರೆ. ನಮ್ಮ ಚಿಕ್ಕಮಗಳೂರು ಜಿಲ್ಲೆಗೆ ಡಿವಿಜನ್ ಆಫೀಸ್ ಇಲ್ಲದೆ ಒಂದು ಬೋರ್‌ವೆಲ್ ಕೆಟ್ಟರೂ ನಾವು ಪಿ.ಹೆಚ್.ಇ.ಗೆ ಹೋದರೆ ಅಲ್ಲಿ ಅಧಿಕಾರಿಗಳು ಸಮಯಕ್ಕೆ ಸರಿಯಾಗಿ ಸಿಗದೇ ಇರತಕ್ಕಂತಹ ಪರಿಸ್ಥಿತಿಯಿದೆ. ಜಿಲ್ಲಾಧಿಕಾರಿಗಳಿಗೆ ಕಂಪ್ಲೈಂಟ್ ಮಾಡಿದರೆ ಅವರು ನಿಮ್ಮಲ್ಲಿ ಡಿವಿಜನ್ ಆಫೀಸ್ ಇಲ್ಲದ ಕಾರಣ ಸರಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳುತ್ತಾರೆ. ಆದ್ದರಿಂದ ಡಿವಿಜನ್ ಆಫೀಸನ್ನು ಅಲ್ಲಿ ತೆರೆಯಬೇಕೆಂದು ಒತ್ತಾಯ ಮಾಡುತ್ತೇನೆ. ಮೂರು ತಿಂಗಳ ಹಿಂದೆ ಮಾನ್ಯ ಸಚಿವರು ನನ್ನ ಕ್ಷೇತ್ರಕ್ಕೆ ಬಂದು ಹೋಗಿದ್ದಾರೆ. ಅಲ್ಲಿ ೭–೮ ವರ್ಷಗಳಿಂದ ಕುಡಿಯುವ ನೀರಿನ ತೊಂದರೆಯಿದೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಇದರ ಬಗ್ಗೆ ಈಗಾಗಲೇ ಹೇಳಿದ್ದೇನೆ. ಚಿಕ್ಕಮಗಳೂರು ಅಂದರೆ, ಎರಡು ಜಿಲ್ಲೆಗಳಿಗೆ ಸಬ್ ಡಿವಿಜನ್ ಮಾಡಬೇಕಾಗಿದೆ. ಆ ಭಾಗಕ್ಕೆ ಎಕ್ಸಿಕ್ಯುಟೀವ್ ಇಂಜಿನಿಯರ್‌ನ್ನು ಹಾಕಲು ಡಿಸಿಷನ್ ಆಗಿದೆ. ಅದು ನನ್ನ ಇಲಾಖೆಯಲ್ಲಿ ತೀರ್ಮಾನವಾಗಿದೆ. ಯೋಜನಾ ಆರ್ಥಿಕ ಇಲಾಖೆಯವರಿಂದ ಅನುಮತಿ ಬಂದ ತಕ್ಷಣ ಅದನ್ನು ಜಾರಿಗೆ ಕೊಡುತ್ತೇವೆ. ಇನ್ನು ಕುಡಿಯುವ ನೀರಿನ ಕಾರ್ಯಕ್ರಮಗಳು ನಿಂತು ಹೋಗಿದೆಯೆಂದು ಹೇಳಿದಿರಿ. ಬರೆದು ಕಳಿಸಿದರೆ ಮಾಡುತ್ತೇನೆ. ಇದರ ಬಗ್ಗೆ ಸಾಕಷ್ಟು ಕೆಲಸ ಮಾಡುತ್ತಿದ್ದೇವೆ. ಮಾಡುತ್ತೇವೆ. ಇದಕ್ಕಾಗಿ ಸಾಕಷ್ಟು ಹಣವನ್ನು ಒದಗಿಸಿದೆ.

ಶ್ರೀ ಯು. ಭೂಪತಿ.—ಗ್ರಾಮೀಣ ಪ್ರದೇಶದಲ್ಲಿ ಬಸ್ ಷೆಲ್ಟರ್‌ಗಳನ್ನು ಕಟ್ಟುವುದು ಹಾಗೂ ಮಹಿಳೆಯರಿಗಾಗಿ ಸಾರ್ವಜನಿಕ ಕಕ್ಕಸ್ಸುಗಳನ್ನು ಕಟ್ಟುವುದು ಹಾಗೂ ಶಾಲಾ ಕಟ್ಟಡಗಳನ್ನು ಕಟ್ಟುವುದರ ಬಗ್ಗೆ ರಾಜ್ಯ ಮಟ್ಟದಲ್ಲಿ ಒಂದು ಕಾಮನ್ ಡಿಸೈನ್ ಇಲ್ಲ. ಒಂದು ತಾಲ್ಲೂಕಿನಲ್ಲಿ ಕಟ್ಟಿರುವ ಇನ್ನೊಂದು ತಾಲ್ಲೂಕಿನಲ್ಲಿ ಕಟ್ಟಿರುವುದಿಲ್ಲ. ಕೆಲವು ಕಡೆ ಒಂದು ವಾರದಲ್ಲಿ ಬೀಳುತ್ತವೆ ಮತ್ತೆ ಕೆಲವು ಕಡೆಗಳಲ್ಲಿ ಇನ್ನೂ ಸ್ವಲ್ಪ ಕಾಲ ನಿಲ್ಲುತ್ತವೆ. ರಾಜ್ಯ ಮಟ್ಟದಲ್ಲಿ ಸರ್ವೇ ಸಾಮಾನ್ಯವಾದಂತಹ ಒಂದೇ ಡಿಸೈನ್ ಅನ್ನು ಮಾಡುವುದಕ್ಕೆ ಡೈರೆಕ್ಷನ್ ಕೊಡುತ್ತೀರಾ ? ಮಹಿಳೆಯರ ಶೌಚಾಲಯದ ಬಗ್ಗೆ ಹೇಳಬೇಕಾದರೆ, ಅದಕ್ಕೆ ಹೆಚ್ಚಿನ ಆದ್ಯತೆ ಕೊಟ್ಟು ಈ ಕಾರ್ಯಕ್ರಮವನ್ನು ಹೆಚ್ಚಿನ ಸಂಖ್ಯೆಯಲ್ಲಿ

ಗ್ರಾಮೀಣ ಪ್ರದೇಶಗಳಲ್ಲಿ ಕಟ್ಟಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಪುರಸಭೆಗಳನ್ನು ಕೆಲವು ಮಂಡಲಿಗಳನ್ನಾಗಿ ಮಂಡಲಿಗಳನ್ನಾಗಿ ಪರಿವರ್ತನೆ ಮಾಡಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ನನ್ನ ಕ್ಷೇತ್ರವಾದ ಸಂಡೂರಿನ ಪುರಸಭೆಯಲ್ಲಿರತಕ್ಕಂತಹವರಿಗೆ ಮಾನಸಿಕವಾಗಿ ಒಂದು ರೀತಿಯ ಆತಂಕವಿದೆ, ಅದೇನೆಂದರೆ ರೂರಲ್ ಡೆವಲಪ್‌ಮೆಂಟ್ ಬೆನಿಫಿಟ್ ಎಂದು ಏನಿದೆ, ಅದನ್ನು ಈಗ ಪರಿವರ್ತನೆ ಮಾಡಿರತಕ್ಕಂತಹ ಮಂಡಲಗಳಿಗೆ ಚುನಾವಣೆಯಾಗುವುದಕ್ಕೆ ಮಂಚಿತವಾಗಿ ಕೊಡುತ್ತೀರಾ ? ಇಲ್ಲವೇ ಚುನಾವಣೆಯಾಗುವವರೆಗೆ ಮುನಿಸಿಪಾಲಿಟಿಯಾಗೇ ಉಳಿಯುತ್ತದೆಯೋ?

ಶ್ರೀ ಅಬ್ದುಲ್ ನಜೀರ್ ಸಾಬ್.—ಅಧ್ಯಕ್ಷರೆ, ಎಲ್ಲ ಕಡೆಗಳಲ್ಲೂ ಒಂದೆ ಡಿಸೈನ್ ಮಾಡುವುದು ಕಷ್ಟವಾಗುತ್ತದೆ. ಏಕೆಂದರೆ ಬಸ್ ಷೆಲ್ಟರ್‌ಗಳಿಗೆ ಕೆಲವು ಕಡೆ ಹೆಂಚು ಹಾಕಿ ಮಾಡುತ್ತಾರೆ ಮತ್ತೆ ಕೆಲವು ಕಡೆಗಳಲ್ಲಿ ಕಲ್ಲು ಹಾಕಿ ಕಟ್ಟುತ್ತಾರೆ. ಉದಾಹರಣೆಗೆ ಹೇಳುವುದಾದರೆ ದೊಡ್ಡಬಳ್ಳಾಪುರದಲ್ಲಿ ಕಲ್ಲು ಹಾಕಿ ಮಾಡುತ್ತಾರೆ. ಮತ್ತೆ ಕೆಲವು ಕಡೆಗಳಲ್ಲಿ ಆರ್.ಸಿ.ಸಿ. ಯಿಂದ ಹಾಕುತ್ತಾರೆ. ಅದನ್ನು ಹೇಗೆ ಕಟ್ಟಬೇಕೆಂಬುದು ಜಿಲ್ಲಾ ಅಭಿವೃದ್ಧಿ ಸಂಸ್ಥೆಗಳಿಗೆ ಬಿಟ್ಟಿರತಕ್ಕಂಥದ್ದು ಎಲ್ಲ ಕಡೆಗಳಲ್ಲಿ ಒಂದೇ ಡಿಸೈನ್ ಮಾಡುವುದಕ್ಕೆ ಬರುವುದಿಲ್ಲ. ರೂರಲ್‌ನಲ್ಲಿ ಅದಕ್ಕೆ ಒಂದು ಯೂನಿಫಾರ್ಮ್ ಡಿಸೈನ್ ಇದೆ. ಅದು ಯೂನಿಸೆಫ್‌ನಿಂದ ಬಂದಿದೆ. ಇನ್ನು ಶೌಚಾಲಯದ ಬಗ್ಗೆ ಹೇಳಿದ್ದಾರೆ. ಸುಲಭ ಶೌಚಾಲಯದವರು ಅದನ್ನು ಕಟ್ಟುತ್ತಾರೆ. ಅದರ ಡಿಸೈನ್ ಅನ್ನು ವ್ಯತ್ಯಾಸ ಮಾಡುವುದಕ್ಕಾಗುವುದಿಲ್ಲ. ಇನ್ನು ಮಂಡಲ ಪಂಚಾಯಿತಿಯ ಬಗ್ಗೆ ಹೇಳಿದ್ದೀರಿ. ಪುರಸಭೆಗಳು ಮಂಡಲ ಪಂಚಾಯಿತಿಯಾಗಿ ಪರಿವರ್ತನೆಯಾಗಿದ್ದು ಅದರಲ್ಲಿ ಯಾರು ಚುನಾಯಿತ ಸದಸ್ಯರಿದ್ದಾರೆ ಅವರಿಗೆ ಇನ್ನೂ ಎಷ್ಟು ವರ್ಷ ಬಾಕಿಯಿದೆಯೋ ಅಲ್ಲಿಯವರೆಗೆ ಮಂಡಲಗಳಾಗಿ ಮುಂದುವರಿಯುತ್ತಾರೆ. ಮುಂದಿನ ವರ್ಷದಿಂದ ಅವರಿಗೆ ಬರತಕ್ಕಂತಹ ಸೌಲಭ್ಯಗಳು ಬರುತ್ತವೆ.

ಶ್ರೀ ರಮೇಶ್ ಕುಮಾರ್.—ಮಾನ್ಯ ಅಧ್ಯಕ್ಷರೆ, ಎಸ್.ಸಿ. ಎಸ್.ಟಿ. ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಲ್ಲಿ ಯಾವ ರೀತಿ ಅರ್ಹರಾದಂತಹವರಿಗೆ ಕಮ್ಯುನಿಟಿ ಬೋರ್‌ವೆಲ್ಸ್ ಎಂದು ಮಾಡುತ್ತಿದ್ದಾರೆ, ಆ ರೀತಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಗ್ರಾಮೀಣ ಅಲ್ಪ ಸಂಖ್ಯಾತರ್‍ಯಾರಿದ್ದಾರೆ, ಅವರಿಗೆ ಈ ಕಾರ್ಪೊರೇಷನ್‌ನಿಂದ ನೆರವು ಸಿಗುವ ಒಂದು ಯೋಜನೆಯನ್ನು ಹಾಕಿಕೊಂಡಿದ್ದೀರಾ ಈ ಕಾರ್ಪೊರೇಷನ್ ಅಸ್ತಿತ್ವಕ್ಕೆ ಬಂದಿದೆಯೋ? ಇದರ ಬಗ್ಗೆ ಮಾಹಿತಿಯಿದ್ದರೆ ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.—ಅದು ನನ್ನ ಖಾತೆಗೆ ಬರುವುದಿಲ್ಲ. ನನಗೆ ಸ್ವಲ್ಪ ಮಟ್ಟಿಗೆ ಗೊತ್ತಿದೆ. ಅಲ್ಪ ಸಂಖ್ಯಾತರ ಅಭಿವೃದ್ಧಿಗೆ ಒಂದು ನಿಗಮವನ್ನು ರಚನೆ ಮಾಡಿ ಅದಕ್ಕೆ ಒಂದು ಕೋಟಿ ರೂಪಾಯಿ ಬಂಡವಾಳ ಹಾಕಿದ್ದೇವೆ. ತಮ್ಮ ಸಲಹೆ ಒಳ್ಳೆಯ ಸಲಹೆ. ಅಂತಹ ಕಾರ್ಯಕ್ರಮವನ್ನು ರೂಪಿಸಿಕೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಡಿ. ಎ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೇ ಈಗ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಲ್ಲಿ ಬಹಳಷ್ಟು ಕೆಲಸಗಳು ಕುಂಠಿತವಾಗಿ ನಡೆಯುತ್ತಿದೆ ಇದಕ್ಕೆ ಕಾರಣವೇನೆಂದರೆ ಅಲ್ಲಿನ ಇಂಜಿನಿಯರ್‌ಗಳಿಗೆ ೫ ಸಾವಿರಕ್ಕಿಂತ ಹೆಚ್ಚು ಎಸ್ಟಿಮೇಟ್ ಮಾಡುವ ಅಧಿಕಾರವಿರುವುದಿಲ್ಲ. ಹೆಚ್ಚು ಮಾಡಬೇಕಾದರೆ ಲೋಕೋಪಯೋಗಿ ಇಲಾಖೆಗೆ ಹೋಗಬೇಕಾಗುತ್ತದೆ. ಅಲ್ಲಿ ಅವರು ಒಂದೆರಡು ವರ್ಷ ಇಟ್ಟು ಪುನಃ ರೀ ಎಸ್ಟಿಮೇಟ್ ಮಾಡುವ ಕಾಲದಲ್ಲಿ ಬಹಳಷ್ಟು ಕೆಲಸಗಳು ಅರ್ಧಕ್ಕೆ ನಿಂತಿದೆ. ಆ ಕೆಲಸಗಳನ್ನು ಪೂರ್ತಿ ಮಾಡಬೇಕು. ತಾಲ್ಲೂಕು ಮಂಡಲಿಗಳ ಅಸಿಸ್ಟೆಂಟ್ ಇಂಜಿನಿಯರ್‌ಗಳಿಗೆ ಮಿನಿಮಮ್ ೨೫,೦೦೦ ರೂಪಾಯಿಗಳನ್ನು ಎಸ್ಟಿಮೇಟ್ ಮಾಡತಕ್ಕಂತಹ ಒಂದು ಅಧಿಕಾರವನ್ನು ಕೊಟ್ಟರೆ ಈ ಕೆಲಸಗಳು ಬೇಗ, ಅದಷ್ಟು ಸುಲಭವಾಗಿ ಆಗುತ್ತದೆ. ನಂತರ ಮಿನಿಮಮ್ ವೇಜಸ್ ಪ್ರೋಗ್ರಾಮ್‌ಗೆ ಬೇಕಾಗುವ ೧೫೦೦ ಜನಗಳು ಮಲೆನಾಡಿನಲ್ಲಿ ಸಿಗಲಾರದೆಂದು ಅನಿಸುತ್ತದೆ. ದಯವಿಟ್ಟು ಅದನ್ನು ಸ್ವಲ್ಪ ಕಡಿಮೆ ಮಾಡಬೇಕು. ಪೈಪ್ಡ್ ವಾಟರ್ ಸಿಸ್ಟಮ್‌ನಲ್ಲಿ ಎರಡು ಸಾವಿರ ಜನಸಂಖ್ಯೆ ಇರಬೇಕೆಂದು ಹೇಳುತ್ತಾರೆ, ಆ ಜನಸಂಖ್ಯೆ ಮಲೆನಾಡು ಏರಿಯಾ ಗ್ರಾಮಗಳಲ್ಲಿ ಸಿಗಲಾರದು. ದಯವಿಟ್ಟು ಅದನ್ನು ಒಂದು ಸಾವಿರಕ್ಕೆ ಇಳಿಸಬೇಕೆಂದು ಈ ಮೂಲಕ ತಮ್ಮನ್ನು ವಿನಂತಿಕೊಳ್ಳುತ್ತೇನೆ. ಮೂರನೆಯದಾಗಿ ಹೇಳುವುದಾದರೆ, ಈ ಹಿಂದೆ ಬಹಳಷ್ಟು ಮಹಿಳಾ ಸಮಾಜಗಳು ಗ್ರಾಮಗಳಲ್ಲಿ ಚೆನ್ನಾಗಿ ನಡೆಯುತ್ತಿದ್ದವು ಅವುಗಳಿಗೆ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಂದ ಗ್ರ್ಯಾಂಟುಗಳನ್ನು ಕೊಡುತ್ತಿದ್ದರು. ಈ ಗ್ರ್ಯಾಂಟುಗಳನ್ನು ಈಗ ನಿಲ್ಲಿಸಿರುವುದರಿಂದ ಎಲ್ಲಾ ಮಹಿಳಾ ಸಮಾಜಗಳನ್ನು ಮುಚ್ಚಿ ಮನೆಗೆ ಹೋಗಿದ್ದಾರೆ.

ಅಲ್ಲಿ ಸಾಮಾನುಗಳು ಮಾತ್ರ ಇದೆ. ಆದ್ದರಿಂದ ದಯವಿಟ್ಟು ಮಹಿಳಾ ಸಮಾಜಗಳನ್ನು ಪುನರ್ ಸ್ಥಾಪಿಸಿ ಅವುಗಳಿಗೆ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಂದ ಸಹಾಯಧನ ಕೊಟ್ಟು ಅದನ್ನು ಪುನರ್ ಉದ್ಧರಿಸಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಈ ಮೂಲಕ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಲೆನಾಡಿಗೆ ಸಂಬಂಧಪಟ್ಟಂತೆ ಜನ ಸಂಖ್ಯೆ ತೊಂದರೆಯಾಗುತ್ತದೆನ್ನುವುದು ನಿಜ. ರಿಯಾಯಿತಿ ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ. ಮಹಿಳಾ ಸಮಾಜಗಳಿಗೆ ಸಹಾಯಧನ ಕೊಡುತ್ತಿದ್ದರು ,ಅದನ್ನು ಮತ್ತೆ ಮುಂದುವರಿಸುವಂಥ ಪ್ರಯತ್ನ ಮಾಡುತ್ತೇನೆ. ಇಂಜಿನಿಯರುಗಳಿಗೆ ಹೆಚ್ಚು ಅಧಿಕಾರ ಕೊಡಬೇಕೆಂದು ಹೇಳಿದ್ದಾರೆ, ಇದು ನನ್ನ ಇಲಾಖೆಗೆ ಸಂಬಂಧಪಡುವುದಿಲ್ಲ. ಜಿಲ್ಲಾಪರಿಷತ್‌ಗೆ ಪೂರ್ಣ ಅಧಿಕಾರ ಇರುತ್ತೆ, ಬೇಗ ಚುನಾವಣೆ ಮಾಡಿ ಎನ್ನುವುದೇ ನನ್ನ ಅಭಿಪ್ರಾಯ.

ಶ್ರೀ ಜಿ. ರಾಜುಗೌಡ.—ನ್ಯಾಯ ಪಂಚಾಯ್ತಿಗೆ ಎಷ್ಟು ಮಂಡಲ ಪಂಚಾಯ್ತಿಗಳು ಸೇರುತ್ತವೆ. ಅವುಗಳ ಸ್ವರೂಪ, ಕಾರ್ಯಾಚರಣೆ ಅಧಿಕಾರ ವ್ಯಾಪ್ತಿ ಏನು? ಮಂಡಲ್ ಪಂಚಾಯ್ತಿಗೆ ೪೦ ಕಿಲೋ ಮೀಟರ್ ಒಳಗೆ ಕಡಿಮೆ ಜನಸಂಖ್ಯೆ ಬಂದಾಗ ಏನು ಮಾಡುತ್ತೀರಿ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಸ್ವಾಮಿ ಅವರ ಕ್ಷೇತ್ರಕ್ಕೆ ಸಂಬಂಧಪಟ್ಟಂತ ಪ್ರಶ್ನೆ ಕೇಳುತ್ತಿದ್ದಾರೆ. ೪೦ ಕಿಲೋ ಮೀಟರ್ ದೂರ ಇದ್ದು, ಕಡಮೆ ಜನಸಂಖ್ಯೆ ಇದ್ದರೂ ಕೂಡ ಮಂಡಲ್ ಪಂಚಾಯ್ತಿ ಮಾಡತಕ್ಕ ಅಧಿಕಾರ ಇದೆ. ಈ ಒಂದು ಪ್ರಸ್ತಾವ ಏತಕ್ಕೆ ಬರಲಿಲ್ಲವೋ ನನಗೆ ಗೊತ್ತಿಲ್ಲ. ಚಿಕ್ಕ ಗ್ರಾಮಗಳನ್ನು ಕೂಡ ಗುಡ್ಡಗಾಡು ಪ್ರದೇಶಗಳಲ್ಲಿದ್ದರೆ ಮಂಡಲ ಮಾಡುವುದಕ್ಕೆ ಅವಕಾಶ ಇತ್ತು. ಜಿಲ್ಲಾಧಿಕಾರಿಗಳು ಸರ್ಕಾರದ ಪರವಾನಗಿ ತೆಗೆದುಕೊಂಡು ಮಾಡಬೇಕು. ೫ ವರ್ಷಗಳ ಕಾಲ ನ್ಯಾಯ ಪಂಚಾಯ್ತಿ ಜಾರಿಗೆ ಬರುವುದಿಲ್ಲ. ಆ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಂ. ಶಿವಣ್ಣ.—ಮಿನಿ ವಾಟರ್ ಸ್ಕೀಮುಗಳನ್ನು ಎಲ್ಲೆಲ್ಲಿ ಮಾಡಿದ್ದಾರೆ, ಅವುಗಳು ಕೆಟ್ಟು ಹೋದರೆ ದುರಸ್ತಿ ಮಾಡುವುದಕ್ಕೆ ಹಣ ಇಲ್ಲ. ಪಂಚಾಯ್ತಿ ಹಣದಲ್ಲಿ ಮಾಡುವಂಥ ಯೋಜನೆ ಇದೆ ಪಂಚಾಯ್ತಿಯಲ್ಲಿ ಕೂಡ ಹಣ ಇಲ್ಲ. ಸಾರ್ವಜನಿಕ ಆರೋಗ್ಯ ಇಲಾಖೆಯಿಂದಲೇ ಸರಿಪಡಿಸುವಂಥ ಕ್ರಮ ತೆಗೆದುಕೊಳ್ಳಬೇಕು. ಮಂಡಲ್ ಪಂಚಾಯ್ತಿಗಳು ಪ್ರಾರಂಭವಾದ ಮೇಲೆ, ರಾಷ್ಟ್ರೀಯ ಕಾರ್ಯಕ್ರಮಗಳನ್ನು ಯಾವರೀತಿ ಜಾರಿಗೆ ತರುತ್ತೀರಿ ? ಬಿ.ಡಿ ಓ, ಅಧಿಕಾರಿಗಳ ಕಾರ್ಯ ವ್ಯಾಪ್ತಿ ಏನು ? ಮಂಡಲ್ ಪಂಚಾಯ್ತಿಗೆ ಹಣಕಾಸಿನ ವ್ಯವಸ್ಥೆ ಹೇಗೆ ಮಾಡುತ್ತೀರಿ ? ಮಂಡಲ್ ಪಂಚಾಯ್ತಿಗಳ ಚುನಾವಣೆಯನ್ನು ನಿಖರವಾಗಿ ಯಾವಾಗ ಮಾಡುತ್ತೀರಾ ಎಂಬುದನ್ನು ತಿಳಿಸಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.—ಸ್ವಾಮಿ, ಹಿರಿಯ ಸದಸ್ಯರಾದ ಬಸವಲಿಂಗಪ್ಪನವರು ಮತ್ತು ಖರ್ಗೆಯವರು ಪ್ರಸ್ತಾಪ ಮಾಡಿದಾಗ ಸವಿಸ್ತಾರವಾಗಿ ಹೇಳಿದ್ದೇನೆ. ಮಿನಿ ವಾಟರ್ ಸಪ್ಲೈ ಸ್ಕೀಮುಗಳನ್ನು ಪಿ.ಹೆಚ್.ಇ. ಮುಖಾಂತರ ಸರಿಪಡಿಸುವುದಕ್ಕೂ ಅವಕಾಶ ಇದೆ. ಯಾವುದೇ ವಿಭಾಗದಿಂದ ಹಣ ತೆಗೆದು ಖರ್ಚು ಮಾಡಿದರೂ ಅದೆಲ್ಲವೂ ಪಿ. ಹೆಚ್. ಇ. ಮೂಲಕ ಆಗುವಂತ ವ್ಯವಸ್ಥೆ ಮಾಡುತ್ತೇನೆಂದು ಭರವಸೆ ಕೊಡುತ್ತೇನೆ.

ಶ್ರೀ ಡಿ. ಜಯಕುಮಾರ್.—ಸ್ವಾಮಿ, ಮಾನ್ಯ ನಜೀರ್ ಸಾಹೇಬರು ಗ್ರಾಮೀಣ ಜನತೆಗಾಗಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆ. ಇವತ್ತು ಸರ್ಕಾರದ ಯೋಜನೆಗಳಾದ ಜನತಾ ಮನೆಗಳನ್ನು ಕಟ್ಟುವ ವಿಚಾರದಲ್ಲಾಗಲೀ, ಗ್ರಾಮೀಣ ರಸ್ತೆಯನ್ನು ಮಾಡಿಸುವ ವಿಚಾರದಲ್ಲಾಗಲೀ, ಅಧಿಕಾರಿಗಳು ಕಮೀಷನ್ ಮೂಲಕ ವ್ಯವಹಾರ ಮಾಡುತ್ತಿದ್ದಾರೆ. ಇದನ್ನು ಕಡಿಮೆ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಲಂಚಕೋರ ಅಧಿಕಾರಿಗಳ ಮೇಲೆ ಯಾವ ರೀತಿ ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಅಬ್ದುಲ್ ನಜೀರ್ ಸಾಬ್.—ನಾನು ಅಧಿಕಾರ ವಹಿಸಿಕೊಂಡಮೇಲೆ ೧೯ ಜನ ಬಿ. ಡಿ. ಓ.ಗಳನ್ನು ಸಸ್ಪೆಂಡ್ ಮಾಡಿದ್ದೇನೆ. ಜೂನಿಯರ್ ಇಂಜಿನಿಯರುಗಳ ಮೇಲೆ ಕ್ರಮ ಕೈಗೊಂಡಿದ್ದೇನೆ. ಕಮೀಷನ್ ಮತ್ತು ಏಜೆಂಟ್ ವ್ಯವಹಾರವನ್ನು ನಿಲ್ಲಿಸುವುದಕ್ಕೆ ಜನ ಸಂಘಟನೆ ಮುಖ್ಯವಾದುದು, ಇದನ್ನು ಮಾಡದೇ ಹೋದರೆ, ಅದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಈ ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕು. ಕಂಟ್ರಾಕ್ಟ್ ಪದ್ಧತಿ ಸಂಪೂರ್ಣವಾಗಿ ಹೋಗಬೇಕು. ತಾವು ಬೆಂಬಲ ಕೊಟ್ಟರೆ, ಭೂ ಸೇನೆ ಮುಖಾಂತರ ಕೆಲಸ ಮಾಡಿಸುತ್ತೇನೆ.

ಶ್ರೀ ರಾಮನಾಥ್ ರೈ.—ಸ್ವಾಮಿ, ಮಾನ್ಯ ಮಂತ್ರಿಯವರು ದಕ್ಷಿಣ ಕನ್ನಡ ಜಿಲ್ಲೆಯ ಉಸ್ತುವಾರಿ ಮಂತ್ರಿಗಳು ಕೂಡ ಆಗಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಗುಡಿ ಕೈಗಾರಿಕೆಗಳನ್ನು ಪ್ರಾರಂಭಿಸಬೇಕೆಂದು ಜಿಲ್ಲಾ ಅಭಿವೃದ್ಧಿ ಮಂಡಲಿಯಲ್ಲಿ ನಿರ್ಧಾರ ಕೈಗೊಳ್ಳಲಾಗಿತ್ತು. ಅದಕ್ಕೆ ಪೂರಕವಾಗಿ ಪುತ್ತೂರು ತಾಲ್ಲೂಕಿನಲ್ಲಿ ಒಂದು ತರಬೇತಿ ಕೇಂದ್ರವನ್ನು ಮಾಡುತ್ತೇವೆಂದು ಮಂತ್ರಿಗಳು ಭರವಸೆ ಕೊಟ್ಟಿದ್ದರೂ ಇದುವರೆಗೆ ಅದು ಆಗಿಲ್ಲ, ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ! ಮಂಡಲ್ ಪಂಚಾಯ್ತಿಯ ವ್ಯಾಪ್ತಿಯಲ್ಲಿ ಪ್ರವೇಶ ತೆರಿಗೆಯನ್ನು ಹಾಕಿರುವುದರಿಂದ ಗ್ರಾಮೀಣ ಪ್ರದೇಶದ ಜನರ ಮೇಲೆ ದೊಡ್ಡ ಹೊರೆ ಬಿದ್ದಂತಾಗಿದೆ. ಇದನ್ನು ನಿವಾರಣೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ? ಪುತ್ತೂರು ತಾಲ್ಲೂಕಿನ ಕಂಕ್ಕನಡಕ ಗ್ರಾಮದಲ್ಲಿ ಮಿನಿ ವಾಟರ್ ಸ್ಕೀಂ ಮಂಜೂರಾಗಿದ್ದರೂ, ಅಲ್ಲಿ ಕೆಲಸ ನಡೆಯುತ್ತಿಲ್ಲ, ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಮಂಜೂರು ಆಗಿರತಕ್ಕ ಮಿನಿವಾಟರ್ ಸ್ಕೀಂ ಅನ್ನು ಮಾರ್ಚಿ ಒಳಗೆ ಮುಗಿಸಬೇಕೆಂದು ಆದೇಶ ಕೊಡುತ್ತೇನೆ. ಇದಕ್ಕೆ ಹಣದ ಕೊರತೆ ಇಲ್ಲ. ಪ್ರವೇಶ ತೆರಿಗೆ ಹಾಕಿರುವುದು ಸಂಪನ್ಮೂಲಗಳನ್ನು ಹೆಚ್ಚಿಸುವುದಕ್ಕಾಗಿ, ಬಂದ ಹಣದಿಂದ ಹಳ್ಳಿಗಾಡಿನ ಅಭಿವೃದ್ಧಿ ಮಾಡುವುದಕ್ಕೆ ಇದಕ್ಕೆಲ್ಲಾ ತಾವು ಸಹಕಾರವನ್ನು ಕೊಡಬೇಕು. ೧೯೮೬–೮೭ನೇ ಸಾಲಿನಲ್ಲಿ ಪುತ್ತೂರಿನಲ್ಲಿ ತರಬೇತಿ ಕೇಂದ್ರವನ್ನು ಮಾಡಲು ಜಿಲ್ಲಾಧಿಕಾರಿಯವರಿಗೆ ಆದೇಶ ಕೊಡುತ್ತೇನೆ.

ಅಧ್ಯಕ್ಷರು.—ಇಲ್ಲಿಗೆ ಚರ್ಚೆಗೆ ವಿವರಣೆ ಮುಕ್ತಾಯವಾಯಿತು. ನಾನು ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ :

"೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ ೫೪, ೫೫, ೫೬ ೫೭, ೫೮, ೫೯ ಮತ್ತು ೬೦ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗುಗಳನ್ನು ಮಂಜೂರು ಮಾಡಬೇಕು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ.)

ಅಭಿಯಾಚನೆ ಕ್ರಮಾಂಕ—೫೪ ವಕ್ಫ್

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಕ್ಫ್‌ಗೆ, ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೭೪,೬೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ—೫೫ ಸಹಕಾರ (ಕ್ರಮಪಡಿಸಿದ ಮಾರುಕಟ್ಟೆಗಳ ಹೊರತು)

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಹಕಾರಕ್ಕೆ (ಕ್ರಮಪಡಿಸಿದ ಮಾರುಕಟ್ಟೆಗಳ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೮,೯೩,೨೩,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೪,೩೮,೪೫,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ—೪೬ ಕ್ರಮಪಡಿಸಿದ ಮಾರುಕಟ್ಟೆಗಳು

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕ್ರಮಪಡಿಸಿದ ಮಾರುಕಟ್ಟೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೬,೪೭,೮೧,೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ—೪೭ ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೭೨,೬೨,೬೪,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ—೪೮ ಸಾಮುದಾಯಿಕ ಅಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಾಮುದಾಯಿಕ ಅಭಿವೃದ್ಧಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೯,೭೬,೮೨,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೬,೦೦,೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ—೪೯ ಗ್ರಾಮಾಂತರ ಸಂಘಟನಾ ಅಭಿವೃದ್ಧಿ ಯೋಜನೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗ್ರಾಮಾಂತರ ಸಂಘಟನಾ ಅಭಿವೃದ್ಧಿ ಯೋಜನೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೦,೭೫,೦೮,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ—೫೦ ಗ್ರಾಮೀಣ ಉದ್ಯೋಗ ಯೋಜನೆ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸರಕಾರಕ್ಕೆ ಗ್ರಾಮೀಣ ಉದ್ಯೋಗ ಯೋಜನೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ರಾಜಸ್ವ ಖಾತೆಯಲ್ಲಿ ೪೪,೫೭,೯೮,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದೂ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಪ್ರಶ್ನೋತ್ತರಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಗ್ರಾಮೀಣ ಮಟ್ಟದಲ್ಲಿ ನಡೆಯುವ ಜನ ಸಂಪರ್ಕ ಸಭೆ

೧೧೭೧. ವಿನಯ ಕುಮಾರ್ ಸೊರಕೆ (ಪುತ್ತೂರು).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗ್ರಾಮೀಣ ಮಟ್ಟದಲ್ಲಿ ನಡೆಯುವ ಜನ ಸಂಪರ್ಕ ಸಭೆಗಳ ಕಾರ್ಯ ವಿಧಾನದ ವಿಚಾರ

ಆ) ಪುತ್ತೂರು ತಾಲ್ಲೂಕಿನಲ್ಲಿ ನಡೆಯುವ ಜನ ಸಂಪರ್ಕ ಸಭೆಯ ಕಾರ್ಯ ವಿಧಾನದ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ;